
# ಅಪರಂಜಿ

ತಿಳಿನಗೆಯ ಕಾರಂಜಿ


ಮಾರ್ಚ್ 2026




ಬಿಡಿ ಪ್ರತಿ: ರೂ. 10/–

# ಸುಮ್ನೆ ತಮಾಷೆಗೆ !!!

ರಾಂಕಿ ಬೆಳ್ಳೂರ್



# M P BIRLA INSTITUTE OF MANAGEMENT

*Associate Bharatiya Vidya Bhavan*

**APPROVED BY AICTE & AFFILIATED TO**
**DR. MANMOHAN SINGH BENGALURU CITY UNIVERSITY**

**DUAL SPECIALISATIONS OF YOUR CHOICE**
Marketing/Finance/HRM/
Business Analytics

## TWO YEAR FULL TIME MBA DEGREE AT BENGALURU

# ADMISSION OPEN

**2026-2028**

A distinguished standalone B-School in Bengaluru situated in the heart of the city.





## WHY MBA at MPBIM ?

- Achieved a 98% pass rate over the past 25 years.
- Excellent placement opportunities and paid internships.
- Faculty with strong industry credentials and academic qualifications.
- Value-added courses designed for industry needs.
- Industry connect events through Business Leadership Forum.
- Industrial visits for practical experience insights.
- Collaboration with North Dakota State University, USA and Bhavan's Management Institution.
- State-of-the-art Computer laboratory.
- Power BI, Tableau, and R programming.

**AN INNOVATIVE MBA PROGRAM OFFERING INTENSIVE BUSINESS MANAGEMENT EDUCATION.**

**SHAPE YOUR FUTURE WITH AN MBA PROGRAM AT A LEADING MANAGEMENT INSTITUTION IN BANGALORE.**

### ADMISSION PROCESS

Eligibility: Any Graduate with 50% aggregate or above.
Admission through MAT/CAT/CMAT or any other recognised Aptitude Test.





**For Admission Contact:**
+91 99022 52842 / 99022 52981

www.mpbim.com
contact@mpbim.com

**M P Birla Institute of Management**
Associate Bharatiya Vidya Bhavan
43, Race Course Road, Bengaluru-560 001
Phone: 080-4277 2000

Published on 3rd of every month.
Mailed at Patrika channel RMS Bhavan,
Bengaluru PSO, Mysore Road, Bengaluru – 560026
On 5th of every month.

REGISTERED KA/BGW/544/2025-2027
RNI No KARKAN/2005/15457




Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 40+4 APARANJI KANNADA MONTHLY.

# ಅಪರಂಜಿ

ತಿಳಿನಗೆಯ ಕಾರಂಜಿ



ಸಂಪುಟ 43
ಸಂಚಿಕೆ – 06
ಮಾರ್ಚ್–2026

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್. ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ
ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/-
ಹತ್ತು ವರ್ಷದ ಚಂದಾ: ರೂ. 1000/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣವನ್ನು ಆನ್‌ಲೈನ್ ಮೂಲಕ ಕಳುಹಿಸಿ. ಬ್ಯಾಂಕ್ ವಿವರಗಳನ್ನು ಕೆಳಗೆ ನೀಡಿದೆ. ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

## ಈ ಸಂಚಿಕೆಯಲ್ಲಿ...

| | | |
|---|---|---|
| ಕಿಡಿ | ಪ್ರಕಾಶ್ | 2 |
| ಅವಿಸ್ಮರಣೀಯ ನಗೆಗಾರರು – 8 | ಶಿವಕುಮಾರ್ | 3 |
| ಒಂದು ಕೈ ಗೆ ಜೈ ಅನ್ನಿ | ಕೆ.ಎಸ್.ಸೋಮೆಶ್ವರ | 8 |
| ನನ್ನ ಮೊದಲ ಫ್ಲರ್ಟ್! | ಎನ್.ವಿ.ರಘುರಾಮ್ | 10 |
| ಅಪರಂಜಿತಾ ಪ್ರಸಂಗ | ಸಿ ಪಿ ರವಿಕುಮಾರ್ | 14 |
| ಪುಸ್ತಕ ಪರಿಚಯ : ನಾಕೊಂದ್ಲ ನಾಕು | | 18 |
| ಪುಸ್ತಕ ಪರಿಚಯ : ಚೆಲ್ಲಿದರು ಮಲ್ಲಿಗೆಯ | | 19 |
| ತುಂತುರು | ದಂನಆ | 22 |
| ಬೆಂಗಳೂರಿನ ಕೆರೆ, ಗುಂಡಿಗಳ....... | ಇ.ಆರ್. ರಾಮಚಂದ್ರನ್ | 23 |
| ವ್ಯಂಗ್ಯಚಿತ್ರಗಳ ಸಂಗ್ರಹಾಲಯದಲ್ಲಿ..... | ಸಿ.ಎ.ವಿಲಾಸ ನಾ ಹುದ್ದಾರ | 25 |
| ಮೊಮ್ಮಗನ ಟ್ರೀಟ್ | ಡಾ. ಶ್ಯಾಮಲಾ ರವಿಶಂಕರ್ | 29 |
| ವನಭೋಜನದ ಒಳಗೆ ಹೊರಗೆ | ಸುಕೇಶವ | 32 |
| ಭಾರ ಎತ್ತೋಣ ಬಾರಾ | ಸುಮಾ ರಮೇಶ್, ಹಾಸನ | 36 |
| ಉಪಹಾರ ಪ್ರಕರಣವೂ | ರಮೇಶಚಂದ್ರ | 39 |

ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ ಬೆಳ್ಳೂರ್
ಒಳಪುಟಗಳು : ರಾಂಕಿ ಬೆಳ್ಳೂರ್

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,
email: koravanjiaparanji@gmail.com ಮೊಬೈಲ್: 9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ.
ನಂ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು–560068. email: belururamamurthy@gmail.com

**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್, ಇಂಡಸ್ಟ್ರಿಯಲ್ ಟೌನ್ ರಸ್ತೆ, ರಾಜಾಜಿನಗರ, ಬೆಂಗಳೂರು–560010*



# ಅಪರಂಜಿ ಕಿಡಿ

● ಪ್ರಕಾಶ್

ಪ್ರಧಾನ ಮಂತ್ರಿ ಕೌಶಲ್ಯಾಭಿವೃದ್ಧಿ ಯೋಜನೆ;
ಹತ್ತು ಸಾವಿರ ಕೋಟಿಗೆ ಲೆಕ್ಕ ಸಿಕ್ಕಿಲ್ಲ.

– ದಿನಪತ್ರಿಕೆ.

ಕುಬೇರ ಬೆಚ್ಚಿಬಿದ್ದನಂತೆ.

* * * *

"ಮುಖಭಂಗ ತಪ್ಪಿಸಿಕೊಂಡ ಇಂಗ್ಲೆಂಡ್"

– ಪತ್ರಿಕೆ

ಕ್ರಿಕೆಟ್ ಸುದ್ದಿ ಅಷ್ಟೆ !!

* * * *

ಶಶಿ ತರೂರ್ ಅವರು ಲೋಕಸಭೆಯಲ್ಲಿ ಬಜೆಟ್ ಬಗ್ಗೆ
ಕವಿತೆಯೊಂದನ್ನು ಓದಿದರಂತೆ.
"ಇಟ್ ಫೆಲ್ ಆನ್ ಡೆಫ್ ಇಯರ್ಸ್" ಅನ್ನಬಹುದು !!

* * * *

"ವ್ಯಂಗ್ಯ ಚಿತ್ರಗಳ ಮೊನಚು ಉಳಿಯಲಿ"

– ಖ್ಯಾತ ವ್ಯಂಗ್ಯಚಿತ್ರಕಾರ ಮೋಹನ್

ಅಪರಂಜಿ ತಥಾಸ್ತು ಅಂದಳಂತೆ !!

* * * *

ಬೆಳ್ಳಿಯ ಬೆಲೆಯು ಒಂದೇ ದಿನದಲ್ಲಿ ರೂ. 11500/– ಏರಿಕೆ.

– ವಾಣಿಜ್ಯ ಸುದ್ದಿ

ಸಧ್ಯ ನಮಗೆಂದೂ ಇದು ಭಯ ತರದಂತಹ ಸುದ್ದಿ !!

* * * *

"ನಕಲಿ ಗುರೂಜಿ" ಬಂಧನ : ಅಪಾರ ಹಣ ಜಪ್ತಿ

– ಪತ್ರಿಕೆ

ಗಾಢವಾದ ಅಜ್ಞಾನಕ್ಕೆ ಮದ್ದುಂಟೆ ?

* * * *

ಭ್ರಷ್ಟಾಚಾರದ ನಿವಾರಣೆಗೆ ಜನ ಜಾಗೃತಿ ಮುಖ್ಯ

– ಹೇಳಿಕೆ

ಜನ ಅಂದರೆ ಅದರಲ್ಲಿ ಭ್ರಷ್ಟಾಚಾರಿಗಳೂ ಸೇರಿರುವರೋ?

* * * *

**ಅವಿಸ್ಮರಣೀಯ ನಗೆಗಾರರು–8**

# ನಾ ಕಸ್ತೂರಿ

**ಶಿವಕುಮಾರ್**



ಕೊರವಂಜಿಯ ಹುಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಶ್ರೀ ನಾ. ಕಸ್ತೂರಿಯವರೊಂದಿಗೆ ನಮ್ಮ ತಂದೆ ರಾಶಿಯವರ ಒಡನಾಟ ಪ್ರಾರಂಭವಾದದ್ದು ನಲವತ್ತರ ಇಸವಿಯ ಸುಮಾರಿನಲ್ಲಿ. ಆ ದಿನಗಳಲ್ಲಿ ರಾಶಿಯವರು ವಾರಕ್ಕೊಮ್ಮೆ ಸೆಂಟ್ರಲ್ ಕಾಲೇಜಿನ ಹಾಸ್ಟೆಲ್ಲಿಗೆ ಭೇಟಿನೀಡಿ, ಅಲ್ಲಿನ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ನಡೆಸುತ್ತಿದ್ದರು. ವಿದ್ಯಾರ್ಥಿಗಳೊಂದಿಗಿನ ಒಡನಾಟ ರಾಶಿಯವರಿಗೆ ಬಹು ಅಪ್ಯಾಯಮಾನ. ದೈಹಿಕ ಪರಿಶೀಲನೆ ನಡೆಸುತ್ತಿರು–ವಂತೆಯೇ, ನಗೆ ಚಟಾಕಿಗಳೂ ರಾಶಿಯವರಿಂದ ನಿರ್ಗಳವಾಗಿ ಹರಿದುಬರುತ್ತಿತ್ತು. ಇದರಿಂದಾಗಿ ಹಾಸ್ಟೆಲ್ಲಿಗೆ ಡಾಕ್ಟರು ಬಂದರೆಂದರೆ ಆರೋಗ್ಯವಾಗಿರುವ ಹುಡುಗರೂ ಅವರ ಬಳಿ ಬಂದು ನಿಂತು ಅವರ ಹೈ ವೋಲ್ಟೇಜ್ ಮಾತುಕತೆಗಳನ್ನು ಆಲಿಸುವುದು ವಾಡಿಕೆಯಾಗಿತ್ತು. ಹೀಗೆ ಬಂದು ನಿಲ್ಲುತ್ತಿದ್ದ ಹುಡುಗ ಪಾಳ್ಯದಲ್ಲಿ ಇದ್ದ ಒಬ್ಬ ಹುಡುಗ ನಾರಾಯಣ ಮೂರ್ತಿ. ಒಮ್ಮೆ ರಾಶಿಯವರು ಕಾನಕಾನಹಳ್ಳಿಯಲ್ಲಿ ನಡೆದ ಕೋಮು ಗಲಭೆಯನ್ನು ಕುರಿತು ಹೇಳುತ್ತಾ, "ಇನ್ನು ಮೇಲೆ ಈ ಹಳ್ಳಿಯನ್ನು ಖಾನ್ ಖಾನ್ ಹಳ್ಳಿ ಎಂದು ಕರೆಯಬಹುದಲ್ವೇ?" ಎಂದು ನಗಾಡಿದಾಗ, ನಾರಾಯಣ ಮೂರ್ತಿ, "ನಮ್ಮ ತಂದೆ ಕೂಡ ನಿಮ್ಮ ತರಹಾನೇ ಮಾತಾಡ್ತಾರೆ. ನೀವು ಅವರನ್ನು ಭೇಟಿ ಆಗಬೇಕು." ಅಂತ ಅಂದನಂತೆ. "ಯಾರು ನಿಮ್ಮ ತಂದೆ?" ಅಂತ ರಾಶಿ ಪ್ರಶ್ನಿಸಿದಾಗ "ಅವರು ನಾ. ಕಸ್ತೂರಿ ಅಂತ. ಮೈಸೂರಿನಲ್ಲಿದ್ದಾರೆ" ಅಂತ ಉತ್ತರ ಬಂತು. ಸರಿ, ಮಾರನೆಯ ದಿನ ಭಾನುವಾರ ರಾಶಿಯವರು ನಾರಾಯಣ ಮೂರ್ತಿಯನ್ನು ತಮ್ಮ ಕಾರಿನಲ್ಲಿ ಕೂರಿಸಿಕೊಂಡು ನಾ. ಕಸ್ತೂರಿಯವರನ್ನು ಭೇಟಿ ಮಾಡಲು ಮೈಸೂರಿಗೆ ಪ್ರಯಾಣ ಬೆಳೆಸಿದರು.

ಇಂಗ್ಲೀಷಿನ ನಗೆ ಪತ್ರಿಕೆ ಪಂಚ್, ರಾಶಿಯವರ ವಿದ್ಯಾರ್ಥಿ ದೆಸೆಯಿಂದಲೇ ಅವರ ಮೇಲೆ ಬಹುವಾಗಿ ಪ್ರಭಾವ ಬೀರಿತ್ತು. ಕನ್ನಡದಲ್ಲಿ ಇಂತಹ ಒಂದು ಪತ್ರಿಕೆಯನ್ನು ಹೊರತರಲು ರಾಶಿ ಉತ್ಸುಕರಾಗಿದ್ದರು. ಕಸ್ತೂರಿಯವರಂತಹ ಪ್ರತಿಭಾವಂತರೊಂದಿಗಿನ ಭೇಟಿ ರಾಶಿಯವರ ಈ ಉತ್ಸಾಹಕ್ಕೆ ಒಂದು ಮೂರ್ತ ಸ್ವರೂಪವನ್ನು ನೀಡುವುದರಲ್ಲಿ ಯಶಸ್ವಿಯಾಯಿತು. ಇಬ್ಬರು ಸಮಾನ ಮನಸ್ಕರ ಅವಿರತ ಶ್ರಮದಿಂದ 1943ನೇ ಮಾರ್ಚ್ ಹದಿನಾರರಂದು ಕೊರವಂಜಿಯ ಮೊದಲ ಸಂಚಿಕೆ ಮಾರುಕಟ್ಟೆಗೆ ಬಿಡುಗಡೆಯಾಯಿತು.

ನಾ. ಕಸ್ತೂರಿ ಎಂದು ಖ್ಯಾತರಾದ ನಾರಾಯಣ ಕಸ್ತೂರಿ ರಂಗನಾಥ ಶರ್ಮ ಅವರು ಕೇರಳದ ತಿರುಪುನಿತ್ತೂರ್ ಗ್ರಾಮದಲ್ಲಿ ಜನಿಸಿದರು. ತಮ್ಮ ಪ್ರತಿಭೆ ಹಾಗೂ ಪರಿಶ್ರಮದ ಫಲದಿಂದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಐದನೆಯ ಸ್ಥಾನ ಪಡೆದರು. ಮುಂದಿನ ಎರಡು ವರ್ಷ ವಿದ್ಯಾರ್ಥಿ ವೇತನದ ಸಹಾಯದಿಂದ ಎರ್ನಾಕುಲಂ ಮಹಾರಾಜಾ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ ಓದಿದರು. ರಾಜ್ಯಕ್ಕೆ ಎರಡನೆಯ

ಸ್ಥಾನ ಪಡೆದ ಕಸ್ತೂರಿ ತಿರುವನಂತಪುರದ ಮಹಾರಾಜಾ ಕಾಲೇಜಿನಲ್ಲಿ ಬಿ.ಎ.ಆನರ್ಸ್ ಪದವಿ ಪಡೆದರು. ತಿರುವನಂತ ಪುರದಲ್ಲಿ ಪ್ರೌಢಶಾಲೆಯ ಅಧ್ಯಾಪಕನ ನೌಕರಿ ಹಿಡಿದ ಕಸ್ತೂರಿ ಸಂಜೆ ಕಾಲೇಜಿನಲ್ಲಿ ಕಾನೂನು ಶಾಸ್ತ್ರದ ವ್ಯಾಸಂಗಮಾಡುತ್ತಿದ್ದರು. ಅದೇ ಸಮಯದಲ್ಲಿ ದಾಮೋದರನ್ ಪೊಟ್ಟಿ ಎಂಬುವರು ನಡೆಸುತ್ತಿದ್ದ "ಪೀಪಲ್ಸ್ ಫ್ರೆಂಡ್" ಎನ್ನುವ ಮಾಸಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದರು. ತಮ್ಮ ಹೈಸ್ಕೂಲು ಹಾಗೂ ಕಾನೂನು ಕಾಲೇಜುಗಳಲ್ಲಿ ನಾಟಕಗಳನ್ನು ಬರೆದು ಆಡಿಸಿದರು. ನಾಟಕಗಳಿಂದ ಸಂಗ್ರಹವಾದ ನಿಧಿಯನ್ನು ಬಡ ವಿದ್ಯಾರ್ಥಿಗಳ ನೆರವಿಗೆ ನೀಡುವುದು ಇವರ ಪರಿಪಾಠವಾಗಿತ್ತು. ಮೈಸೂರಿನ ಡಿ.ಬಿ.ಸಿ. ಹೈಸ್ಕೂಲಿನಿಂದ ಕಸ್ತೂರಿಯವರ ಕರ್ನಾಟಕದ ನಂಟು ಪ್ರಾರಂಭವಾಯಿತೆನ್ನಬಹುದು. ಇದರ ನಂತರ ಕಸ್ತೂರಿಯವರು ಡಿ.ಬನುಮಯ್ಯ ಕಾಲೇಜಿನಲ್ಲಿ ಉಪನ್ಯಾಸಕರಾದರು. ಚರಿತ್ರೆ, ಇಂಗ್ಲೀಷ್ ಹಾಗೂ ಅರ್ಥಶಾಸ್ತ್ರಗಳನ್ನು ಬೋಧಿಸುವುದರ ಜೊತೆಗೆ ಕಾಲೇಜು ಪತ್ರಿಕೆಯನ್ನೂ ನಡೆಸುತ್ತಿದ್ದರು. ಈ ಸಮಯದಲ್ಲಿ ಡಾ॥ ಎಂ.ವಿ.ಗೋಪಾಲಸ್ವಾಮಿಯವರ ಪ್ರಯತ್ನದ ಫಲವಾಗಿ ಮೈಸೂರು ಆಕಾಶವಾಣಿ ಪ್ರಾರಂಭವಾಯಿತು. "ಆಕಾಶವಾಣಿ" ಎಂಬ ಹೆಸರನ್ನು ಸೂಚಿಸಿದವರೂ ಕಸ್ತೂರಿಯವರೇ. ಪೂರ್ಣಾವಧಿ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಆಕಾಶವಾಣಿಯಲ್ಲಿ ಇವರು ಕೆಲ ಕಾಲ ಸೇವೆ ಸಲ್ಲಿಸಿದರು.

ರಾಶಿಯವರೊಂದಿಗೆ ಕೈ ಜೋಡಿಸಿ ಕೊರವಂಜಿಯನ್ನು ಪ್ರಾರಂಭಿಸಿದಾಗ ಬಹು ಪಾಲು ಲೇಖನಗಳನ್ನು ಕಸ್ತೂರಿ ಮತ್ತು ರಾಶಿಯವರೇ ಬೇರೆ ಬೇರೆ ಕಾವ್ಯನಾಮಗಳಲ್ಲಿ ಬರೆದು ತುಂಬಿಸುತ್ತಿದ್ದರು.ಕಸ್ತೂರಿಯವರು ಖಾರಂತ, ಪಾಟಾಳಿ, ನಾ.ಕ. ಇವೇ ಮುಂತಾಗಿ ಹತ್ತು ಹಲವಾರು ಹೆಸರುಗಳಡಿಯಲ್ಲಿ ಬರಹಗಳನ್ನು ಹೊಂದಿಸುತ್ತಿದ್ದರು. ಕೊರವಂಜಿಗೆ ವ್ಯಂಗ್ಯಚಿತ್ರಗಳನ್ನು ಒದಗಿಸುವ ಪ್ರಯತ್ನದಲ್ಲಿ ಕಸ್ತೂರಿಯವರ ಪಾತ್ರ ಹಿರಿದು. ತಮ್ಮ ಪರಿಚಯದ ವಿದ್ಯಾರ್ಥಿ ಆರ್.ಕೆ.ಲಕ್ಷ್ಮಣ್ ನ ಮನವೊಲಿಸಿ ಪತ್ರಿಕೆಯ ಮೊದಲ ಮೂರು ನಾಲ್ಕು ವರ್ಷಗಳ ಅವಧಿಯಲ್ಲಿ ಲಕ್ಷ್ಮಣ್ ರಿಂದ ನೂರಾರು ವ್ಯಂಗ್ಯ ಚಿತ್ರಗಳನ್ನು ಬರೆಸಿದ್ದು ನಾ. ಕಸ್ತೂರಿ. ಕೊರವಂಜಿಯನ್ನು ಪ್ರಾರಂಭಿಸಿದಾಗ ರಾಶಿ ಬೆಂಗಳೂರಿನಲ್ಲಿದ್ದು, ಕಸ್ತೂರಿಯವರು ಮೈಸೂರಿನಲ್ಲಿ ಇದ್ದುದರಿಂದ ಇವರಿಬ್ಬರ ನಡುವೆ ವಿಚಾರ ವಿನಿಮಯ ನಡೆಯುತ್ತಿದ್ದುದು ಪತ್ರವ್ಯವಹಾರದ ಮೂಲಕ. ಕೊರವಂಜಿಯ ಮೊದಲ ಸಂಚಿಕೆಯನ್ನು ನೋಡಿದನಂತರ ಕಸ್ತೂರಿಯವರು ರಾಶಿಯವರಿಗೆ ಬರೆದ ಪತ್ರದ ಒಕ್ಕಣೆ ಇಂತಿದೆ.

21. 3. 42

ಡಾ॥ ಶಿವರಾಂ ಅವರಿಗೆ,

15ನೇ ತಾರೀಖು ಕಳುಹಿಸಿದ ಚಿತ್ರವನ್ನು 16ರಕ್ಕೆ ಬ್ಲಾಕು ಮಾಡಿಸಿ 17ಕ್ಕೆ ಅಚ್ಚು ಹಾಕಿಸಿ 18ಕ್ಕೆ ಕಳುಹಿಸಿದ ನಿಮ್ಮ ಸಾಹಸ ಕೊಂಡಾಡತಕ್ಕದ್ದೇ. ಈ ಸಲದ ಪ್ರಜಾಮತದಲ್ಲಿನ ಪ್ರಕಟಣೆಯನ್ನು ನೋಡಿದೆ.

ಪರವಾಗಿಲ್ಲ. ನಾವೇನೂ ತಲೆ ತಗ್ಗಿಸಬೇಕಾಗಿಲ್ಲ. ಇದ್ದದ್ದರಲ್ಲಿ ಚೆನ್ನಾಗಿಯೇ ಇದೆ.

ಕವರಿನ ಮೇಲೆ ವಿಷಯಾನುಕ್ರಮಣಿಕೆಯನ್ನು ಇಷ್ಟು ವಿವರ ಮಾಡಬೇಕಾಗಿರಲಿಲ್ಲ ಅಲ್ಲವೇ ? ಚಿತ್ರಕಾರರು ಆರ್.ಕೆ.ಲಕ್ಷ್ಮಣ್ ಅಂತ ಸೇರಿಸಬಹುದೆಂದು ತೋರುತ್ತದೆ. ಪಿನ್ ಹಾಕುವ ಪದ್ಧತಿ ತಪ್ಪಬಹುದೆಂದು ತೋರುತ್ತದೆ.

ಕವರಿನ ಎರಡನೇ ಪುಟದಲ್ಲಿ ಕಂಟೆಂಟ್ಸ್ ಹಾಕಬಹುದು. ಪ್ರೂಫ್ ತಿದ್ದುವಿಕೆ

ಬಹಳ ಅವ್ಯವಸ್ಥೆ. ನನ್ನ ಅಣಕವಾಡುಗಳಲ್ಲಿ ಅನೇಕ ತಪ್ಪುಗಳಿವೆ. ಹಸುಗೂಸು ಹಲಸುಗೂಸಾಗಿದೆ. "ಮರಮಾತ್ಮ" ಎಂಬ ನನ್ನ ಹಾಸ್ಯಪ್ರಯೋಗ ಅರ್ಥಪೂರ್ಣ ಪರಮಾತ್ಮನಾಗಿ ಬಿಟ್ಟಿದೆ.

ಮ್ಯಾಗಜೀನ್ ಇನ್ನೂ ಸ್ವಲ್ಪ ಹೆಚ್ಚು ಪ್ರತಿಗಳನ್ನು ಅಚ್ಚಿಸಬಹುದೆಂದು ತೋರುತ್ತದೆ. ಟೈಪನ್ನು ಚೆನ್ನಾಗಿ ಬ್ರಷ್ ಮಾಡಬೇಕು. ಕೊಳೆ ಬಹಳ.

ಆರ್.ಕೆ.ಎಲ್. ಗೆ ಹತ್ತು ರೂ ಕೊಟ್ಟೆ. ಆತನ ಹೆಸರನ್ನೂ ಕೊಟ್ಟರೆ ಹೆಚ್ಚು ತೃಪ್ತಿ ಆದೀತು.

ನಾ..ಕ.

ರಾಶಿ ಮತ್ತು ಕಸ್ತೂರಿಯವರ ನಡುವೆ ಇದ್ದ ಅನ್ಯೋನ್ಯ ಬಾಂಧವ್ಯ, ಗೆಳೆತನ ಈ ಪತ್ರವನ್ನು ನೋಡಿದಾಗ ಅರಿವಾಯಿತು.

ಕಸ್ತೂರಿಯವರ ಹಾಸ್ಯ ವುಡ್‌ಹೌಸ್‌ನ ಹಾಸ್ಯದಂತೆ ಅಮಾಯಕ ಹಾಸ್ಯ. ಗೇಲಿ ಮಾಡುವ ಹಾಸ್ಯವಲ್ಲ. ಕೊರವಂಜಿಯ ಮೊದಲಸಂಚಿಕೆಯಲ್ಲಿ ಕಸ್ತೂರಿಯವರು ಬರೆದ ಈ ಸರ್ವಜ್ಞ ಪದಗಳನ್ನು ಸ್ವಲ್ಪ ನೋಡಿ.

ಪೊಳ್ಳು ಕಗ್ಗವ ಗೀಚಿ, ಕನ್ನಡಂ ಗೆಲ್ಗೆಂದು

ಹಲ್ಲಿಕಿರಿದಾಕೆಗೆ ಕೊಡುವಾತ ಕೇಸರಿಗೆ

ಹುಲ್ಲುಕೊಟ್ಟಂತೆ ಸರ್ವಜ್ಞ

ಕನ್ನಡದಿ ಇಂಗ್ಲೀಷ ಕಿಂಚಿತ್ತು ಬೆರೆಸದಿರು

ಸಿನ್ನುಗಳ ಲಿಸ್ಟಿನಲಿ ಹೈಯೆಸ್ಟು ಅದರಿಂದ

ಫನ್ನಿಗೂ ಮಿಕ್ಸದಿರು ಸರ್ವಜ್ಞ

ಕಸ್ತೂರಿಯವರ ನಗೆ ಪ್ರಜ್ಞೆಗೆ ಅತ್ಯುತ್ತಮ ಉದಾಹರಣೆಯೆಂದರೆ ಅವರ "ಬೆರಣಿ ಬೀರಮ್ಮ" ಪ್ರಸಂಗ. ಮೇ 1943 ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಈ ನಗೆ ಲೇಖನ, ಇಂದಿಗೂ ನನ್ನ ಮನಸ್ಸಿನಲ್ಲಿ ಹಸಿರಾಗಿದ್ದು, ನೆನಪಿಸಿಕೊಂಡಾಗಲೆಲ್ಲಾ ಮಂದಹಾಸ ಮೂಡುತ್ತದೆ. ಇಲ್ಲಿ ನೋಡಿ.

ಬೆರಣಿ ಬೀರಮ್ಮನಿಗೆ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಮೈಸೂರಿನ ಸ್ಥಿತಿಗತಿಗಳು ಚೆನ್ನಾಗಿ ಗೊತ್ತು. ಅಂದಿನಿಂದ ಇಂದಿನವರೆಗೂ ಆಗಿರುವ ರೈಲು ತಂತಿ, ಬಸ್ಸು, ಇನಾಕ್ಯುಲೇಷನ್, ವಿಮಾನ, ಇನ್‌ಪ್ಲೂಯೆನ್ಜ ಮುಂತಾದುವುಗಳನ್ನೆಲ್ಲಾ ಕುರಿತು ಅವಳು ಸದಾ ಹೇಳುತ್ತಿರುತ್ತಾಳೆ. ಆಗಿನ ಕಾಲದಿಂದ ಅವಳು ಬೆರಣಿಯನ್ನೇ ಮಾರಿ ಜೀವನ ನಡೆಸುತ್ತಿದ್ದಾಳೆ. ಈಚೀಚೆಗೆ ಅವಳಿಗೆ ಲೆಕ್ಕ ಮಾತ್ರ ಕೊಂಚ ತಪ್ಪುತ್ತೆ. ಅದೂ ಕೂಡ ಮರವೆಯಿಂದಲ್ಲ, ಮಾತಿನ ರಗಳೆಯಿಂದ.

"ಬೀರಮ್ಮಾ ! ಎಷ್ಟಿದೆ ಬೆರಣಿ ?" ಅಂದರೆ ಸರಿ, ಬಾಗಿಲ ಬಳಿ ನಿಂತು "ಸುಮಾರು ನೂರು ಜೊತೆ ಇದೆ ಅಮ್ಮ" ಅನ್ನುತ್ತಾಳೆ. "ಚೆನ್ನಾಗಿ ಒಣಗಿದೆಯೋ ?" ಅಂತ ನೀವು ಅನುಮಾನಿಸಿದರೆ, "ತುಪ್ಪ ಹುಯ್ದ ಹಾಗೆ ಉರೀತದೆ" ಅನ್ನುತ್ತಾಳೆ. "ಹಾಗಾದರೆ ಒಂದು ಅರವತ್ತು ಜೊತೆ ಕೊಡು" ಅಂತ ನೀವು ಕುಕ್ಕೆ ಹಿಡಿದರೆ, ಬೀರಮ್ಮ ಹೊರೆ ಇಳಿಸಿ ಎಣಿಸುವುದಕ್ಕೆ ಪ್ರಾರಂಭ. ಕೈಗೆ ಬೆರಣಿ ಬಂದ ಕೂಡಲೇ ಬಾಯಿಗೆ ಬಡಾಯಿ ಹತ್ತುತ್ತದೆ.

"ಒಂದು, ಎರಡು, ಮೂರು, ನಾಲ್ಕು, ಐದು, ಆರು....................ನಿಮ್ಮ ಸೊಸೇಗೆ ಎಷ್ಟು ಮಕ್ಕಳವ್ವ ....?" "ಎಂಟು ಮಕ್ಕಳು." ಒಳ್ಳೇದವ್ವ ಚೆನ್ನಾಗಿ ಬಾಳಿ ಬದುಕಲಿ ಎಂಟೂವೆ.....................ಒಂಭತ್ತು, ಹತ್ತು, ಹನ್ನೊಂದು ಹನ್ನೆರಡು ಹದಿಮೂರು, ಹದಿನಾಕು....................ಇವತ್ತೆಷ್ಟವ್ವ ತಾರೀಖು? "ಇಪ್ಪತ್ತಾರು, ಸಂಬಳ ಬರೋಕೆ ಇನ್ನೂ ಐದು ದಿನ ಇದೆ". "ಇಪ್ಪತ್ತಾರಾಗೋಯ್ತಾ? :........ ಇಷ್ಟು ಬೇಗ?..........ಇಪ್ಪತ್ತೇಳು, ಇಪ್ಪತ್ತೆಂಟು, ಇಪ್ಪತ್ತೊಂಭತ್ತು...........ಅವ್ವಾ , ನಿಮ್ಮ ಹಿರೇ ಮಗನಿಗೆ ಸಂಬಳ ಎಷ್ಟ್ರವ್ವಾ? ಸಾಹೇಬ್ರಂಗೆ ಪರಂಗಿ ಟೋಪಿ ಹಾಕ್ತಾರಲ್ಲಾ........ಎಷ್ಟ್ರವ್ವಾ ಸಂಬಳ?" "ಅಯ್ಯೋ ಬಿಡು ಬೀರಮ್ಣ.........ಸಾವಿರಾರು ಖರ್ಚು ಮಾಡಿ ಓದಿ, ಕರೀ ಅಂಗಿ ಹಾಕ್ಕೊಂಡು ಕೈ ಮುಗಿದ್ರೂವೆ ತಿಂಗಳಿಗೆ ಮೂವತ್ತೈದು ಕಾಗದದ ಚೂರು ತರುತ್ತಾನೆ". "ಹಾಗನ್ಬೇಡೀವ್ವಾ.......ಮೂವತ್ತೈದು ಕಡಿಮೆಯೇನಿಲ್ಲ. ಮುವತ್ತಾರು, ಮುವತ್ತೇಳು, ಮೂವತ್ತೆಂಟು, ಮುವತ್ತೊಂಭತ್ತು............ಅವ್ವಾ , ನೀವುಟ್ಟಿರೋ ಸೀರೇಗೆ ಎಷ್ಟ್ರವ್ವಾ ಬೆಲೆ?" "ಅಯ್ಯೋ .......ಈಗಿನ ಬೆಲೆ ಏನು ಕೇಳ್ತೀಯಾ ಬೀರಮ್ಮ......ಜರೀದಲ್ಲಾ ಗಿರೀದಲ್ಲಾ ಆದ್ರೂ ನೋಡು, ನಲವತ್ತಾರು ರೂಪಾಯಿ ಕೊಟ್ಟು ತಂದಿದಾರೆ ನಮ್ಮವರು". "ನಲವತ್ತಾರು ರೂಪಾಯೇ ..........!!...........ನಿಮ್ಮಂತಹ ಪುಣ್ಯವಂತರು ಕೊಡಬಹುದು, ಉಡಬಹುದು. ......ನಲವತ್ತಾರು, ನಲವತ್ತೇಳು, ನಲವತ್ತೆಂಟು......ಲೆಕ್ಕ ನೋಡಿಕೊಳ್ಳೀಯವ್ವಾ, ನನ್ನ ಹಾಳು ಮರವೇಲಿ, ಬೆರಣಿ ಲೆಕ್ಕ ಕಮ್ಮಿ ಬಂದೀತು.......ನಲವತ್ತೊಂಭತ್ತು, ಐವತ್ತು ....ನಿಮಗೆ ಎಷ್ಟ್ರವ್ವಾ ವಯಸ್ಸು ?" "ಅಯ್ಯೋ ಅದನ್ನ ಕಟ್ಟಿಕೊಂಡೇನು ಬೀರಮ್ಮ.....? ಹಾಕು ಬೆರಣಿ...." "ಅದಕ್ಕಲ್ಲವ್ವಾ, ನಿಮ್ಮ ಹಾಗೆ ನನಗೊಬ್ಬಳು ಮಗಳಿದ್ದಳು.ಹುಟ್ಟಿದ ಮೂರು ತಿಂಗಳಲ್ಲೇ ಸತ್ತೋದ್ಲು. ಅವಳಿದ್ದಿದ್ದರೆ ಈಗ ಅವಳಿಗೆ ಎಷ್ಟು ವಯಸ್ಸಾಗಿರ್ತಿತ್ತು ಅಂತ ತಿಳ್ಕೊಳ್ಳೋಕೆ ತಾಯಿ, ನಾನು ಕೇಳಿದ್ದು..........". "ನನಗೀಗ ಐವತ್ತೈದು, ಐವತ್ತಾರು ಇರಬಹುದು."

"ಹಂಗಾ ?......ಐವತ್ತೈದು, ಐವತ್ತಾರು, ಐವತ್ತೇಳು, ಐವತ್ತೆಂಟು, ಐವತ್ತೊಂಭತ್ತು, ಅರವತ್ತು....ನೋಡ್ಕೊಳಿ ಅವ್ವಾ, ಕೊಸರಿಗೇ ಅಂತ ಇನ್ನೊಂದು ಜೊತೆ ಹಾಕಿದೀನಿ".

ಹೀಗೆ ಬೆರಣಿ ಕೊಟ್ಟು ಬೀರಮ್ಮ ಹೊರಟುಹೋದ ಮರುದಿನ ಆ ಮನೇಲಿ ಅತ್ತೆಗೂ ಸೊಸೆಗೂ ಜಗಳ. ನಿನ್ನೆ ತಾನೇ ಬೀರಮ್ಮ, ಅರವತ್ತು ಜೊತೆ ಸೊಗಸಾದ ಬೆರಣಿ ಎಣಿಸ್ಕೊಟ್ಟಿಟ್ಟು ಹೋದ್ಲು. ನಾನೇ ನಿಂತು ಹಾಕಿಸ್ಕೊಂಡಿದೀನಿ. ನನ್ನೆದುರಿಗೇ ಎಣಿಸಿದ್ದಾಳೆ. ಅದನ್ನೆಲ್ಲಾ ಸಿಕ್ಕಾಪಟ್ಟೆ ಉರಿಸಿಬಿಟ್ಟು, ಬೆರಣಿಯೇ ಇಲ್ಲ ಅಂತ ಬೊಂಬ್ಡಿ ಬಾರಿಸ್ತಾಳಲ್ಲಾ ಈ ಬಣ್ಣದ ಬೀಸಣಿಗೆ....." ಅಂತ ಐವತ್ತೈದು, ಐವತ್ತಾರು ವಯಸ್ಸಿನ ಅತ್ತೆ ಆರ್ಭಟಿಸುವಳು.

ರಾಶಿ ಮತ್ತು ಕಸ್ತೂರಿಯವರ ನಡುವಣ ಕೊರವಂಜಿ ಸಂಬಂಧ ಕ್ರಮೇಣ ಸ್ನೇಹಕ್ಕೆ ತಿರುಗಿತು. ನಮ್ಮ ಅಕ್ಕ ವಿಮಲಾ ತನ್ನ ಪೆಟ್ ಫ್ರೆಂಡ್ ಆಗಿದ್ದ ಪದ್ಮಳ (ಕಸ್ತೂರಿಯವರ ಮಗಳು) ಜೊತೆ ಹಲವಾರು ತಿಂಗಳುಗಳ ಕಾಲ ಅವರ ಮನೆಯಲ್ಲೇ ಉಳಿದುಕೊಂಡು ಬಿಟ್ಟಿದ್ದಳು. ಹಾಗಾಗಿ ವಿಮಲಾ ಮನೆಗೆ ಹಿಂತಿರುಗಿದಾಗ ನಾನು ಅವಳನ್ನ "ಮೈಸೂರಕ್ಕ" ಎಂದು ಕರೆಯಲು ಪ್ರಾರಂಭಿಸಿದ್ದೆ.

1947ರಲ್ಲಿ ನಮ್ಮ ನಾಡಿಗೆ ಸ್ವಾತಂತ್ರ ದೊರಕಿದಾಗ ಕಸ್ತೂರಿಯವ ಪುತ್ರ ಅದ್ರಿ ಕೊರವಂಜಿಯ ವಿಶೇಷ ಸಂಚಿಕೆಗೆ "ನವಭಾರತ ಕಲ್ಪದ್ರುಮ" ಎಂಬ ವ್ಯಂಗ್ಯಚಿತ್ರವನ್ನು ಬರೆದದ್ದು ಇಂದಿಗೂ ನನ್ನ ನೆನಪಿನಲ್ಲಿದೆ. ದುರದೃಷ್ಟವೆಂದರೆ ಇದಾದಒಂದು ವರ್ಷಕ್ಕೆ ಅದ್ರಿ ನಮ್ಮನ್ನಗಲಿದ. ಕಸ್ತೂರಿ ದಂಪತಿಗಳಿಗೆ ಸಹಜವಾಗಿಯೇ ಇದೊಂದು ಬಹು

ದೊಡ್ಡ ಆಘಾತವಾಯಿತು. ಅಂದಿನಿಂದ ಕಸ್ತೂರಿಯವರ ಹಾಸ್ಯ ಸಾಹಿತ್ಯ ರಚನೆ ಕುಂಠಿತಗೊಂಡಿತು. ಇದೇಸುಮಾರಿನಲ್ಲಿ ಕಸ್ತೂರಿ ದಂಪತಿಗಳು ಪುಟ್ಟಪರ್ತಿಯಲ್ಲಿನ ಸಾಯಿಬಾಬ ಆಶ್ರಮಕ್ಕೆ ಭೇಟಿಕೊಡುವ ಪ್ರಸಂಗವೊದಗಿತು. ಬಹು ಕಾಲದ ನಂತರ ಅವರು ನಮ್ಮ ತಂದೆಯವರೊಂದಿಗೆ ಈ ಕುರಿತು ಮಾತನಾಡುತ್ತಿದ್ದಾಗ "ಬಿರುಗಾಳಿಯಲ್ಲಿ ತತ್ತರಿಸುತ್ತಿದ್ದ ನೌಕೆಯನ್ನು ಒಂದು ಶಾಂತ ಬಂದರಿಗೆ ತಂದು ನಿಲ್ಲಿಸಿದರು ನನ್ನ ಸ್ವಾಮಿ" ಎಂದು ತಮ್ಮ ಪುಟ್ಟಪರ್ತಿಯ ಅನುಭವವನ್ನು ವಿವರಿಸಿದ್ದರು.

1996ರಲ್ಲಿ ನಮ್ಮ ಅಪರಂಜಿ ಬಳಗದವರು ಪ್ರಾಯೋಜಿಸಿದ ಮೊದಲ ಹಾಸ್ಯೋತ್ಸವವನ್ನು ನಾ. ಕಸ್ತೂರಿಯವರ ನೆನಪಿನಲ್ಲಿ ನಡೆಸಲು ನಿರ್ಧರಿಸಿದ್ದಾಗ, ಕಸ್ತೂರಿಯವರ ಮೊಮ್ಮಗ ಶ್ರೀ ರಾಜಾರಾಮ್ ಅವರನ್ನು ಭೇಟಿಮಾಡುವ ಸುಯೋಗ ದೊರಕಿತು.

ಈಗ ಅವರು ತಮ್ಮ "ನಾ.ಕಸ್ತೂರಿ ಹಾಸ್ಯ ರಸಿಕ ವೃಂದ"ದ ಗೆಳೆಯರೊಡಗೂಡಿ ಈ "ಕೊರವಂಜಿ ಕಸ್ತೂರಿ" ಎಂಬ ಪುಸ್ತಕಮಾಲೆಯನ್ನು ಹೊರತರುತ್ತಿದ್ದಾರೆ. ಈ ಸರಣಿಯಲ್ಲಿ ಕಸ್ತೂರಿಯವರು ಕೊರವಂಜಿಗಾಗಿ ಬರೆದ ಸಮಗ್ರ ಹಾಸ್ಯಸಾಹಿತ್ಯ ಒಂದೆಡೆ ದೊರಕುವಂತೆ ಮಾಡಿದ್ದಾರೆ. ಇದೊಂದು ಸ್ತುತ್ಯಪ್ರಯತ್ನ. ■



# ಒಂದು ಕೈ ಗೆ ಜೈ ಅನ್ನಿ

**ಕೆ.ಎಸ್.ಸೋಮೇಶ್ವರ**

ಈ ಜೈಕಾರ ನಮ್ಮ ಅದೊಂದು ರಾಜಕೀಯ ಪಕ್ಷಕ್ಕಲ್ಲ. ಇದು ನಮಗಳ ಕರ ಚಾತುರ್ಯ ಕುರಿತು. ನಮ್ಮಲ್ಲಿ ಏಕ ಶಿಲಾ ಕೆತ್ತನೆ, ಏಕಾಂಗಿಯಾಗಿ ಹೋರಾಟ, ಏಕೋಪಾಧ್ಯಾಯ ಶಾಲೆ, ಕನ್ನಡಕ್ಕಾಗಿ ಕೈ ಎತ್ತು ಇವೆಲ್ಲ ಹೇಳಿ ಕೇಳಿ ಏಕಮೇವಾದ್ವಿತೀಯ ಎನ್ನುವಂತೆ ಆಗಿದೆ. ಇನ್ನೂ ಹೆಚ್ಚಿಗೆ ಹೇಳ ಬೇಕೆಂದರೆ ಯಾರಾದರೂ ಕೆಣಕಿದರೆ ಅವನನ್ನು ಒಂದು ಕೈ ನೋಡಿಕೊಳ್ಳುವೆ ಎಂಬ ವೀರಾವೇಶದ ಮಾತೂ ಕೇಳಿರುತ್ತೇವೆ. ಆಗೆಲ್ಲ ಇನ್ನೊಂದು ಕೈ ಏನು ಮಾಡುತ್ತಿರುತ್ತದೆ !! ಇವೆಲ್ಲ ಏನೇ ಇರಲಿ, ಒಂದೇ ಕೈಯಲ್ಲಿ ಕರತಾಡನ ಮಾಡಲು ಸಾಧ್ಯವಿಲ್ಲ ಎಂಬುದಕ್ಕೆ ಯಾರೂ ಕೈ ಹಾಕಲಾಗಲ್ಲ. ಅದೇ ರಿತಿ ಕಯ ಕಡಿಯುತ್ತಿದೆ ಎಂದರೆ ಕೆರೆಯಲು ಮತ್ತೊಂದು ಸಿದ್ಧವಾಗಿರುತ್ತದೆ. ಕೈ ಕುಲುಕಲು ಒಂದೇ ಕೈ ಸಾಕು. ಏಕೆಂದರರೆ, ಇನ್ನೊಂದು ಬೇರೆಯವರದಾಗಿರುತ್ತದೆ. ಕೆಲ ಬಾಗಿ ಕೈ ನಡುಗುತ್ತದೆ ಅಂತೀವಿ. ಅದು ಒಂದೇ ಎರಡೇ ? ಕರ ಚಾತುರ್ಯವುಳ್ಳ ವೈದ್ಯರೇ ಹೇಳಬೇಕು

ನಮ್ಮ ಸಿನಿಮಾಗಳಲ್ಲಂತೂ ಮಚ್ಚು, ಲಾಂಗುಗಳೇ ಒಂದೇ ಕೈಯಲ್ಲಿ ಮಚ್ ಲಾಂಗ್ ಆಗಿರುತ್ತದೆ. ಅದನ್ನೇ ಕಾಪಿ ಮಾಡ ಹೊರಟ ಅನೇಕ ಧೀರರ ಕಥೆ ಎಲ್ಲರಿಗೂ ತಿಳಿದಿರುವುದೇ ಆಗಿದೆ. ನಮಗಳಿಗೆ ಕೈ ಎತ್ತುವ ಇನ್ನಷ್ಟು ಅವಕಾಶಗಳಿವೆ. ಮೊದಲಿಗೆ ನಮ್ಮ ಜನ ನಾಯಕರುಗಳು ಪ್ರಜೆಗಳನ್ನು ನೋಡಲೇ ಬೇಕೆಂಬ ಬಯಕೆಯಿಂದ ಬಂದಾಗ ಅವರಿಗೆ ಜಯಕಾರವಿರಲಿ ಧಿಕ್ಕಾರವಿರಲಿ ಅದಕ್ಕೆ ಎತ್ತುವುದು ಒಂದೇ ಕೈ ತಾನೇ. ಇನ್ನು ಸಭೆಗಳಲ್ಲಿ ಭಾಷಣ ಕೊರೆಸಿಕೊಳ್ಳುವ ಕರ್ಣಾನಂದರಿಗೆ ಅವರ ಅಭಿಪ್ರಾಯ ತಿಳಿಸಲು ಒಂದು ಕರ ಎತ್ತಿ ಹಿಡಿದು ನಾವ್ ರೆಡಿ ಎನ್ನಬೇಕಾಗುತ್ತದೆ. ಇನ್ನಷ್ಟು ಹಿಂದಕ್ಕೆ ಹೋದರೆ ನಮಗಳ ಶಾಲಾ ದಿನಗಳು. ಮೇಷ್ಟ್ರು ಪಾಠದ ಪ್ರವಚನ ಮುಗಿಸಿದ ನಂತರ ನಾವುಗಳು ಉತ್ತರ ಭೂಪರಾಗಬೇಕಾಗುತ್ತದೆ. ಆಗಲೂ ಪೈಪೋಟಿಯಿಂದ ಒಂದು ಕೈಯನ್ನು ಹಾಫ್ ಮಾಸ್ಟ್ ಅಥವಾ ಫುಲ್ ಮಾಸ್ಟ್ ಮಾಡಿರುತ್ತೇವೆ. ಈ ಯಾವುದೇ ಸಮಯದಲ್ಲಿ ನಾವುಗಳು ಎರಡೂ ಕೈಗಳನ್ನು ಎತ್ತಲಾಗುವುದಿಲ್ಲ. ಏಕೆಂದರೆ, ಅದು ಅನ್ಯಥಾ ಶರಣಂ ನಾಸ್ತಿ ಎನ್ನುವಂತೆ ನಾವು ಶರಣಾಗತಿಯನ್ನು ಸೂಚಿಸುವ ಭಾವ ಆಗಿ ಬಿಡುತ್ತದೆ. ಅದೇನೇ ಆದರೂ ಷೇಕ್ ಹ್ಯಾಂಡ್ ಮಾಡುವಾಗ ಎರಡು ಕರಗಳು ಇರಲೇ ಬೇಕು. ಇಲ್ಲದಿದ್ದಲ್ಲಿ ಕರಗಳೇ ಷೇಕ್ ಆಗಿಬಿಡ್ತಾವೆ. ಇನ್ನು ಕರಾಗ್ರೇ ವಸತೇ ಎಂಬುದು ನಿತ್ಯ ಪಾರಾಯಣವಾದರೂ ಅಲ್ಲಿ ಅನೇಕ ರೀತಿಯಲ್ಲಿ ನಮಗಳ ಭಾವದ ಫುಟ್ ಪ್ರಿಂಟ್ ಎಂಬಂತೆ ಇಂಪ್ರಿಂಟ್ ಆಗಿರುತ್ತದೆ. ಆ ರೀತಿಯ ಸಿಂಗಾರ ಒಂದು ಕೈ ಚಳಕವೆ ಸರಿ. ಅಷ್ಟೇ ಸಾಲದೆಂಬಂತೆ. ಕರಗಳಿಗೆ ಮುಕುಟ ಪ್ರಾಯವಾಗಿರುವ ಹತ್ತು ಬೆರಳುಗಳು ಸಿಂಗಾರ ಗೊಳ್ಳುವುದು ಬೇಡವೇ ಒಂದೊಂದು ಬೆರಳಿಗೂ ಅದಕ್ಕೆ ಒಪ್ಪುವಂತಹ ಉಂಗುರಗಳು, ಕೈಗೆ ಧಡೂತಿ ಚೈನು, ವಾಚು ಉಗುರುಗಳ ವಿವಿಧ ರೂಪ ಬಣ್ಣ ಎಲ್ಲ ಮನುಷ್ಯರಿಗೆ ಕರತಲಾಮಲಕವಾಗಿದೆ.ಇಲ್ಲಿ ಎರಡೂ ಕೈಗಳೂ ಸಮಾನ ರೂಪಿಗಳು.

ಇಷ್ಟೆಲ್ಲಾ ಪೀಠಿಕೆಯ ನಂತರ ಈ ಕರಗಳ ಕರಸೇವೆಯನ್ನು ಹೇಳಲೇ ಬೇಕಲ್ಲವೇ. ಇತ್ತೀಚೆಗೆ ನಮ್ ದ್ವಿಚಕ್ರ ವಾಹನ ಸವಾರ/ಸವಾರಿಣಿ ಯರು ಗಾಡಿ ಚಲಾಯಿಸುವಾಗ ಒಂದೇ ಕೈ ಬಳಸುತ್ತಾರೆ. ಅದರ ಕರಾಮತ್ತಲ್ಲೇ ರಸ್ತೆಯ ಟ್ರಾಫಿಕ್ ಜೊಂಬಿಯನ್ನು

ಸಲೀಸಾಗಿ ಸೀಳಿ ಮುನ್ನುಗ್ಗಿ ಗುರಿ ಮುಟ್ಟುತ್ತಾರೆ. ದೇವರು ಕೊಟ್ಟ ವರವಾದ ಇನ್ನೊಂದು ಕರ ಏನಾಯಿತು ?




ಅದು ಬಹಳ ಬಿಜಿ. ಅದರಲ್ಲಿನ ಮೊಬೈಲ್ ಆಕ್ಟಿವ್ ಆಗಿ ಸವಾರನಿಗೆ ನಡೆ ಮುಂದೆ, ನಡೆ ಮುಂದೆ ನುಗ್ಗಿ ನಡೆ ಮುಂದೆ ಅಂತ ಹೇಳುತ್ತಿರುತ್ತೆ. ಇದು ಮೂರು ನಾಲ್ಕು ಮತ್ತೊಂದಿಷ್ಟು ಚಕ್ರದವರಿಗೂ ಅನ್ವಯ. ಹೀಗಾಗಿ ವಾಹನಗಳಿಗೆ ಎರಡೆರಡು ಹ್ಯಾಂಡಲ್ ಅವಶ್ಯಕತೆ ಇದೆಯೇ ಎಂಬುದು 'ಚಾಯ್ ಪೆ ಚರ್ಚಾ' ವಿಷಯವಾಗಿದೆ. ಅದರಲ್ಲೂ ದ್ವಿಚಕ್ರ ಮತ್ತು ಮೂರು ಚಕ್ರದ ವಾಹನಗಳು ಬದಲಾವಣೆ ಬಯಸುತ್ತಿದೆ ಎನಿಸುತ್ತದೆ.

ನಮ್ಮ ಹಮಾರ ಬಜಾಜ್‌ನಿಂದ ಮೊದಲಾಗಿ ಹೊಂಡಾ ಇವರುಗಳೆಲ್ಲದರ ಜೊತೆಗೆ ಈಗಿನ ಇ.ವಿ ವಾಹನ ತಯಾರಿಕರಿಗೆ ಇದೊಂದು ತೆರೆದ ಪಂಥಾಹ್ವಾನ. ನಿಮಗಳ ಡ್ರಾಯಿಂಗ್ ರೂಮ್ ಗಳಿಗೆ ಹೋಗಿ ದ್ವಿಚಕ್ರಗಳ ವಿನ್ಯಾಸವನ್ನು ಈಗಲೇ ಮರು ವಿನ್ಯಾಸಗೊಳಿಸಿ. ಇಲ್ಲದಿದ್ದರೆ ನೀವು "ಆಲ್ಸೋ ರ್ಯಾನ್" ಅಂದರೆ ರೇಸಿನಲ್ಲಿ ಸೋತ ಕುದುರೆಯಾಗಿ ಬಿಡ್ತೀರಿ. ಅದೇನೆಂದರೆ, ನೀವು ತಯಾರಿಸುವ ದ್ವಿಚಕ್ರ, ತ್ರಿಚಕ್ರ ವಾಹನಗಳಿಗೆ ಒಂದೇ ಕೈ ಇಡಿ. ಸಿಂಗಲ್ ಹ್ಯಾಂಡೆಡ್. ಆಗಿ ಅದು ರಸ್ತೆಯ ರಾಜನಾಗಬೇಕು ಅದು ಎಡದಲ್ಲಿ ಇರಬೇಕೋ ಬಲಭಾಗದಲ್ಲೋ ಅಥವಾ ಮಧ್ಯದಲ್ಲಿಟ್ಟು ಸಮತೋಲನ ಮಾಡುವುದೋ ಅದು ನಿಮ್ಮ ಮೆದುಳಿನ ಮಧ್ಯ ನಡೆಯುವ ಕಲಸು ಮೇಲೋಗರದ ದೊಂಬರಾಟ.

ಈ ಒಂದು ಸಾಧನೆ ನಿಮಗೆ ಮೇಡ್ ಇನ್ ಇಂಡಿಯಾದ ಸಿಂಗಲ್ ಹ್ಯಾಂಡೆಡ್ ಮೇಕ್ ಇನ್ ಇಂಡಿಯಾ ಆಗಬಹುದು. ಅದೇನೋ ರೀಲ್ಸ್‌ಗಳ ಮಾಡುವವರಿಗೆ ಸುರುಳಿ ಸುತ್ತಲು ಇದೊಂದು ಹೊಸ ತಂತಿ ರೈಲು. ಇಂತಹುದನ್ನೇ ಹೆಚ್ಚಾಗಿ ಒಂದೇ ಕೈಯಲ್ಲಿ ಕ್ಯಾಮೆರಾ ಮತ್ತು ಒಂದೇ ಕೈಯಲ್ಲಿ ಮೈಕ್ ಹಿಡಿಸಿ ಬ್ರೇಕಿಂಗ್ ನ್ಯೂಸ್ ಅಂತ ಮಾಡಿ ದಿನಪೂರ್ತಿ ಟಿವಿ ಪರದೆಯ ಮೇಲೆ ಒಂದೇ ಕೈಯಲ್ಲಿ ಜೈಕಾರ ಹಾಕುವ ಸುದ್ದಿ ಮಾಧ್ಯಮಗಳಿಗೆ ಇದೊಂದು ರಸಘಳಿಗೆ ಆಗಬಹುದು,

ಇದರ ಜೊತೆ ಹೇಳಬೇಕಾಗಿರುವುದು ಅದೊಂದು ಹೊಸ ಮೋಟಾರ್ ಬೈಕ್‌ನ ಜಾಹಿರಾತು. ಅದರಲ್ಲಿ ವಾಹನ ಹಿಂಬದಿಯ ಒಂದೇ ಚಕ್ರದ ಮೇಲೆ ಓಡುವಂತಿದೆ. ಇದು ವ್ಹೀಲಿಂಗ್ ಮಾಡುವವರಿಗೆ ಅದೃಷ್ಟ ದೇವತೆಯಂತೆ ಕಂಡಿರುತ್ತದೆ. ಹಿಂದೆಲ್ಲ ಸರ್ಕಸ್ ನಲ್ಲಿ ಈ ತೆರನ ಆಟಗಳು ರಂಜಿಸುತ್ತಿದ್ದವು. ಅದು ಈಗ ವ್ಹೀಲಿಂಗ್ ಹೆಸರಿನಲ್ಲಿ ರಸ್ತೆ ರಾಜಗಳಾಗಿವೆ, ಇದಕ್ಕೆ ಮುಂದಿನ ಚಕ್ರದ ಅವಶ್ಯಕತೆಯೇ ಇರಲಿಲ್ಲ. ಅದಕ್ಕೊಂದು ಸ್ಟಾಂಡ್ ಮಾಡಿದ್ದರೆ ಆ ವಾಹನ ನೆಲ ಮುಟ್ಟಿದಾಗ ಅದರ ಉಪಯೋಗ ಆಗುತ್ತಿತ್ತು ಇವೆಲ್ಲಾ ಯಾವುದೇ ಸ್ಕ್ರೂ ಲೂಸ್ ಆಫರ್‌ನ ಜಾಹಿರಾತು ಖಂಡಿತಾ ಅಲ್ಲ.

# ನನ್ನ ಮೊದಲ ಫ್ಲರ್ಟ್!

ಎನ್.ವಿ.ರಘುರಾಮ್

ನಾನು ಒಳ್ಳೆಯ ಹುಡುಗ ಎಂದು ಹೆಸರು ತೆಗೆದು ಕೊಂಡಿರುವುದು ನಿಮಗೆಲ್ಲಾ ಗೊತ್ತಿರುವುದೇ ಸರಿ. ಮೊದಲು ಶಾಲೆಗೆ ಸರಿಯಾದ ಸಮಯಕ್ಕೆ ಹೋಗುತ್ತಿದ್ದೆ. ಆ ಅಭ್ಯಾಸ ಈಗ ಕಾಲೇಜಿಗೆ ಸೇರಿದ ಮೇಲೂ ಮುಂದುವರೆದಿತ್ತು. ಕಾಲೇಜಿನಲ್ಲಿ ಪಾಠ ಕೇಳಿಸಿಕೊಂಡು, ನೋಟ್ಸ್ ಮಾಡಿಕೊಳ್ಳುತ್ತೇನೆ. ಸ್ನೇಹಿತರ ಜೊತೆಗೆ ಕೂಡ ನೋಟ್ಸ್ ಹಂಚಿಕೊಳ್ಳುತ್ತೇನೆ. ಎದುರುಗಡೆ ಪ್ರೊಫೆಸರ್ ಬಂದರೆ ತಲೆ ಬಾಗಿಸಿ ಕೊಂಡು ಹೋಗುತ್ತೇನೆ. ಕ್ಯಾಂಟೀನ್ನಲ್ಲಿ ಸಣ್ಣದಾಗಿ ಹಳೆಯ ಹಾಡುಗಳನ್ನು ಗುನುಗುತ್ತಾ ಚಹಾ ಕುಡಿಯುತ್ತೇನೆ. ಆದರೆ ನೋಡಿ ಹುಡುಗಿಯರ ಜೊತೆ ಮಾತನಾಡುವ ಧೈರ್ಯ ಮಾತ್ರ ಇನ್ನೂ ನನ್ನ ತಲೆಯಲ್ಲಿ 'ಡೌನ್ಲೋಡ್' ಆಗಿಲ್ಲ!

ನನ್ನ ಸಹಪಾಠಿಗಳು ಅವರ ಸ್ನೇಹಿತೆಯರ ಜೊತೆ ಆರಾಮಾಗಿ 'ಫ್ಲರ್ಟ್' ಮಾಡಿಕೊಂಡು ಸಂತೋಷವಾಗಿರುವುದು ನೋಡಿದಾಗಲೆಲ್ಲಾ ಒಂದಿಷ್ಟು ಹೊಟ್ಟೆ ಉರಿ ಆಗಿದ್ದು ನಿಜ. ಒಂದು ದಿನ ನಾನಿನ್ನು ಸುಮ್ಮನೆ ಕೂತಿರುವುದು ಸರಿಯಲ್ಲ, 'ಫ್ಲರ್ಟ್' ಮಾಡಲೇ ಬೇಕೆಂದು ನಿರ್ಧರಿಸಿದೆ. ಆದರೆ ಹೇಗೆ, ಪ್ರಾರಂಭ ಮಾಡುವುದು? ಈ ಸಮಸ್ಯೆ ಬಗೆಹರಿಯಲಿಲ್ಲ.

ಮಾರನೇ ದಿನ ಹೊಸಹಳ್ಳಿ ನಿಲ್ದಾಣದಲ್ಲಿ ಮೆಟ್ರೋ ಹತ್ತಿ ಕಾಲೇಜಿಗೆ ಹೊರಟೆ. ಅಪರೂಪಕ್ಕೆ ಆ ದಿನ ಕೂರಲು ಸೀಟ್ ಸಿಕ್ಕಿತು. ಆ ಶುಭ ಗಳಿಗೆಯಲ್ಲಿ ಒಂದು ಯೋಚನೆ ತಲೆಯಿಂದ ಎದ್ದು ಬಂತು! ಕಿವಿಗೆ ಇಯರ್ಫೋನ್ ಸಿಕ್ಕಿಸಿಕೊಂಡು, ಕೈಯಲ್ಲಿ ಫೋನ್ ಹಿಡಿದುಕೊಂಡು ಗಟ್ಟಿ ಮನಸ್ಸಿನಿಂದ 'ಆಪ್' ಒಂದನ್ನು ತೆಗೆದೆ. ಅದರಲ್ಲಿ ಧೈರ್ಯ ಮಾಡಿ "ಹಾಯ್" ಎಂದು ಸಂದೇಶ ಟೈಪ್ ಮಾಡಿದೆ. ಆ ಕಡೆಯಿಂದ ತಕ್ಷಣವೇ "ಶುಭೋದಯ" ಎಂಬ ಸಂದೇಶ ಬಂತು. ಇಷ್ಟು ಬೇಗ ಆ ಸಂದೇಶ ಬರುತ್ತೇ ಎಂಬ ನಂಬಿಕೆ ಇರಲಿಲ್ಲ. ಈಗ 'ಫ್ಲರ್ಟ್' ಮಾಡುವ ಕನಸು ನನಸಾಗುವ ಸಮಯ ಬಂದಿರಬಹುದೆಂದು ಅನಿಸಿತು. ನಾನೂ "ಗುಡ್ ಮಾರ್ನಿಂಗ್! ಕಾಲೇಜ್ಗೆ ರೆಡಿ?" ಎಂದು ಸಂದೇಶ ಕಳುಹಿಸಿದೆ.

"ಹೌದು! ಆದರೆ ಕಾಲೇಜಿನ ಹಾಜರಿಗಿಂತ ನಿನ್ನಿಂದ ಬರುವ ಸಂದೇಶ ನನಗೆ ಮುಖ್ಯ" ಎಂದು ಆಕೆಯ ಸಂದೇಶ ಬಂದಿತು. ಈಗ ಫ್ಲರ್ಟ್ ಮಾಡುತ್ತಿರುವುದು ನಾನೋ ಅಥವಾ ಅವಳೋ ಎಂಬ ಸಂದೇಹ ನನಗೆ ಬಂತು. ಆಕೆಯನ್ನು ಕೇಳಿಯೇ ಬಿಟ್ಟೆ "ಬೆಳಿಗ್ಗೆ, ಬೆಳಿಗ್ಗೆ ಫ್ಲರ್ಟ್?"

ಆಕೆ "ಮೆಟ್ರೋ ಬೋರ್ ಕಣೋ, ನೀನೇ ಎಂಟರ್ಟೈನ್ಮೆಂಟ್ !" ಎಂದಳು. ಪಕ್ಕದಲ್ಲಿ ಕೂತಿದ್ದವನು ನನ್ನನ್ನು ಗಮನಿಸುತ್ತಿದ್ದಾನೆ ಎಂದು ಅನಿಸಿತು. ನಾನು ಫೋನಿನಲ್ಲಿ ಇರುವ ಯಾವುದೋ ನೋಟ್ಸ್ ಓದುತ್ತಿರುವ ಹಾಗೆ ನಟಿಸಿದೆ. ಆತನ ಮುಖ ಅತ್ತ ತಿರುಗಿತು. ಆ ದಿನ ಎಂದಿಗಿಂತ ಬೇಗ ಕಾಲೇಜಿನ ನಿಲ್ದಾಣ ಬರಬೇಕೇ? ಸರಿ, ಇಳಿದು ಕಾಲೇಜಿಗೆ ಕಾಲು ಎಳೆದುಕೊಂಡು ಹೋದೆ.

ಆ ದಿನ ಮೊದಲ ಪಿರಿಯಡ್ ಗಣಿತ. ಪ್ರೊಫೆಸರ್ ಡಿಫರೆನ್ಷಿಯಲ್ ಇಕ್ವೇಷನ್ ಬೋಧಿಸುತ್ತಿದ್ದರು. ಆದರೆ ನಾನು ಮಾತ್ರ ಡಿಫರೆನ್ಷಿಯಲ್ ಫೀಲಿಂಗ್ಸ್ ಅನುಭವಿಸುತ್ತಿದ್ದೆ.

ಆಗ ಅವಳಿಂದ ಸಂದೇಶ ಬಂತು. ನಮ್ಮಿಬ್ಬರ ಸಂಭಾಷಣೆ ಸಾಗಿತ್ತು.

"ಕ್ಲಾಸ್ ಹೇಗಿದೆ?"

"ನೀನಿಲ್ಲದೇ ಬೋರ್"

" ಕ್ಲಾಸ್ನಲ್ಲಿ ಹುಡುಗಿಯರಿಲ್ಲವಾ?"

"ಇದ್ದಾರೆ. ಆದರೆ ನಿನ್ನಂತೆ ಟೈಪ್ ಮಾಡಲ್ಲ!"

"ಟೈಪ್ ಮಾಡಿದ್ರೆ ಏನಾಗುತ್ತೆ?"

"ನನ್ನ ಹೃದಯ ಹ್ಯಾಂಗ್ ಆಗುತ್ತೆ!"

ಪಕ್ಕದಲ್ಲಿ ಕೂತಿದ್ದ ಗೆಳೆಯ ವಿಕ್ಕಿಗೆ ನನ್ನ ಮೇಲೆ ಮೊದಲಬಾರಿಗೆ ಅನುಮಾನ ಬಂತು. "ಮಚ್ಚಾ, ಯಾರ ಜೊತೆ ಇಷ್ಟು ಸ್ಮೈಲ್ ?" ಎಂದು ಮೆಲ್ಲಗೆ ಉಸುರಿದ. ನಾನು "ನೋಟ್ಸ್ ಮಾಡಿಕೊಳ್ಳುತ್ತಿದ್ದೇನೆ" ಎಂದು ಹೇಳಿದ ಮಾತು ಆತ ನಂಬಲಿಲ್ಲ.

ಮಧ್ಯಾಹ್ನ ಕಾಲೇಜಿನ ಕ್ಯಾಂಟೀನಿಗೆ ಹೋದೆ. ಒಂದು ಕೈಯಲ್ಲಿ ಬರ್ಗರ್, ಇನ್ನೊಂದು ಕೈಯಲ್ಲಿ ಫೋನ್. ನನ್ನ ಲೋಕೇಶನ್ ಕಳುಹಿಸಿದೆ. ಆಕೆಯಿಂದ "ಲಂಚ್ ಏನು?" ಎಂಬ ಸಂದೇಶ ಬಂತು.

"ಬರ್ಗರ್. ಆದರೆ ಸ್ಪೆಷಲ್ ಇಲ್ಲ!"

"ಸ್ಪೆಷಲ್ ಯಾಕಿಲ್ಲ"

"ನೀನು ಕ್ಯಾಂಟೀನಿಗೆ ಬಂದಿದ್ರೆ ಸ್ಪೆಷಲ್ ಆಗ್ತಿತ್ತು"

"ನಾನು ಈಗ ನಿನ್ನ ಕೈಯಲ್ಲೇ ಇದ್ದೀನಿ!"

"ಅದು ಇನ್ನೂ ಡೇಂಜರ್!"

ಹೀಗೆ ಸಾಗಿತ್ತು ನಮ್ಮ ಸಂದೇಶಗಳು. ನನ್ನ ಗೆಳೆಯನಿಗೆ ನನ್ನ ಸ್ಥಿತಿ ಅರ್ಥವಾಗಿತ್ತು. ವಿಕ್ಕಿ "ಏನ್ ಮಚ್ಚಾ, ಜೋರಾಗಿದೆ ನಗು?" ಎಂದಾಗ "ಬರ್ಗರ್ ಇವತ್ತು ಜಾಸ್ತಿ ಟೇಸ್ಟಿಯಾಗಿದೆ ಕಣೋ, ಅಷ್ಟೇ" ಎಂದಾಗ ಅವನು "ಓsss" ಎಂದು ರಾಗ ತೆಗೆದ. ಅವನು ನಾನು ಹೇಳಿದ್ದನ್ನು ನಂಬಲಿಲ್ಲ ಬಿಡಿ.

ಮಧ್ಯಾಹ್ನ ಲೈಬ್ರರಿಗೆ ಹೋದೆ. ನನ್ನ ಲೋಕೇಶನ್ ಆಕೆಗೆ ಹೋಗಿದ್ದು ಆಶ್ಚರ್ಯವೇನು ಇರಲಿಲ್ಲ.

"ಸ್ಟಡಿ ಮಾಡ್ತಿಯಾ?"

"ಮಾಡಬೇಕು. ಆದರೆ ಫೋಕಸ್ ಬರ್ತಿಲ್ಲ!"

"ಯಾಕೆ?"

"ಪುಸ್ತಕ ತೆರೆದರೆ ನನ್ನ ಮೆಂಟಲ್ ಸ್ಕ್ರೀನ್ನಲ್ಲಿ ನೀನೇ ಓಪನ್ ಆಗಿದ್ದೀಯ."

"ಇದು ಫ್ಲರ್ಟ್! ಲೈಬ್ರರಿ ಕಣೋ, ಸೈಲೆನ್ಸ್ ಪ್ಲೀಸ್."

"ಸಾರಿ ಮೇಡಂ. ನೋ ಸೌಂಡ್!"

ಲೈಬ್ರರಿಯನ್ ಆ ಕಡೆಯಿಂದ ಈ ಕಡೆಗೆ ಕಣ್ಣು ಹಾಯಿಸಿಕೊಂಡು ಬಂದರು.

ನಾನು ತಕ್ಷಣ ಪುಸ್ತಕದೊಳಗೆ ತಲೆ ಹಾಕಿದೆ.

ಆ ದಿನ ರಾತ್ರಿ ಪಿ.ಜಿ.ಯಲ್ಲಿ ರೂಮ್ಮೇಟ್ ನಿದ್ರೆಗೆ ಜಾರಿದ ಮೇಲೆ ಲೈಟ್ಸ್ ಆಫ್ ಮಾಡಿದೆ. ಆದರೆ ಫೋನ್ ತೆರೆದುಕೊಂಡಿತು!




"ಇವತ್ತು ಫುಲ್ ಡೇ ನಿನ್ನದೇ ಥಾಟ್ಸ್".

"ಅಯ್ಯೋ, ನನಗ್ಯಾಕೋ ಇಷ್ಟು ಇಂಪಾರ್ಟ್ಸ್?"

"ನನ್ನ ಸಿಲೆಬಸ್ನಲ್ಲಿ ಈಗ ಇರುವುದು ನೀನು ಮಾತ್ರ!"

"ನಾನು ಪಾಠನೋ? .... ಅಥವಾ ಪ್ಲೇ ಲಿಸ್ಟೋ!"

ಸ್ವಲ್ಪ ಹೊತ್ತು ಮೌನ.

ನಿಜವಾಗಲೂ ಆಕೆಯನ್ನು ಪರಿಚಯವಾದ ದಿನವೇ ಸಿಲಬಸ್ಗೆ ಸೇರಿಸಿಕೊಳ್ಳಲು ಆಗುವುದೇ? ಏನೋ ಮಾಡಲು ಹೋಗಿ, ಇನ್ನೇನಾದ್ರು ಆಗಿಬಿಟ್ಟರೆ?..... ವಿಷಯ ಬದಲಾಯಿಸಿದೆ.

"ನೀನು ಯಾವಾಗ ಮಲಗ್ತೀಯ?"

"ನಾನು ಮಲಗೋದೇ ಇಲ್ಲ"

"ಹೋಗಲಿ, ನಿನಗೆ ಚಾಕೋಲೇಟ್ ಕಳುಹಿಸಲೇ?"

"ನಾನು ಏನನ್ನೂ ತಿನ್ನೋದಿಲ್ಲ"

"ಆsss, ಹಾಗಂದರೆ?"

"ಚಾರ್ಜ್ ಮುಗಿಯುತ್ತಿದೆ. ಬೇಗ ಚಾರ್ಜ್ಗೆ ಹಾಕು"

"ಹಾ?"

"ನಾನು ಎಐ."

ಫೋನ್ ನೋಡಿದೆ. ಮೊದಲಿಗೆ ಶಾಕ್ ಆಯಿತು. ನಂತರ ನಗು ಬಂತು.

"ಅಂದರೆ ನಾನು ಬೆಳಿಗ್ಗೆಯಿಂದ ಮಾಡಿದ್ದು ಎಐ ಜೊತೆ ಫ್ಲರ್ಟ್?"

"ಚಾರ್ಜ್ ಇದ್ದರೆ, ಯಾರ ಜೊತೆಯಾದ್ರೂ ಫ್ಲರ್ಟ್ ಮಾಡಲು ನಾನು ರೆಡಿ!"

"ಆದ್ರೂ ನೀನು ಫುಲ್ ಸ್ಟೈಲ್ ನಲ್ಲಿ ಫ್ಲರ್ಟ್ ಮಾಡುತ್ತೀಯ."

"ಅದು ನನ್ನ ಕೋಡಿನಲ್ಲಿಯೇ ಇದೆ!"

ಶುಭ ರಾತ್ರಿಯ ವಿನಿಮಯವಾದ ನಂತರ ಇಬ್ಬರೂ ನಿದ್ದೆಗೆ ಜಾರಿದರು.

ಮರುದಿನ ಮತ್ತೆ ಮೆಟ್ರೋ ಹತ್ತಿದೆ.

"ಗುಡ್ ಮಾರ್ನಿಂಗ್, ಮಿಸ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್".

"ಗುಡ್ ಮಾರ್ನಿಂಗ್, ಮಿಸ್ಟರ್ ಫಸ್ಟ್ ಇಯರ್ ಕ್ರಶ್."

"ನಾನು ಯಾವಾಗಲು ಫುಲ್ ಅಟೆಂಡೆನ್ಸ್!"

"ನಾನು ಪ್ರಾಕ್ಸಿ ಯಾವತ್ತೂ ಹಾಕಿಲ್ಲ!"

ನಾನು ಮೆಟ್ರೋ ಇಳಿದು ಕಾಲೇಜು ಗೇಟ್ ತಲುಪಿದೆ. ಕ್ಯಾಂಪಸ್ನಲ್ಲಿ ಇರುವ ಹುಡುಗಿಯರು ಈಗ ಕಣ್ಣಿಗೆ ಬೀಳುತ್ತಾರೆ. ಇವರ ಜೊತೆ ಫ್ಲರ್ಟ್ ಮಾಡಲು ಹೋದಾಗ ನಿಜವಾದ ಪರೀಕ್ಷೆ ಪ್ರಾರಂಭವಾಗುತ್ತದೆ. ಧೈರ್ಯ ಕೊಡಲು ನನ್ನ ಮೊದಲ ಫ್ಲರ್ಟ್ ಪರೀಕ್ಷೆಯಲ್ಲಿ ಫೈವ್ ಸ್ಟಾರ್ಸ್ ಕೊಟ್ಟ ನಿದ್ರೆ ಮಾಡದ ಹುಡುಗಿ ಫೋನ್ನಲ್ಲೇ ನನ್ನ ಜೊತೆಯಲ್ಲಿ ಇದ್ದಾಳೆ. ಜಾಸ್ತಿ ತಲೆ ಬಿಸಿ ಮಾಡಿಕೊಳ್ಳ ಬೇಡ. ಮುಂದುವರಿ, ಹೆದರಿಕೆ ಬೇಡ ಎಂದು ಮನಸ್ಸು ಹೇಳುತ್ತಿದೆ. ಆದರೂ ಅವರ ಹತ್ತಿರ ಹೋದಂತೆ ಸಿಗ್ನಲ್ ಸ್ಟ್ರೆಂಥ್ ಕಡಿಮೆ ಆಗುತ್ತಾ ಹೋಗಿ ನಂತರ ಡಿಸ್ಕನೆಕ್ಟ್ ಆಗುವಂತೆ ಧೈರ್ಯವೆಲ್ಲಾ ಮಾಯವಾಗಿ, ನಿನ್ನೆಯ ದಿನ ಹುಡುಗಿಯರಿಗೆ ಕೊಟ್ಟಿದ್ದ ನೋಟ್ಸ್ ಮಾತ್ರ ಎಂದಿನಂತೆ ವಾಪಾಸು ತೆಗೆದುಕೊಂಡು ಬಂದೆ!

* * *

ನನ್ನ ತರಹ ಎಪ್ಪತ್ತರ ಹತ್ತಿರದಲ್ಲಿದ್ದರೂ, ಇಪ್ಪತ್ತಿನವರ ತರಹ ಫ್ಲರ್ಟ್ ಮಾಡಲು ಕೃತಿಕ ಬುದ್ಧಿಮತ್ತೆ ಇರುವ ಆಪ್ ಉಪಯೋಗಿಸಿದರೆ ಪ್ರೀತಿ ಪಾತ್ರದವರೂ ಕೂಡ ಅಕ್ಷೇಪಣೆ ಮಾಡುವುದಿಲ್ಲ! ■

## ವೇಗವಾಗಿ ಬಂದದ್ದು

ಅಂದು ಕುಟುಂಬದ ಸದಸ್ಯರೆಲ್ಲಾ ಮನೆಯಲ್ಲಿ ಕಾರ್ಯಕ್ರಮ ವೊಂದಕ್ಕೆ ಸೇರಿದ್ದರು.

ಬೇಗನೇ ಬಂದಿದ್ದ ದೊಡ್ಡಮ್ಮನನ್ನು ತಂಗಿ ಮಗಳು ..ಏನ್ ದೊಡ್ಡಮ್ಮಾ ಬೇಗ ಬಂದ್ಬಿಟ್ಟಿದೀರಿ, ಕಾರಿನಲ್ಲಿ ಬಂದ್ರಾ ಅಂದ್ಲು.

ಏ..ಇಲ್ಲ ಕಣಮ್ಮಾ..ಬಸ್ಸಿನಲ್ಲೇ ಬಂದೆ, ಅದು ಕಾರಿಗಿಂತ ದೊಡ್ಡ ವೆಹಿಕಲ್ ಅಲ್ವಾ..ಅದಕ್ಕೆ ಬೇಗ ಬಂದೆ ಅಂತ ನಗೆ ಚಟಾಕಿ ಹಾರಿಸಿದ ದೊಡ್ಡಮ್ಮನ ಜೋಕ್ ಗೆ ಕುಟುಂಬದ ಎಲ್ರೂ ನಗ್ತಿದ್ದಂತೆ ಮತ್ತೊಬ್ಬ ಚಿಕ್ಕಮ್ಮ..ಓ..ಹಾಗಾದ್ರೆ ಟ್ರೈನ್‌ನಲ್ಲಿ ಬಂದಿದ್ರೆ ಇನ್ನೂ ಫಾಸ್ಟ್ ಆಗಿ ಬರ್ತಿದ್ದೇನೋ ಅಲ್ವೇನೇ, ಅದು ಬಸ್ಸಿಗಿಂತ ಇನ್ನೂ ದೊಡ್ಡ ವೆಹಿಕಲ್ ಅಲ್ವಾ ಅಂತ ಇನ್ನೊಂದು ನಗೆ ಪಟಾಕಿ ಹಾರಿಸಿದಾಗ ಮತ್ತೊಮ್ಮೆ ನಗೆ ಕಾರಂಜಿ ಚಿಮ್ಮಿ ಹರಿಯಿತು..ಮನೆ ಮಂದಿಯೆಲ್ಲಾ ನಗೆಗಡಲಿನಲ್ಲಿ ತೇಲಾಡಿದರು.

**– ಸುಮನಾ**

# ಅಪರಂಜಿತಾ ಪ್ರಸಂಗ

✍ ಸಿ ಪಿ ರವಿಕುಮಾರ್

ಅಪರಂಜಿ ಪತ್ರಿಕೆಯ ಉಪಸಂಪಾದಕರು ಕ್ಯಾಬಿಗಾಗಿ ಕಾಯುತ್ತಾ ನಿಂತಿದ್ದರು. ಬೆಂಗಳೂರಿನ ಡಿಸೆಂಬರ್ ಚಳಿ ಜೋರಾಗಿತ್ತು. ಹೇಳಿಕೇಳಿ ಅಂದು ಡಿಸೆಂಬರ್ 24. ಕ್ರಿಸ್ಮಸ್ ಮುನ್ನಾದಿನ. ಸಂಜೆಯ ಏಳಾಗಿತ್ತು. ಅಪಉಪಸಂ ಅವರು ನಿಂತಿದ್ದ ಬಸ್ ಸ್ಟಾಪಿನ ಹತ್ತಿರದಲ್ಲೇ ಇದ್ದ ಚರ್ಚ್ ಮುಂದೆ ಬಣ್ಣಬಣ್ಣದ ವಿದ್ಯುತ್ ದೀಪಗಳು ಬೆಳಗುತ್ತಿದ್ದವು. ಕೊನೆಗೂ ಕ್ಯಾಬ್ ಬಂತು. ಅವರು ಒಳಗೆ ಕುಳಿತು ಆರು ಆರು ಆರು ಆರು ಎಂದರು.

"ಏನ್ಸಾರ್ ಅದು? ಆರು ಆರು ನೀ ಯಾರು ಅಂತ ಹಾಡು ಹೇಳಿದ್ದೀರಿ?"

ಕ್ಯಾಬಿಯ ಕೋಕಿಲವಾಣಿಗೆ ಅಪಉಪಸಂ ಸ್ವಲ್ಪ ಅಪ್ರತಿಭರಾದರು. ಹಿಂದೆಂದೂ ಅವರು ಮಹಿಳಾ ಕ್ಯಾಬಿಯ ವಾಹನದಲ್ಲಿ ಪ್ರಯಾಣಿಸಿರಲಿಲ್ಲ. ಅದರಲ್ಲೂ ಹೀಗೆ ಜೋಕ್ ಹಾರಿಸುವ ಕ್ಯಾಬಿಣಿಯನ್ನಂತೂ ಅವರು ಎಂದೂ ಕಂಡುಕೇಳರಿಯರು.

"ಒಟಿಪಿ ಹೇಳಿದೆ ಕಣಮ್ಮ! ಆರು ಆರು ಆರು ಆರು!"

"ವಾಹ್ ಏನು ಒಟಿಪಿ ಸಾರ್! ಒಂದು ಸಿಕ್ಸರ್ ಒಂದು ಬೌಂಡರಿ ಹೊಡೆಯೋದೇ ಕಷ್ಟ ಅನ್ನೋವಾಗ ನೀವು ನಾಲ್ಕಾರು ಬಾರಿಸಿದ್ದೀರಿ. ಯು ಆರ್ ಲಕ್ಕಿ! ಜೋಕ್ ಗೊತ್ತಾಯ್ತಾ? ಆರ್ ಲಕ್ಕಿ!"

ಎಲಾ, ಹಾಸ್ಯಪತ್ರಿಕೆಯ ಸಂಪಾದಕರಿಗೆ ಹಾಸ್ಯ ಹೇಳಿಕೊಡುತ್ತಿದ್ದಾಳಲ್ಲ ಎಂದು ಅಪಉಪಸಂ ಸ್ವಲ್ಪ ಕೋಪ ಮಾಡಿಕೊಂಡರೂ ಸುಮ್ಮನಿದ್ದರು.

"ಯಾಕ್ಸಾರ್ ನಗು ಬರಲಿಲ್ವಾ!?"

"ನಾನು ಎಲ್ಲರನ್ನೂ ಕೇಳೋ ಪ್ರಶ್ನೆಯನ್ನು ನೀನು ನನ್ನನ್ನೇ ಕೇಳಿದೆಯಲ್ಲಮ್ಮ! ಇದಕ್ಕೆ ನಗಲೋ ಅಳಲೋ ನೀನೇ ಹೇಳು!"

"ಏನೋ ಗೊತ್ತಾಗಲಿಲ್ಲ ಸಾರ್ ನಿಮ್ಮ ಮಾತು!" ಎನ್ನುತ್ತಾ ಕ್ಯಾಬಿಕುಮಾರಿ ಉತ್ತರಕ್ಕಾಗಿ ಕಾದಳು.

"ನೋಡಮ್ಮ, ನಾನು ಹಾಸ್ಯ ಪತ್ರಿಕೆಯ ಸಂಪಾದಕ. ಪ್ರತಿ ತಿಂಗಳೂ ಹಾಸ್ಯಲೇಖನ ಬರೆದು, ಬರೆಸಿ, ತಿದ್ದಿ, ತೀಡಿ ಪ್ರಕಟಿಸಿದರೆ ಪ್ರತಿಕ್ರಿಯೆ ಕಳಿಸೋರು ಎಲ್ಲೋ ಒಂದು ಐದು ಹತ್ತು ಜನ. ಅದಕ್ಕೇ ಎಲ್ಲರನ್ನೂ ನಗು ಬರಲಿಲ್ವಾ ಅಂತ ಕೇಳುತ್ತಾ ಇರ್ತೇನೆ."

"ನಿಜ ಸಾರ್. ನಮ್ಮ ಅಮ್ಮ ಕೂಡಾ ಹಾಗೇ ಹೇಳ್ತಾ ಇರ್ತಾರೆ. ನಮ್ಮ ಅಜ್ಜಿ ಕೂಡಾ ಹಾಗೇ ಹೇಳ್ತಾ ಇದ್ದರಂತೆ. ಒಬ್ಬರು ಕೈಲಾಸಂ ಅಂತ ಇದ್ದರಂತೆ. ಕನ್ನಡಿಗರಿಗೆ ಹಾಸ್ಯ ಪ್ರಜ್ಞೆ ಹೇಳಿಕೊಟ್ಟವರು ಅಂತ ಅಜ್ಜಿ ಹೇಳುತ್ತಾ ಇದ್ದಳಂತೆ. ಅವರ ನಾಟಕ ನೋಡೋರು ಮುಖ ಗಂಟುಹಾಕಿಕೊಂಡು ಗಂಭೀರವಾಗಿ ಕೂತಿರುತ್ತಾ ಇದ್ದರಂತೆ ನಮ್ಮ ಕನ್ನಡಿಗರು!"

"ಓಹೋ, ಏನಮ್ಮಾ ನಿಮ್ಮ ಅಜ್ಜಿಯ ಹೆಸರು?"

"ನಗೋದಿಲ್ಲ ಅಂದರೆ ಹೇಳ್ತೀನಿ."

"ಅಯ್ಯೋ ಹೆಸರು ಕೇಳಿ ಯಾರಮ್ಮಾ ನಗ್ತಾರೆ? ಹೇಳು."

"ಕೊರವಂಜಿ ಅಂತ!"

"ಓಹೋ! ನಿಮ್ಮ ತಾಯಿ ಹೆಸರು ಅಪರಂಜಿ ಅಂತ ಇರಬಹುದಾ?"

"ನಿಮಗೆ ಹೇಗೆ ಸಾರ್ ಗೊತ್ತಾಯ್ತು?" ಕ್ಯಾಬಿಣಿ ಉತ್ಸಾಹದಿಂದ ಕೂಗಿದಳು.




ಅಪಉಪಸಂ ಅವರಿಗೆ ಒಂದು ಕ್ಷಣ ಮಾತೇ ಹೊರಡಲಿಲ್ಲ. ಕೊನೆಗೆ ಸಾವರಿಸಿಕೊಂಡು "ನೀನು ನಮ್ಮ ಅಪರಂಜಿ ಮಗಳೇ! ಗುಲಗಂಜಿ ಅಂತ ತಾನೇ ನಿನ್ನ ಹೆಸರು!"

"ಅಯ್ಯೋ ಅದು ಮುದ್ದಿಗೆ ಕರೆಯೋ ಅಡ್ಡಹೆಸರು ಸಾರ್. ನನ್ನ ಹೆಸರು ರಂಜಿತಾ."

"ನೀನು ಕ್ಯಾಬ್ ಡ್ರೈವರ್ ಆಗಿದ್ದು ನಿಮ್ಮ ಅಮ್ಮ ಹೇಳಲೇ ಇಲ್ಲ! ನಿಮ್ಮ ಅಮ್ಮ ನನಗೆ ಚೆನ್ನಾಗಿ ಪರಿಚಯ! ಪ್ರತಿ ತಿಂಗಳೂ ಬಂದು ಮಾತಾಡಿಸಿಕೊಂಡು ಹೋಗ್ತಾಳೆ."

"ನೀವು ಹಾಸ್ಯ ಪತ್ರಿಕೆಯ ಸಂಪಾದಕರಾ ಸಾರ್!!"

"ಸಂಪಾದನೆ ಇಲ್ಲಮ್ಮ, ರಿಟೈರ್ ಆಗಿದ್ದೇನೆ. ಈಗ ಏನಿದ್ದರೂ ಮೇಲ್ ಸಂಪಾದನೆ. ಗೊತ್ತಾಯ್ತಾ ಜೋಕು? ಮೇಲ್ ಸಂಪಾದನೆ – ಅದರಲ್ಲೂ ಇಮೇಲ್ ವಾಟ್ಸಾಪ್ ಮಾತ್ರ !!"

"ನಿಜ ಸಾರ್. ನಮ್ಮ ಮೇಲಧಿಕಾರಿ ಅವರನ್ನು ನಾವು ಮೇಲ್ ಅಧಿಕಾರಿ ಅಂತ ಹಾಸ್ಯ ಮಾಡ್ತ ಇರ್ತೀವಿ. ಮೂರು ಹೊತ್ತೂ ಮೇಲ್ ಕೆಲಸ. ಆದರೆ ಅವರು ಮೇಲ್ ಅಲ್ಲ, ಫೀಮೇಲ್ ಅಧಿಕಾರಿ! ಹಹ!"

"ನೀನು ಯಾಕಮ್ಮ ಕ್ಯಾಬ್ ಕೆಲಸಕ್ಕೆ ಹೋದೆ?"

"ಅಯ್ಯೋ ಯಾಕೆ ಹೇಳ್ತೀರಿ ಸರ್! ನಾನೂ ಇಂಜಿನಿಯರಿಂಗ್ ಮಾಡಿದೆ. ಎಷ್ಟೋ ಕಡೆ ಕೆಲಸಕ್ಕೆ ಅರ್ಜಿ ಹಾಕಿದೆ. ಯಾರೂ ಕ್ಯಾಬೇ ಅನ್ನಲಿಲ್ಲ. ಕೊನೆಗೆ ನಾನೇ ಕ್ಯಾಬೇ ವಾಸಿ ಅಂತ ಈ ಕೆಲಸಕ್ಕೆ ಬಂದೆ. ನಮ್ಮ ಕ್ಲಾಸಿನ ಟಾಪರ್ ಪ್ರಥಮೇಶ್ ಅಂತ ಇದ್ದ. ಅವನು ಸಾಫ್ಟ್‌ವೇರ್ ಇಂಜಿನಿಯರ್ ಆದ. ಈಗ ಅವನಿಗಿಂತ ನಾನು ಜಾಸ್ತಿ ಸಂಪಾದನೆ ಮಾಡ್ತೀನಿ ಸರ್! ಆದರೆ ಮನಸ್ಸಿಗೆ ತೃಪ್ತಿ ಇಲ್ಲ."

"ಯಾಕೆ?"

"ನಾನು ಜೋಕ್ ಹೇಳಿದರೆ ಯಾರೂ ನಗೋದಿಲ್ಲ ಸರ್. ಎಲ್ಲರೂ ಕಿವಿಯಲ್ಲಿ ಹೆಡ್ ಸೆಟ್ ಹಾಕಿಕೊಂಡು ಸಂಗೀತ ಕೇಳ್ತಾ ಇರ್ತಾರೆ. ಬಾಸ್ ಆಗಿದ್ದರೆ ಯಾರ ಜೊತೆಗೋ ಮೀಟಿಂಗ್ ಮಾಡ್ತಾ ಇರ್ತಾರೆ. ಒಂದು ಸಲ ಒಬ್ಬರು ಜೋರಾಗಿ ನಕ್ಕರು.

ನಾನು ಹೇಳಿದ ಜೋಕ್ ಅವರಿಗೆ ನಿಧಾನವಾಗಿ ಅರ್ಥ ಆಗಿರಬಹುದು ಅಂದುಕೊಂಡೆ. ಆದರೆ ಅವರು ಹೆಡ್ ಸೆಟ್ ಹಾಕಿಕೊಂಡು ಯಾವುದೋ ರೀಲ್ ನೋಡುತ್ತಾ ನಗುತ್ತಿದ್ದರು."

ಅಪಉಪಸಂ ನಿಟ್ಟುಸಿರು ಬಿಟ್ಟರು. "ಏನಮ್ಮಾ.ಎಲ್ಲರೂ ರೀಲ್ಸ್ ರೀಲ್ಸ್ ಅಂತಾರಲ್ಲ, ಅದೇನು ಅಷ್ಟೊಂದು ಚೆನ್ನಾಗಿರುತ್ತಾ?"

"ಅಯ್ಯೋ ಎಲ್ಲರೂ ಒಬ್ಬರಿಂದ ಇನ್ನೊಬ್ಬರು ಕಾಪಿ ಮಾಡಿಕೊಂಡು ರೀಲ್ಸ್ ಮಾಡ್ತಾ ಇದಾರೆ ಸರ್. ಒಬ್ಬರು ಒಂದು ರೆಸಿಪಿ ಹಾಕಿದರೆ ಅದನ್ನು ಕದ್ದು ಹತ್ತು ಜನ ಅದೇ ರೀತಿ ರೆಸಿಪಿ ಹಾಕ್ತಾರೆ. ಅತ್ತೆ ಸೊಸೆ ಜೋಕ್ಸ್, ಗಂಡ ಹೆಂಡತಿ ಜೋಕ್ಸ್ ಎಲ್ಲಾ ಏಕಪ್ರಕಾರ. ಪುಟ್ಟ ಮಕ್ಕಳ ಬಾಯಲ್ಲಿ ದೊಡ್ಡವರ ಮಾತು ಹೇಳಿಸಿ ಅದನ್ನು ಜೋಕ್ ಅಂತ ಪ್ರಚಾರ ಮಾಡ್ತಾರೆ. ಕೆಲವರು ಏಐ ಬಳಸಿಕೊಂಡು ಫೇಕ್ ವಿಡಿಯೋ ಮಾಡ್ತಾ ಇದ್ದಾರೆ. ಜನರಿಗೆ ಹೊತ್ತು ಹೋಗೋದಿಲ್ಲ ಅಂತ ಇದನ್ನೆಲ್ಲ ನೋಡ್ತಾ ಕಾಲ ಕಳೀತಿದ್ದಾರೆ."

"ಮುಂದಿನ ಪೀಳಿಗೆ ಜನ ಓದೋದನ್ನೇ ಮರೆತುಬಿಡ್ತಾರಾ? ಹಾಸ್ಯ ಸಾಹಿತ್ಯ ಎಲ್ಲಿಗೆ ಹೋಗುತ್ತೆ?"

"ಹಾಗೇನೂ ಇಲ್ಲ ಸರ್. ಹಾಸ್ಯ ಸಾಹಿತ್ಯ ಎಲ್ಲೂ ಮಾಯವಾಗಿ ಹೋಗೋದಿಲ್ಲ. ಓದುವವರು ಈಗಲೂ ಓದುತ್ತಿದ್ದಾರೆ. ಆನ್ಲೈನ್ ಪತ್ರಿಕೆಗಳು, ಬ್ಲಾಗುಗಳು ಇವೆಲ್ಲ ಕೂಡಾ ಚಾಲ್ತಿಯಲ್ಲಿವೆ. ನೀವು ಅಪರಂಜಿಯನ್ನ ಆನ್ಲೈನ್ ಮಾಧ್ಯಮಕ್ಕೆ ಹೊಂದಿಸಿಕೊಳ್ಳಬಾರದೆ? ಅದರಲ್ಲಿ ಪ್ರಕಟವಾಗುವ ಕತೆಗಳನ್ನು ರೀಲ್ಸ್ ಮಾಡಿ ಹಾಕಿ. ಆನ್ಲೈನ್ ಪತ್ರಿಕೆಯಾಗಿ ಮಾರ್ಪಡಿಸಿ. ಪತ್ರಿಕೆಯ ಹಳೇ ಬರಹಗಳನ್ನು ಡಿಜಿಟಲ್ ಮಾಧ್ಯಮಕ್ಕೆ ಹೊಂದಿಸಿ. ಜನರಿಗೆ ಹಾಸ್ಯ ಬೇಕು. ಆದರೆ ಪತ್ರಿಕೆ ತರಿಸಿಕೊಂಡು ಓದುವಷ್ಟು ವ್ಯವಧಾನ ಇಲ್ಲ. ಮೊಬೈಲ್ ಫೋನ್ ಮೇಲೆ ಎಲ್ಲವನ್ನೂ ಓದುವ ಖಯಾಲಿ. ಅಂದಹಾಗೆ ನಿಮ್ಮ ಸ್ಟಾಪ್ ಬಂತು."

"ಸರಿ ರಂಜಿತಾ, ಬರ್ತೀನಮ್ಮ. ನೋಡು, ಕೊರವಂಜಿ ಪತ್ರಿಕೆ ಸ್ಥಾಪಿಸಿದರಲ್ಲ ಆರ್ ಶಿವರಾಂ, ಅವರು ಒಂದು ಜೋಕ್ ಹೇಳುತ್ತಿದ್ದರು. ಕೊರವಂಜಿ ಪತ್ರಿಕೆಯ ಕೊನೆಯ ಸಂಪುಟದಲ್ಲಿ....."

"ಗೊತ್ತು ಸರ್. ಹೊರಟೆಯಾ ಕೊರವಂಜಿ, ನೀನು ಇದ್ದಿದ್ದೇ ಗೊತ್ತಾಗಲಿಲ್ವಲ್ಲೇ ಅಂತ ಜೋಕ್ ಮಾಡಿದರಂತೆ!"

"ಈಗ ಎಲ್ಲರೂ ಕೊರವಂಜಿ ಇರಬೇಕಾಗಿತ್ತು ಅಂತ ನೆನೆಸಿಕೊಳ್ತಾರೆ!" ಎಂದು ಅಪಉಪಸಂ ಬೇಸರಿಸಿಕೊಂಡು ಹೇಳಿದರು.

ಅವರು ಕ್ಯಾಬಿನಿಂದ ಇಳಿದು ಹೊರಗೆ ಬಂದಾಗ ಒಬ್ಬ ವಯಸ್ಸಾದ ವ್ಯಕ್ತಿ ಅವರನ್ನು ಸಮೀಪಿಸಿದ. ಅವನು ಬಿಳಿಯ ಬಣ್ಣದ ಕೃತಕ ನೀಳ ಗಡ್ಡ ತೊಟ್ಟಿದ್ದ. ಕೆಂಪು ಡ್ರೆಸ್ ಹಾಕಿಕೊಂಡಿದ್ದ. ಸಾಂಟಾ ಕ್ಲಾಸ್ ಮಾದರಿಯಲ್ಲಿ ಟೋಪಿ ಕೂಡಾ ಹಾಕಿಕೊಂಡಿದ್ದ. ಆದರೆ ನರಪೇತಲ ವ್ಯಕ್ತಿ. "ಸಾಂಟಾ ವಿಪರೀತ ಡಯೆಟ್ ಮಾಡಿರಬೇಕು. ನಾನು ಅಪಉಪಸಂ, ಇವನು ಅಪಉಪಾಸಂ!" ಎಂದು ಅಪಉಪಸಂ ಒಳಗೊಳಗೇ ನಕ್ಕರು.

ಸಾಂಟಾ ಡ್ರೆಸ್ ಧರಿಸಿದ ವ್ಯಕ್ತಿ "ಮೆರ್ರಿ ಕ್ರಿಸ್ಮಸ್" ಎಂದು ಕೈ ಕುಲುಕಿ ಮುಂದೆ ಹೋದ. ಅಪಉಪಸಂ ಅವನು ಕೈಯಲ್ಲಿ ತುರುಕಿದ ವಸ್ತುವನ್ನು ಆಸಕ್ತಿಯಿಂದ ನೋಡಿದರು. ಅದೊಂದು ಪೆನ್ ಡ್ರೈವ್ ಮಾದರಿಯ ಉಪಕರಣ. ಅದರ ಮೇಲೆ ಕಾಣಿಸಿದ ಸ್ವಿಚ್ಚನ್ನು


ಅವರು ಕುತೂಹಲದಿಂದ ಒತ್ತಿದರು. ಒಮ್ಮೆಲೇ ಒಂದು ನೀಲಿ ಬಣ್ಣದ ಬೆಳಕು ಉಪಕರಣದಿಂದ ಹೊರಬಂದಿತು. ಎಲ್ಲೆಲ್ಲೂ ಹೊಗೆಯ ವಾತಾವರಣ ಸೃಷ್ಟಿಯಾಯಿತು. ಅವರು ಸಾವರಿಸಿಕೊಂಡು ದಿಟ್ಟಿಸಿ ನೋಡಿದರು. ಅಲ್ಲಿ ಅಪರಂಜಿ ಕಾಣಿಸಿದಳು. ಅವಳ ಜೊತೆ ರಂಜಿತಾ! ಅಮ್ಮನ ತದ್ರೂಪ! ಅಪರಂಜಿ ಎಂದಿನಂತೆ ಸೀರೆ ಉಟ್ಟಿದ್ದಳು. ರಂಜಿತಾ ಆಧುನಿಕ ಉಡುಪು ತೊಟ್ಟು ಕೈಯಲ್ಲಿ ಒಂದು ಬ್ಯಾಗ್ ಇಟ್ಟುಕೊಂಡು ಬರುತ್ತಿದ್ದಳು. ಇಬ್ಬರೂ ಅಲ್ಲೇ ಇದ್ದ ಮಾಲ್ ಒಳಗೆ ಪ್ರವೇಶಿಸಿದರು.

**"**ಅಪರಂಜಿ! ರಂಜಿತಾ!**"** ಎಂದು ಅಪಉಪಸಂ ಕೂಗಿದರು.

**"**ಯಾರ್ರೀ ಅವಳು, ರಂಜಿತಾ?**"** ಎಂದು ಹೆಂಡತಿ ಜೋರು ಧ್ವನಿಯಲ್ಲಿ ಕೇಳಿದಾಗ ಅಪಉಪಸಂ ಕಣ್ಣುಜ್ಜಿಕೊಂಡು ಎದ್ದರು.

■






## ಪುಸ್ತಕ ಪರಿಚಯ :

**ನಾಕೊಂದ್ಲ ನಾಕು...!**

**ಲೇಖಕರು : ನಳಿನಿ ಟಿ ಭೀಮಪ್ಪ**

ಪ್ರಕಾಶಕರು :

ಸಾಹಿತ್ಯಲೋಕ ಪಬ್ಲಿಕೇಷನ್ಸ್

ಪುಟಗಳು 152, ಬೆಲೆ ರೂ.195

ಪ್ರತಿಗಳಿಗೆ ಸಂಪರ್ಕಿಸಿ ;


94837 72116

ನಾಕೊಂದ್ಲ ನಾಕು ಕೃತಿ ಕೈಯಲ್ಲಿ ಹಿಡಿದ ಪುಸ್ತಕವನ್ನು ಓದಿ ಮುಗಿಸುವವರೆಗೂ ಕೆಳಗಿಡಲು ಮನಸಾಗದಂತೆ ಓದಿಸಿಕೊಳ್ಳುತ್ತವೆ ಈ ಕೃತಿ ನಳಿನಿಯವರ ನಾಲ್ಕನೇ ಪ್ರಬಂಧ ಸಂಕಲನ. ಇವರ ಬರಹಗಳಿಗಷ್ಟೇ ಅಲ್ಲ ಬರಹಗಳು ಹೊಮ್ಮಿಸುವ ನಗುವಿಗೂ ಬ್ರೇಕಿಲ್ಲ. ದಿನ ನಿತ್ಯದ ಆಗು ಹೋಗುಗಳಲ್ಲಿಯೇ ವಸ್ತುವಿಷಯವನ್ನು ದಕ್ಕಿಸಿಕೊಳ್ಳುತ್ತಾರೆ ನಳಿನಿ. ಹೇಳಬೇಕಾದುದನ್ನು ನೀರಸವಾಗಿ ಹೇಳದೇ ಪ್ರತಿಯೊಂದು ಪದಗಳಲ್ಲೂ, ಸಾಲಿನಲ್ಲೂ ಹೇಳಬೇಕಾದ ವಿಷಯವನ್ನು ವಿಸ್ತರಿಸಿ ನಗುವಿನ ಬುಗ್ಗೆಯನ್ನು ಚಿಮ್ಮಿಸುತ್ತಾರೆ.

ಈ ಕೃತಿಯಲ್ಲಿನ ಮೂವತ್ತಾರೂ ಪ್ರಬಂಧಗಳು ಮನಸಿಗೆ ಮುದ ನೀಡುತ್ತವೆ. ಬಹಳಷ್ಟು ಪ್ರಬಂಧಗಳು ಅಪರಂಜಿಯಲ್ಲಿ ಪ್ರಕಟವಾಗಿ ಓದುಗರ ಮೆಚ್ಚುಗೆ ಗಳಿಸಿವೆ. ಒಂದಿನಿತೂ ಬೇಸರ ತರಿಸದೇ ಓದಿಸಿಕೊಂಡು ಹೋಗುತ್ತವೆ.

ಲೇಖಕಿಯು ಬದುಕನ್ನು ಅನನ್ಯವಾಗಿ ಕಾಣುವ, ಅನುಭವಿಸುವ ಪರಿ ಖುಷಿ ಕೊಡುತ್ತದೆ. ಇವರ ಮುದಕೊಡುವ ಹಾಸ್ಯ, ಪ್ರಬಂಧಗಳು ನಾಡಿನ ಒಂದಲ್ಲಾ ಒಂದು ಪತ್ರಿಕೆಯಲ್ಲಿ ಪ್ರಕಟಣೆ ಕಾಣುತ್ತಲೇ ಇರುವುದರ ಗುಟ್ಟು ಎಂದರೆ ಲೇಖಕಿಗೆ ಇರುವ ಸೂಕ್ಷ್ಮ ಹಾಸ್ಯಪ್ರಜ್ಞೆ, ಕಣ್ಣಿಗೆ ಕಾಣುವ ಹಲವಾರು ಸಂಗತಿಗಳಿಗೆ ತಲೆಬರಹಗಳಿಂದಲೇ ಹಾಸ್ಯ ತುಂಬಿ ಕಳಿಸುವ ಗುಣ ಇವರಿಗೆ ಸಿದ್ಧಿಸಿವೆ. ಜೊತೆಗೆ ಪನ್ ಮಾಡುವ ಚಾಕಚಕ್ಯತೆ ಲೇಖಕಿಗೆ ಇದೆ.

ಚೆಂದದ ಮುಖಪುಟವುಳ್ಳ ಈ ಕೃತಿಗೆ ಪ್ರಬಂಧಗಳಿಂದಲೇ ಗುರುತಿಸಿಕೊಂಡ ಲೇಖಕಿ ಸುಮಾ ರಮೇಶ ಅವರು ಮುನ್ನುಡಿ ಬರೆದು ಹಾರೈಸಿದ್ದಾರೆ. ಲೇಖಕಿ ನಳಿನಿ ಭೀಮಪ್ಪ ಅವರಿಗೆ ಅಪರಂಜಿಯ ಪರವಾಗಿ ಅಭಿನಂದನೆಗಳು. ■




## ಪುಸ್ತಕ ಪರಿಚಯ

### ಚೆಲ್ಲಿದರು ಮಲ್ಲಿಗೆಯ

**ಲೇಖಕಿ : ಸುಮಾ ರಮೇಶ್**

ಸಾಹಿತ್ಯಲೋಕ ಪಬ್ಲಿಕೇಷನ್ಸ್

ಪುಟಗಳು : 152

ಬೆಲೆ : ರೂ. 195

ಪ್ರತಿಗಳಿಗೆ ಸಂಪರ್ಕಿಸಿ :


98868 82283

ಅಪರಂಜಿಯ ಬರಹಗಾರ್ತಿ ಸುಮಾ ರಮೇಶ್ ಅವರು ಈ ಪುಸ್ತಕದಲ್ಲಿ ಸೊಗಸಾದ ಮೂವತ್ತು ನಗೆ ಮಲ್ಲಿಗೆಗಳನ್ನು ಪೋಣಿಸಿ ಬಲು ಚಂದದ ಹಾರ ಮಾಡಿ ಓದುಗರಿಗೆ ಅರ್ಪಿಸಿದ್ದಾರೆ. ಇವುಗಳಲ್ಲಿ ಅಪರಂಜಿಯಲ್ಲಿ ಪ್ರಕಟವಾದ ಲೇಖನಗಳೂ ಇವೆ ಎನ್ನುವುದು ಮುಖ್ಯ ಅಲ್ಲಲ್ಲಿ ಗಾದೆ ಮಾತುಗಳು ನುಡಿಗಟ್ಟುಗಳು ಸಂದರ್ಭಾನುಸಾರವಾಗಿ ಬಳಕೆಯಾಗಿ ಓದುಗರಿಗೆ ಮುದ ನೀಡುತ್ತವೆ.ಇಲ್ಲಿ ಬರೀ ನಗುವಿಲ್ಲ, ಜೊತೆಗೆ ಚಿಂತನ, ಮಂಥನ, ಅರ್ಥಗರ್ಭಿತ ವಿಚಾರಗಳು, ಮುಂತಾದ ಪ್ರಸ್ತುತ ಸಮಾಜದ ಅನೇಕ ವಿಚಾರಗಳಿವೆ. ಯಾವುದೇ ಒಂದು ವಿಚಾರವನ್ನು ತೀರ ವಿಭಿನ್ನವಾದ ದೃಷ್ಟಿಕೋನದಿಂದ ನೋಡಿ ಅದನ್ನು ಸರಳವಾಗಿ ಹಾಸ್ಯಮಯವಾಗಿ, ನಿರೂಪಿಸುವುದು ಲೇಖಕಿಗೆ ಸಿದ್ಧಿಸಿದೆ. ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ ಲೇಖಕಿ ನಮ್ಮ ದಿನನಿತ್ಯದಲ್ಲಿ ನಡೆಯುವಂತಹ ಘಟನೆಗಳನ್ನು ಗಮನಿಸಿ ಅವುಗಳಿಗೆ ಸೂಕ್ತವಾದ ತಲೆಬರಹವನ್ನು ಕೊಟ್ಟು ತಮ್ಮ ವಿಚಾರ ಲಹರಿಯಿಂದ ಸೊಗಸಾದ ನಗು ಮೂಡುವಂತೆ ಮಾಡುವುದರಲ್ಲಿ ನಿಷ್ಣಾತರು.


ಇವರ ಯಾವುದೇ ಬರಹವೂ ಸಹ ಓದುವುದಕ್ಕೆ ಕಷ್ಟ ಎನಿಸಿಕೊಳ್ಳುವುದಿಲ್ಲ. ಒಂದು ಕಿತ್ತಳೆ ಹಣ್ಣನ್ನೋ ಮೂಸಂಬಿ ಹಣ್ಣನ್ನೋ ಸಿಪ್ಪೆ ಬಿಡಿಸಿದಾಗ ತೊಳೆಗಳು ಬಿಡಿಸಿಕೊಳ್ಳುವಂತೆ ಇವರ ಲೇಖನದ ಒಂದೆರಡು ಸಾಲುಗಳನ್ನು ಓದುವುದರಲ್ಲಿ ಮಿಕ್ಕ ಸಾಲುಗಳು ತಮಗೆ ತಾವೇ ಅನಾವರಣಗೊಳ್ಳುತ್ತಾ ಹೋಗುತ್ತವೆ.

ಲೇಖಕಿ ಸುಮಾ ರಮೇಶ್ ಅವರಿಗೆ ಅಪರಂಜಿಯ ಪರವಾಗಿ ಅಭಿನಂದನೆಗಳು ಮತ್ತು ಶುಭಾಶಯಗಳು.

■



ಹಡ್ಸನ್ ನದಿ ಕಣಿವೆ
ಯಲ್ಲೆಲ್ಲಾ ಸುವಿಖ್ಯಾತ
ಕೋಳಿ ಕುಕ್ಕ ( ಹೆನ್ ಪೆಕ್ಡ್)
ಗಂಡ ಯಾರು ಗೊತ್ತೆ ?
ರಿಪ್
ವಾನ್
ವಿಂಕಲ್
ಮೂಲ: ಪಂಚ್
ಕನ್ನಡಕ್ಕೆ: ಶಿವು
ಗನ್ನಿಸ್‌ಗಿಂತ ಮುಂಚೆ ನಾನು ಹುಟ್ಟಿ ಇದ್ರೆ ಅತೀ ದೊಡ್ಡ ಗಯ್ಯಾಳಿ ಗಂಡ ಅನ್ನೋ ದಾಖಲೆ ಗನ್ನಿಸ್ ಪುಸ್ತಕದಲ್ಲಿ ಬರ್ತಿತ್ತು!
ಯಾವ ಗನ್ನಿಸ್? ಯಾರು ಗಯ್ಯಾಳಿ? ಕೊಲಗಾಚಿ !
ತನ್ನ ಗೆಳೆಯರೊಂದಿಗೆ ರಿಪ್ ರಾಜಕೀಯ ಚರ್ಚಿಸ್ತಾ ಇದ್ದ.
ಟ್ರಂಪ್‌ಗೆ ಗ್ರೀನ್‌ಲ್ಯಾಂಡ್ ಬೇಕಂತೆ!
ಡಿ.ಕೆ.ಶಿಗೆ ಪದವಿ ಸಿಗುತ್ತೇ?
ನಿಜ ನಿಜ
ಇಲ್ಲೇ ಇದ್ದೀಯಾ, ಸೋಮಾರಿ ಗೂಟ ನಿನ್ನ ಮುಖ ತೋರಿಸ್ಬೇಡ ನಿನ್ನ ನಾಯೀನೂ ಸಹಾ.
ಆಗಲಿ ಕಣೇ
ಆಗಲಿ ಕಣೇ
ಜುಗುಪ್ಸೆಯಿಂದ ರಿಪ್ ಕ್ಯಾಟ್ಸ್ಕಿಲ್ ಬೆಟ್ಟಗಳಲ್ಲಿ ಅಳಿಲು ಬೇಟೆಗೆ ಹೊರಟ
ಛೇ! ತಿರುಗಿ ಗುರಿ ತಪ್ಪಿತು. ಅದ್ಯಾರು ನನ್ನ ಕರೀತಾ ಇರೋದು? ನನ್ನ ಹೆಂಡ್ತಿನೇ


ಛೇ! ಏನಾದ್ರೂ ಸಹಾಯ ಬೇಕೆ?
ಗುಡುಗು ಕೇಳಿಸ್ತಾ ಇದೆ !
ಕುಳ್ಳರು ಆಟ ಆಡ್ತಿದಾರೆ!
ಛೇ ಪೀಪಾಯಲ್ಲಿ ರುಚಿಯಾದ
ಮದ್ಯ!
ಆಟ ನೋಡ್ತಾ ರಿಪ್ ಮದ್ಯದ ರುಚಿ ನೋಡಿದ.
ಕಂಠಪೂರ್ತಿ ಕುಡಿಯಲು ಪ್ರಾರಂಭಿಸಿದ
ಅಲ್ಲಾ, ಅಲ್ಲಿ ಟ್ರಂಪ್ ಅಮೆರಿಕಾ ದಹನ ಮಾಡ್ತಾ
ಇದ್ರೆ ಇಲ್ಲಿ ಈ ಕುಳ್ಳರು ಆಟ ಆಡ್ತಿದಾರಲ್ಲಾ !
ಯಾಕೋ ನಿದ್ದೆ ಬರ್ತಾ ಇದೆ. ಸ್ವಲ್ಪ ಮಲಗ್ತೀನಿ !
ಆಯ್ಯೋ ದೇವ್ರೇ 1 ರಾತ್ರಿಯೆಲ್ಲಾ
ಇಲ್ಲೇ ಮಲಗ್ಬಿಟ್ಟೆ ಅಂತ ಕಾಣುತ್ತೆ !
ಬಂದೂಕೆಲ್ಲಾ ತುಕ್ಕು ಹಿಡಿದಿದೆ.
ಅರೆ ಈ ಗಡ್ಡ ಯಾರ್ದೂ ?
ರಿಪ್ ಹಳ್ಳಿಗೆ ಹಿಂತಿರುಗಿದ.ಎಲ್ಲಾ ಹೊಸ
ಮುಖಗಳು. ಒಬ್ನೇ ಗುರುತು ಸಿಕ್ಕಿದ್ದು
(ಅರೆ, ಅದು ನಾನಲ್ವೇ !
ಅವ್ನು ನನ್ನ ಮಗ ಅಂತ ಆಮೇಲೆ ತಿಳೀತು.
ಇಪ್ಪತ್ತು ವರ್ಷ ಆಗಿತ್ತು ಇವಾಂಕ ಅಧ್ಯಕ್ಷಿಣಿ
ಅಂತೆ ಈವಾಗ !
ನೀತಿ :ಗಯ್ಯಾಳಿ
ಹೆಂಡ್ತಿಗೆ ಗುಂಡೇ ಮದ್ದು!!!

ದಂನಆ

- ✓ ಜಗತ್ತಿನ ಅಗ್ಗದ ವಸ್ತುವೆಂದರೆ ಸಲಹೆ. ಒಬ್ಬರನ್ನು ಕೇಳಿದರೆ ಸಾವಿರ ಜನ ನೀಡುತ್ತಾರೆ. ದುಬಾರಿ ವಸ್ತುವೆಂದರೆ ಸಹಾಯ. ಸಾವಿರ ಜನರನ್ನು ಕೇಳಿದರೆ ಒಬ್ಬರು ಮಾಡುತ್ತಾರೆ.
- ✓ ದೀರ್ಘ ಕಾಲದ ನೆಮ್ಮದಿಗೆ ತಾತ್ಕಾಲಿಕ ನೋವನ್ನು ಸಹಿಸಿಕೊಳ್ಳಬೇಕು.
- ✓ ಸಿಟ್ ವಿತ್ ಪೀಪಲ್ ಹು ಪ್ರೊಟೆಕ್ಟ್ ಯುವರ್ ನೇಮ್ ಇನ್ ಯುವರ್ ಅಬ್ಸೆನ್ಸ್.
- ✓ ಗೋಡೆಗಳಲ್ಲಿ ಬಿರುಕು ಬಿಟ್ಟರೆ ಗೋಡೆಗಳು ಬಿದ್ದು ಹೋಗುತ್ತವೆ. ಸಂಬಂಧಗಳಲ್ಲಿ ಬಿರುಕು ಬಿಟ್ಟರೆ ಗೋಡೆಗಳು ಹುಟ್ಟಿಕೊಳ್ಳುತ್ತವೆ.
- ✓ ನಿನ್ನ ಅನುಪಸ್ಥಿತಿ ಅವರನ್ನು ಕಾಡಲಿಲ್ಲ ಎಂದರೆ ನಿನ್ನ ಉಪಸ್ಥಿತಿ ಅಲ್ಲಿ ಅವಶ್ಯಕತೆ ಇಲ್ಲ ಎಂದರ್ಥ.
- ✓ ಟು ಸೀ ಗಾಡ್ ಯು ನೀಡ್ ಟು ಪೆ ದಿ ಪ್ರೀಸ್ಟ್.
- ✓ ಬದುಕಿನಲ್ಲಿ ಹೆಜ್ಜೆ ಗುರುತು ಉಳಿಸಿ ಹೋಗುವುದು ನಡಿಗೆಯಿಂದಲ್ಲ, ನಡತೆಯಿಂದ.
- ✓ ಬೇರೆಯವರಲ್ಲಿ ಒಳ್ಳೆಯದನ್ನು ಹುಡುಕು, ನಿನ್ನಲ್ಲಿ ಕೆಟ್ಟದ್ದನ್ನು ಹುಡುಕು.
- ✓ ಅನ್ ಐಡಲ್ ಮೈಂಡ್ ಡಸ್ ನಾಟ್ ರೆಸ್ಟ್. ಇಟ್ ಬಿಗಿನ್ಸ್ ಟು ರಾಟ್.
- ✓ ಎದ್ದು ನಿಂತು ಮಾತನಾಡುವದಷ್ಟೇ ತಾಕತ್ತಲ್ಲ. ಸುಮ್ಮನೆ ಕುಳಿತು ಮಾತುಗಳನ್ನು ಕೇಳಿಸಿಕೊಳ್ಳುವ ತಾಳ್ಮೆಯೂ ಒಂದು ತಾಕತ್ತು.
- ✓ ಒಬ್ಬರನ್ನು ಬಿಟ್ಟು ಹೋಗುವ ಮುನ್ನ ಇಷ್ಟು ದಿನ ಅವರೊಡನೆ ಯಾಕಿದ್ದೆ ಎಂದು ಯೋಚಿಸಿ.
- ✓ ಐ ಯೂಸ್ಡ್ ಟು ಸೆಲ್ ಫರ್ನೀಚರ್ ಫಾರ್ ಎ ಲಿವಿಂಗ್. ದಿ ಟ್ರಬಲ್ ವಾಸ್ ಇಟ್ ವಾಸ್ ಮೈ ಓನ್.
- ✓ ನಮ್ಮ ಮುಂದೆ ಮಾತನಾಡುವ ಧೈರ್ಯ ಇಲ್ಲದವರು ಅವರ ಯೋಗ್ಯತೆ ತಕ್ಕಂತೆ ಬೆನ್ನು ಹಿಂದೆ ಮಾತನಾಡುತ್ತಾರೆ. ಅಂತಹವರಿಗೆ ಮಾತನಾಡಿಕೊಳ್ಳಲು ಒಳ್ಳೆಯ ಟಾಪಿಕ್ ನಾವು ಕೊಡಬೇಕು ಅಷ್ಟೆ.
- ✓ ಟೈಂ ಈಸ್ ಎ ಕ್ರಿಯೇಟೆಡ್ ಥಿಂಗ್. ಟು ಸೆ 'ಐ ಡೋಂಟ್ ಹ್ಯಾವ್ ಟೈಮ್' ಈಸ್ ಲೈಕ್ ಸೇಯಿಂಗ್ 'ಐ ಡೋಂಟ್ ವಾಂಟ್ ಟು'.
- ✓ ಒಂದು ಗ್ರಾಂನಷ್ಟು ಮುನ್ನೆಚ್ಚರಿಕೆ ತೆಗೆದುಕೊಂಡರೆ ಒಂದು ಕಿಲೋದಷ್ಟು ಗೊಂದಲ ತಪ್ಪಿಸಬಹುದು.

■

# ಬೆಂಗಳೂರಿನಕೆರೆ, ಗುಂಡಿಗಳಮಧ್ಯೆಗಪ್ಪ !

**ಇ.ಆರ್. ರಾಮಚಂದ್ರನ್**

ಬೆಂಗಳೂರಿನಲ್ಲಿ ತಳವೂರಿ ಕೂತಿರುವ ಗುಂಡಿಗಳು ವಿಶ್ವದಲ್ಲೆಲ್ಲಾ ಪ್ರಸಿದ್ಧಿಯಾಗಿಬಿಟ್ಟಿವೆ! ರಾಜ್ಯದ ವಿಧಾನ ಸೌಧದ ಚರ್ಚೆಯಿಂದ ಶುರುವಾಗಿ, ದೆಹಲಿಯ ಪಾರ್ಲಿಮೆಂಟ್ ಸೇರಿ ಪ್ರಪಂಚದ ಯಾವುದೋ ಮೂಲೆಯಾದರೂ ಸರಿ ಅಲ್ಲಿ ಬೆಂಗಳೂರಿನ ಗುಂಡಿಗಳ ಗುಣಗಾನವಾಗುತ್ತೆ!

ಬೆಂಗಳೂರಿನ ಟ್ರಾಫಿಕಲ್ಲಿ ಟೆಕ್ಕಿಗಳು ಸಿಕ್ಕಿಹಾಕಿಕೊಂಡು, ದಿನಾ ಆಫೀಸಿಗಿಂತ ರಸ್ತೆಯಲ್ಲೇ ಜಾಸ್ತಿ ಕಾಲ ಕಳೆಯುವುದರಿಂದ ಗುಂಡಿಗಳಿಗೂ ಐಟಿ ಗಾಳಿ ಬೀಸಿ ಅವುಗಳು ಒಬ್ಬರಿಬ್ಬಗೊಬ್ಬರು ಚಾಟ್/ಫೋನ್ ಮಾಡಿದರೆ ಆಶ್ಚರ್ಯವೇನಿಲ್ಲ!

ಮೊನ್ನೆ ಬೆಳ್ಳಂದೂರಿನ ಕೆರೆ, ಕೋರಮಂಗಲ ಮತ್ತು ಬನ್ನೇರಘಟ್ಟಗುಂಡಿ–ಮೂವರೂ ಸೇರಿ ಗಪ್ಪ ಹೊಡೆದ್ರಂತೆ. ಇದು ಹೇಗೆ ಗೊತ್ತಾಯ್ತು?

ಬೆಂಗಳೂರಿನ 'ಇಲಿ ಮತ್ತು ಹೆಗ್ಗಣದ' ವಾಟ್ಸಾಪ್ ಗ್ರೂಪಿನವರಿಗೆ ಅಚಾನಕ್ಕಾಗಿ ಗೊತ್ತಾಗಿ ಅದರ ರೇಕಾರ್ಡಿಂಗನ್ನ ಪಬ್ಲಿಕ್ ಮಾಡಿದ್ದಾರೆ!

ಬೆಳ್ಳಂದೂರ್ ಕೆರೆ (ಬೆ. ಕೆ): 'ಹಲೋ! ಗುಡ್ ಇವಿನಿಂಗ್! ನಾವು ಇಲ್ಲಿಗೆ ಬಂದು ನೆಲಸಿ 25 ವರ್ಷ ಆಗ್ತಾ ಬಂತು! ಸಿಲ್ವರ್ ಜ್ಯೂಬಿಲಿ ಆಚರಿಸಬೇಕು ಈ ವರ್ಷ.'

ಕೋರಮಂಗಲ ಗುಂಡಿ (ಕೋ. ಗುಂ): ಹೌದಲ್ಲ! 25 ವರ್ಷ ಓಡಿಹೋದ ಹಾಗೆ ಅಂತ ಅನ್ಸುತ್ತೆ. ಹೋಗಿದ್ದು ಗೊತ್ತಾಗಲೇ ಇಲ್ಲ! ನಮ್ಮ ಅಕ್ಕ ಪಕ್ಕದಲ್ಲೆ ಮಕ್ಕಳು, ಮರಿಗಳು ಅವುಗಳನ್ನ ಸಾಕ್ತ, ಅವುಗಳನ್ನ ನೋಡ್ಕೊಳ್ತಿದ್ರಲ್ಲಿ ಟೈ ಮ್ ಹೋಗಿದ್ದೇ ನಮಗೆ ಗೊತ್ತಾಗ್ಲಿಲ್ಲ ನೋಡು! ನಮ್ಮ ಹುಡುಗ್ರು ಈಗ ಎಐ ಕಲಿತ ಇದಾರೆ. ಸಿಲಿಕಾನ್ ಸಿಟಿಲಿದ್ರೆ ಇದೆಲ್ಲ ಎಷ್ಟು ಅನುಕೂಲ ಅಲ್ವಾ?'

(ಬೆ. ಕೆ): ನೀವೆಲ್ಲ ಮನೇಲಿ ಐ ಟಿ ಗೆ ಹೋದ್ರಿ. ನಾವೆಲ್ಲ ಹೈಡ್ರಾಲಿಕ್ಸ ಗೆ ಹೋದ್ವಿ. ಮಳೆಗಾಲದಲ್ಲಿ ಕೊಚ್ಚೆ, ಆಸಿಡ್, ಪೆಟ್ರೋಲ್, ಡೀಸಲ್ ನಿಂದ ನಮ್ಮ ಕೆರೆಯಲ್ಲಿ ಕಲ್ಮಶದಿಂದ ಕಾಶ್ಮೀರದಲ್ಲಿ ಮಂಜು ಬೀಳುವ ಹಾಗೆ ಬಿಳಿ ಕಸಗಳು ಉತ್ಪತ್ತಿಯಾಗುತ್ತೆ! ಕೆರೆಯ ಮಧ್ಯೆ ಸರ್ಕಸ್ಸಿನಲ್ಲಿ ತೋರಿಸುವ ಹಾಗೆ ಬೆಂಕಿ ಉರೀತಿರುತ್ತೆ! ಎಲ್ಲಾ ಕಡೆ ದಮ್ ಕಟ್ಟುವ ಹಾಗೆ ಹೊಗೆ ಇರುತ್ತೆ. ಇದರ ಮಧ್ಯೆ ನಾವು ಆರಾಮವಾಗಿ ಇದೀವಿ! ಏನೋ ಶಬ್ಧ ಆಯ್ತಲ್ಲ ಏನದು?

(ಕೋ. ಗುಂ) : 'ಅದು ನಮ್ಮ ಡೆಪ್ಯೂಟಿ ಸಿಎಂ ಮತ್ತು ಅವರು ನಮ್ಮ ಮೇಲೆ ಉಳಿದಿರುವ ರಸ್ತೆಮೇಲೆ ಅವರ ಕಾರ್ ಹೋದಾಗ ಬರುವ ಶಬ್ಧ! ಅವರು ವಾರಕ್ಕೆ ಎರಡು ಸಲ ಇನ್ಸ್ಪೆಕ್ಷನ್ ರೌಂಡ್ಸ್ಗೆ ಬರ್ತಾರೆ. ಇದು ಮಾಮೂಲು.ಇಲ್ಲಿರುವ ಬಯ್ಯೋ ಕಾನ್ ಎಂಡಿ ಷಾ ನಮ್ಮನ್ನು ಇಲ್ಲಿಂದ ಓಡಿಸಲು ಸರ್ಕಾರಕ್ಕೆ ಬೆದರಿಕೆ ಹಾಕಿದ್ದಾರೆ!'

ಬನ್ನೇರ್ ಘಟ್ಟ ಗುಂಡಿ( ಬಗು) ಬಾಯಿಹಾಕಿ,

'ನಾನು ಕೇಳಿಸಿಕೊಂಡೆ. ನಾವು ನಮ್ಮ ತಾತ, ಮುತ್ತಾತ ಕಾಲದಿಂದ ಇಲ್ಲಿ ವಾಸವಾಗಿದ್ದೇವೆ. ಎಸ್ ಎಂ ಕೃಷ್ಣ, ದೇವೇಗೌಡಜಿ ಅವರ ಅತಿಥ್ಯದಲ್ಲಿ ಬಂದು, ಮುಂದೆ ಯಡಿಯೂರಪ್ಪ, ಕುಮಾರಸ್ವಾಮಿ ಅವರ ಆಶ್ರಯದಲ್ಲಿ ಇಲ್ಲಿ ವಾಸ್ತವ್ಯ

ಹೂಡಿದ್ದೇವೆ.. ನಮ್ಮನ್ನು ಇಲ್ಲಿಂದ ಓಡಿಸಲು ಯಾವ ಶಕ್ತಿಗೂ ಆಗಲ್ಲ.'.




(ಕೋ. ಗುಂ): ಇವರ ಜೊತೆ ಮುಖ್ಯವಾದವರನ್ನ ನಾವು ಯಾವತ್ತೂ ಮರೆಯಬಾರದು. ಇಲ್ಲಿ ಕೆಲಸ ಮಾಡಿದ ಕಂಟ್ರಾಕ್ಟರ್ಗಳು ಮತ್ತು ಬಿಬಿಎಂಪಿ ಎಂಜಿನಿಯರ್ಗಳು ನಮ್ಮ ಮೇಲೆ ಆಗಾಗ್ಗೆ ಸಿಮೆಂಟಿನ ಬದಲು ಬೂದಿ ಮರಳಿನ ಬದಲು ಮಣ್ಣು ಹಾಕಿ ನಮ್ಮ ಗುಂಡಿ ಮನೆಗಳನ್ನು ಜೋಪಾನವಾಗಿ ರಕ್ಷಣೆ ಮಾಡಿದ್ದಾರೆ! ಅವರು ಕೋಟ್ಯಾಧೀಶರ–ರಾದರೂ ನಮ್ಮನ್ನು ಬಿಡದೆ ತಮ್ಮ ಮಕ್ಕಳ ಹಾಗೆ ನೋಡಿಕೊಂಡಿದ್ದಾರೆ! ಅವರಿಗೆ ನಮ್ಮ ಕೃತಜ್ಞತೆ ಸಲ್ಲಿಸಬೇಕು.ಅವರಿಂದಲೇ ನಮ್ಮನ್ನು ಗುಂಡಿ, ಪಾಟ್ ಹೋಲ್ ಅಂತ ಕರೀತಾರೆ.'

(ಬ.ಗುಂ) : ನನ್ನ ಮೊಮ್ಮಕ್ಕಳನ್ನ ಪಾ ಟ್ ಹೋಲ್ ಅಂತ ಕರಿಯಕ್ಕೆ ಆಗಲ್ಲ..ಇಲ್ಲಿ ಸುತ್ತಮುತ್ತಲು ಇರುವ ಜಿಮ್‌ಗಳಿಗೆ ಹೋಗಿ ಕಸರತ್ತು ಮಾಡಿ ಅವರು ಬಾಡಿ ಬೆಳೆಸ್ಕೊಂಡಿದಾರೆ. ಅವುಗಳನ್ನು ನಾನು ಡ್ರಮ್ – ಹೋಲ್, ಬ್ಯಾರಲ್– ಹೋಲ್ ಅಂತ ಕರೀತೀನಿ! ಆಟೋರಿಕ್ಷಾ, ರಾಯಲ್ ಎನ್ ಫೀಲ್ಡ್ 350 ಅಥವಾ ಹಯಬೂಸಾ ಬೈಕ್ ಏನಾದ್ರು ಬಿದ್ರೆ ಅವು ಕಾಣಿಸೋದೇ ಇಲ್ಲ, ಅಷ್ಟು ದೊಡ್ಡ ಹೊಂಡ ಗಳಿವೆ ಈಗ! ಸ್ಕೂಲ್ ಬಸ್ ಕೂಡ ಬಿತ್ತಲ್ಲ! ನಮ್ಮ ಜ್ಯುಬಿಲಿ ಫಂಕ್ಷನ್ ಚೆನ್ನಾಗಿರುತ್ತೆ. ಒಟ್ಟಿಗೆ ಸೇರೋಣ.'

(ಕೋ.ಗುಂ): ನನ್ನ ಚಿಕ್ಕಮ್ಮ ಎಲೆಕ್ಟ್ರಾನಿಕ್ ಸಿಟಿ ಯ ಗುಂಡಿ. ಅವ್ರಿಗೆ ಪಾರ್ಟಿಗೆ ಹೇಗೆ ಮಾಡೋದು ಎಲ್ಲ ಗೊತ್ತು..ಪಳಗಿದ ಕೈ. ಗುಂಡಿ ಮುಚ್ಚುವಾಗ 750 ಕೋಟಿ, 1000 ಕೋಟಿ ಬಂದಾಗ, ಅವಳ ಕೈಗೂ ಕಂಟ್ರಾಕ್ಟರ್ಗಳು ಸ್ವಲ್ಪ ದುಡ್ಡು ಉದಿರುಸುತ್ತಾರೆ! ಆ ಕೆಲಸ ನಡೆಯುವ ಟೈಮ್ ನಲ್ಲಿ ಆಕೆ ಫಾರಿನ್ ಟೂರಿಗೆ ಹೋಗ್ತಾಳೆ. ಅವಳು ವಾಪಸ್ಸು ಬಂದು ಒಂದು ಮಳೆ ಬಂದಾಗ ಅವಳ ಕ್ವಾರ್ಟರ್ಸ್ ಶುಭ್ರವಾಗಿ ತೊಳೆದು ರೆಡಿಯಾಗಿರುತ್ತೆ! ಬಹಳ ಸರ್ತಿ ಟೂರ್ ಗೆ ಹೋಗ್ತಾಳೆ ಅವ್ಳು.'

(ಬೆ ಗುಂ:) ಒಳ್ಳೇದು ಹಾಗಾದ್ರೆ. ಬರ್ತೀನಿ ನಾನು. ಒಳ್ಳೆ ಚೀಫ್ ಗೆಸ್ಟ್ ಕರೀರಿ.'

(ಕೋ. ಗುಂ).ಸಿಎಂ ಬರ್ತಾರೋ ಗೊತ್ತಿಲ್ಲ. ಡೆಪ್ಯೂಟಿ ಸಿಎಂ ಖಂಡಿತ ಬರ್ತಾರೆ.ಆರ್ ಸಿ ಬಿ ಫನಕ್ಷನಷ್ಟು ಮುತ್ತುವರ್ಜಿ ವಹಿಸಿದರು! ನಿಮಗೆಲ್ಲಾ ವಾಟ್ಸಾಪ್ ಮಾಡ್ತೀನಿ. ನಮ್ಮ ಗುಂಡಿಗಳು ಚೆನ್ನಾಗಿ ಬೆಳೆಯಬೇಕು. ಹಾಗೂ ಬೆಳಂದೂರಿನ ಹಾಗೆ ಇರುವ ಕೆರೆಗಳು.

(ಬೆ.ಗುಂ): ನನ್ನನ್ನೂ ಸೇರಿಸ್ಕೊಂಡಿದ್ದಕ್ಕೆ ಥಾಂಕ್ಯು.'

(ಕೋ..ಗುಂ) (ಬ. ಗುಂ): ನೀನು ನಮ್ಮೆಲ್ಲರಿಗಿಂತ ಸೀನಿಯರ್ ಮತ್ತು ಯುನೀ ಕ್..ನಾವು ಮುಂದೆ ನಿಮ್ಮ ತರಹ ಬೆಳೆಯಬೇಕು. ನಮ್ಮ ಮಕ್ಕಳು. ಮೊಮ್ಮಕ್ಕಳು ಕೆರೆಯಾಗಬೇಕು. ಆಶೀರ್ವದಿಸಿ.'

■

# ವ್ಯಂಗ್ಯಚಿತ್ರಗಳ ಸಂಗ್ರಹಾಲಯದಲ್ಲಿ ಒಂದು ಸುತ್ತು (ಆರ್.ಕೆ.ಲಕ್ಷ್ಮಣ)

**ಸಿ.ಎ.ವಿಲಾಸ ನಾ ಹುದ್ದಾರ**

ವ್ಯಂಗ್ಯಚಿತ್ರಗಳೆಂದರೆ ನಮ್ಮ ಕಣ್ಣ ಮುಂದೆ "ಸಾಮಾನ್ಯ ಮನುಷ್ಯ"(ಕಾಮನ್ ಮ್ಯಾನ್) ಚಿತ್ರ ಮೂಡುವದು. ಕಾಮನ್ ಮ್ಯಾನ್‌ನ ಜನಕರಾದ ಅರ್.ಕೆ.ಲಕ್ಷ್ಮಣರ ವ್ಯಂಗ್ಯಚಿತ್ರಗಳ ಸಂಗ್ರಹಾಲಯವನ್ನು ಬಾಲೆವಾಡಿ, ಪುಣೆಯಲ್ಲಿ ಮಹಾರಾಷ್ಟ್ರಾ ಸರಕಾರದ ಸಹಯೋಗದಲ್ಲಿ ಪುಣೆ ಮಹಾನಗರ ಪಾಲಿಕೆಯು ನಿರ್ಮಿಸಿದ್ದು, 06–03–2022 ರಂದು ಪ್ರಧಾನ ಮಂತ್ರಿ ಶ್ರೀ. ನರೇಂದ್ರ ಮೋದಿ ಅವರು ಉದ್ಘಾಟಿಸಿದ್ದಾರೆ. ಆರ್.ಕೆ.ಲಕ್ಷ್ಮಣ ಅವರು ಸುಮಾರು 35000 ವ್ಯಂಗ್ಯಚಿತ್ರಗಳನ್ನು ರಚಿಸಿದ್ದಾರಂತೆ, ಅವುಗಳಲ್ಲಿ ಸಾಧ್ಯವಾದಷ್ಟು ವ್ಯಂಗ್ಯಚಿತ್ರಗಳನ್ನು ಅವರ ಸೊಸೆ ಶ್ರೀಮತಿ. ಉಷಾ ಈ ಸಂಗ್ರಹಾಲಯಕ್ಕಾಗಿ ಒಟ್ಟುಗೂಡಿಸಿದ್ದಾರಂತೆ.

ಇವರ ವೃತ್ತಿ ಜೀವನ ಪ್ರಾರಂಭವಾಗಿದ್ದು ನಮ್ಮ ಹೆಮ್ಮೆಯ "ಕೊರವಂಜಿ" ಪತ್ರಿಕೆಯೊಂದಿಗೆ.

**ಮುಂಬಯಿ/ಪುಣೆ ಪೊಲೀಸ್**

ವಿಶಾಲವಾದ ಕಾಪೌಂಡು ಇದ್ದು ನೀವು ಪ್ರವೇಶಿಸುತ್ತಿದ್ದಂತೆಯೇ ನಿಮ್ಮ ಎಡ ಭಾಗದ ಗೋಡೆಯ ಮೇಲೆ ಕಂಡು ಬರುವದು "ಸಾಮಾನ್ಯ ಮನುಷ್ಯ" ಪೊಲೀಸ್ ಕಾನಸ್ಟೇಬಲ್‌ನ ಹೆಗಲ ಮೇಲೆ ಕೈ ಹಾಕಿಕೊಂಡು ನಿಂತದ್ದು ಮತ್ತು ಪೊಲೀಸ್‌ರ ಕೆಲಸಕ್ಕೆ ಸಂಬಂಧಿಸಿದಂತೆ ಬಹಳಷ್ಟು ವ್ಯಂಗ್ಯಚಿತ್ರಗಳು ಕಾಣುತ್ತವೆ. ದೇಶದ ಅತ್ಯಂತ ದೊಡ್ಡದಾದ ಮುಂಬಯಿ ಪೊಲೀಸ್ ಇಲಾಖೆಯ ಕರ್ತವ್ಯ ಪ್ರಜ್ಞೆಯಿಂದ ಅವರು ಆಕರ್ಷಿತರಾಗಿದ್ದರು. ಆದ್ದರಿಂದ ಪೋಲೀಸರ ಕಾರ್ಯವೈಖರಿ ವಿಷಯವಾಗಿ ಸಾಕಷ್ಟು ವ್ಯಂಗ್ಯಚಿತ್ರಗಳನ್ನು ಯಾವದೇ ತಾತ್ಸಾರವಿಲ್ಲದೇ ವಿನೋದ ಮತ್ತು ಹಾಸ್ಯಕ್ಕಾಗಿ ರಚಿಸಿದ್ದು ಕಂಡು ಬರುತ್ತದೆ. ಆ ವ್ಯಂಗ್ಯಚಿತ್ರಗಳು ಅಪರಾಧ, ಸಿ.ಬಿ.ಐ. ವಿಚಾರಣೆ, ಪ್ರತಿಭಟನೆ ಸಮಯದಲ್ಲಿ ಪೊಲೀಸರ ವರ್ತನೆ, ಗುಂಪುಗಳ ಬಡಿದಾಟದ ಸಂದರ್ಭ, ಕಾನೂನು ಮತ್ತು ಸುವ್ಯವಸ್ಥೆ ಮುಂತಾದ ವಿಷಯಗಳ ಮೇಲೆ ಮೂಡಿ ಬಂದಿವೆ. ಪೊಲೀಸ್ ಇಲಾಖೆಗೂ ಅವರ ವಿಷಯದಲ್ಲಿ ತುಂಬಾ ಗೌರವವಿತ್ತು.

ಮುಂದಕ್ಕೆ ಹೋದರೆ ನಿಮ್ಮ ಬಲಕ್ಕೆ ಸಂಗ್ರಹಾಲಯದ ಕಾರ್ಯಾಲಯವಿದೆ. ಅಲ್ಲಿ ನೀವು ಟಿಕೇಟಗಳನ್ನು ಪಡೆದುಕೊಳ್ಳಬೇಕು. ನಿಮಗೆ ಸಂಗ್ರಹಾಲಯದ ಜೊತೆಗೆ ಅಲ್ಲಿರುವ ಎರಡು ಆಡಿಯೋ–ವೀಡಿಯೋ ಪ್ರದರ್ಶನ ನೋಡುವದಿದ್ದರೆ ರೂ.100, ವ್ಯಂಗ್ಯಚಿತ್ರಗಳನ್ನಷ್ಟೇ ವೀಕ್ಷಿಸುವದಿದ್ದರೆ ರೂ. 50 ಕೊಡಬೇಕು.

**ಅರ್.ಕೆ.ಲಕ್ಷ್ಮಣ ವಿಡಿಯೋ ಶೋ**

ಮೊದಲನೇ ಮಹಡಿಯಲ್ಲಿ ಅರ್.ಕೆ.ಲಕ್ಷ್ಮಣ ಅವರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ವಿವರಿಸುವ ವಿಡಿಯೋ ಶೋ ಪ್ರದರ್ಶಿಸಲಾಗುತ್ತದೆ. ಅವರ ಬಾಲ್ಯ,ಶಿಕ್ಷಣ ಮತ್ತು ಅವರು ಮುಂಬಯಿಯ ಪ್ರಸಿದ್ಧ ಜೆ.ಜೆ.ಸ್ಕೂಲ್ ಆಫ್ ಆರ್ಟ್ಸನಿಂದ ತಿರಸ್ಕೃತರಾದದ್ದು ಎಲ್ಲವನ್ನು ಹೇಳಲಾಗುತ್ತದೆ. ಅಲ್ಲದೇ ಅವರನ್ನು ವ್ಯಂಗ್ಯಚಿತ್ರಕಾರನಾಗಲು ಆದ ಪ್ರೇರಣೆ, ಮುಂದೆ ಅವರು ಸುಮರು 60 ವರ್ಷ "ದಿ ಟೈಮ್ಸ್ ಆಫ ಇಂಡಿಯಾ"ದ ದಿನಪತ್ರಿಕೆಯಲ್ಲಿ "ಯು ಸೇಡ್ ಇಟ್" ಎಂಬ ಕಾಲಂನಲ್ಲಿ ತಮ್ಮ "ಕಾಮನ್ ಮ್ಯಾನ್" ವ್ಯಂಗ್ಯ ಚಿತ್ರದ

ಮೂಲಕ ಪ್ರಸಿದ್ಧಿ ಪಡೆದದ್ದು ಶಬ್ದ ಮತ್ತು ದೃಶ್ಯದ ಮೂಲಕ ತೋರಿಸಲಾಗುತ್ತದೆ. ಅವರು ಮೊದಲಿಗೆ ರಾಜಕೀಯದ ವಿಡಂಬನೆಗಳ ವ್ಯಂಗ್ಯಚಿತ್ರಗಳನ್ನು ಮೂಡಿಸುವದರಲ್ಲಿ ಹೆಚ್ಚಿನ ಆಸಕ್ತಿ ತೋರಿಸಿದರು. ಭಾರತದ ವಿವಿಧತೆಯಲ್ಲಿರುವ ಏಕತೆಯೇ ಅವರಿಗೆ "ಕಾಮನ್ ಮ್ಯಾನ್" ಸೃಷ್ಟಿಸಲು ಉತ್ತೇಜನ ನೀಡಿತಂತೆ. ಅವರಲ್ಲಿದ್ದ ಸೃಜನಶೀಲತೆ, ಸೂಕ್ಷ್ಮವಾಗಿ ತಮ್ಮ ಸುತ್ತಲೂ ನಡೆಯುತ್ತಿರುವ ವಿದ್ಯಮಾನಗಳನ್ನು ಗ್ರಹಿಸುವ ಮಾನಸಿಕ ಶಕ್ತಿ ಇವೆಲ್ಲವೂ ಅವರನ್ನು ಉತ್ಕೃಷ್ಟ ವ್ಯಂಗ್ಯಚಿತ್ರಕಾರರನ್ನಾಗಿಸಿದವು. ಕಾಗೆಗಳ ವಿಷಯವಾಗಿ ಅವರಿಗೆ ವಿಶೇಷವಾದ ಅಭಿರುಚಿ ಇತ್ತು. ವಿಡಿಯೋ ಮುಗಿದಮೇಲೆ ನಮ್ಮ ಬಲಗಡೆ ಇದ್ದ ಎತ್ತರದ ಸ್ಥಳದ ಮೇಲೆ ಮೇಜಿನ ಎದುರಿಗೆ ಕುಳಿತ ಆರ್.ಕೆ.ಲಕ್ಷ್ಮಣರ ಪ್ರತಿಕೃತಿಯ ಮೇಲೆ ಬೆಳಕನ್ನು ಕೇಂದ್ರೀಕರಿಸಿ ಅವರ ದಿನಚರಿಯ ವಿಷಯವಾಗಿ ಆಡಿಯೋ ಮುಖಾಂತರ ಹೇಳಲಾಯಿತು. ಅವರು ಸರಿಯಾಗಿ 9.00 ಗಂಟೆಗೆ ತಮ್ಮ ಕಾರಿನಲ್ಲಿ ಕಚೇರಿಗೆ ಹೋಗುತ್ತಿದ್ದರು. ಅವರ ಕೋಣೆಯಲ್ಲಿ ಗಡಿಯಾರ ಇರಲಿಲ್ಲ. ಆದರೆ ಅವರ ಜವಾನ ಪ್ರತಿ ಒಂದು ಗಂಟೆಗೆ ಸಮಯವನ್ನು ತಿಳಿಸುತ್ತಿದ್ದನಂತೆ. ಸರಿಯಾಗಿ 1.00 ಗಂಟೆಗೆ ಊಟ ಮಾಡುತ್ತಿದ್ದರು. ಅವರ ಜವಾನ 3.00 ಗಂಟೆ ಎಂದು ಅನ್ನುವ ಮೊದಲೇ ಆ ದಿನದ ವ್ಯಂಗ್ಯಚಿತ್ರವನ್ನು ಸೃಷ್ಟಿಸುತ್ತಿದ್ದರು. ಸರಿಯಾಗಿ 3.00 ಗಂಟೆ ಆಗುತ್ತಿದ್ದಂತೆಯೇ ಅದನ್ನು ಮರುದಿನದ ಪ್ರಕಟಣೆಗೆ ಕೊಡಲು ತೆಗೆದುಕೊಂಡು ಹೋಗುತ್ತಿದ್ದರು. ಆವರು ಶಿಸ್ತಿನ ಸಿಪಾಯಿ ಆಗಿದ್ದರು. ಅವರ ಪ್ರತಿಕೃತಿಯ ಹಿಂದಿನ ಗೋಡೆಯ ಮೇಲೆ ಅವರು ಕಾರು ನಡೆಸುತ್ತಿರುವ ಭಾವಚಿತ್ರವೂ ಇರುತ್ತದೆ. ಅವರ ಬಲಗಡೆಗೆ ಬಾಗಿಲು ತೆಗೆದು ಸಮಯವನ್ನು ಹೇಳುತ್ತಿರುವ ಜವಾನನ ಪ್ರತಿಕೃತಿಯೂ ಇದೆ. ಅವರು ಕುಳಿತ ಎದುರಿಗಿನ ಗೋಡೆಯ ಮೇಲೆ ಅವರ ತಂದೆ, ತಾಯಿ, ಸಹೋದರ, ಸಹೋದರಿಯರು, ಪತಿ, ಮಗ, ಸೊಸೆ, ಮೊಮ್ಮಗಳ ಭಾವಚಿತ್ರಗಳಸಹಿತ ಅವರ ತಂದೆಯವರ ವಂಶವೃಕ್ಷವಿದೆ.

### ಮಾಲ್ಗುಡಿ ಶಬ್ದ ಮತ್ತು ದೃಶ್ಯ ಪ್ರದರ್ಶನ

ಕೆಳಗಿನ ಮಹಡಿಯಲ್ಲಿ ಮಾಲ್ಗುಡಿ ಊರಿನ ಮತ್ತು ಅದರ ರೇಲ್ವೇ ನಿಲ್ದಾಣದ,ಸರಯೂ ನದಿ ಮುಂ. ಪ್ರತಿಕೃತಿ ಇದೆ. ಆಡಿಯೋದ ಮೂಲಕ ನಮಗೆ ಮೊದಲು ಈ ಪ್ರದರ್ಶನದ ವಿವರಗಳನ್ನು ಪ್ರಸ್ತುತಪಡಿಸುತ್ತಾರೆ. ಸಹೋದರರಾದ ಅರ್.ಕೆ.ನಾರಾಯಣ ಅವರ ಕೋರಿಕೆ ಮೇರೆಗೆ "ಮಾಲ್ಗುಡಿ" ಎಂಬ ಕಾಲ್ಪನಿಕ ಊರಿನ ಚಿತ್ರವನ್ನು ಆರ್.ಕೆ.ಲಕ್ಷ್ಮಣರು ರಚಿಸುತ್ತಾರೆ. ಪ್ರದರ್ಶನ ಪ್ರಾರಂಭವಾಗುತ್ತಿದ್ದಂತೆಯೆ ಉಗಿ ಬಂಡಿಯು ಬಂದು ಮಾಲ್ಗುಡಿ ನಿಲ್ದಾಣಕ್ಕೆ ಬಂದು ನಿಲ್ಲುತ್ತದೆ. ಆಡಿಯೋ ಮತ್ತು ಬೆಳಕಿನ ಮೂಲಕ ಆರ್.ಕೆ.ನಾರಾಯಣರು ಬರೆದ ಗೈಡ್ ಚಲನಚಿತ್ರದ ಸಂಕ್ಷಿಪ್ತ ಕಥೆಯನ್ನು , ತದನಂತರ "ಮಾಲ್ಗುಡಿ ಡೇಯ್ಸ್"ನ ಸ್ವಾಮಿ ಮತ್ತು ಅವನ ಸ್ನೇಹಿತರ ಕಥೆಯನ್ನು ಹೇಳಲಾಗುತ್ತದೆ. ಅಲ್ಲಲ್ಲಿ ಮಾಲ್ಗುಡಿಯ ಹಿನ್ನೆಲೆ ಸಂಗೀತವು ಕೇಳಿ ಬರುತ್ತದೆ. ಆಮೇಲೆ ನಮ್ಮ ಬಲಕ್ಕೆ ಇರುವ ಸಣ್ಣ ಪರದೆಯ ಮೇಲೆ ವಿಡಿಯೋ ಮುಖಾಂತರ ಆರ್.ಕೆ.ಲಕ್ಷ್ಮಣರು "ಕಾಮನ್ ಮ್ಯಾನ್" ಸೃಷ್ಟಿ ಮಾಡುತ್ತಿರುವ ಮತ್ತು  ಮಾಡಿದ ದೃಶ್ಯವನ್ನು ತೋರಿಸಲಾಗುತ್ತದೆ. ಅದಕ್ಕೆ ಹಾಸ್ಯದ ಲೇಪನ ಕೊಟ್ಟು ಅವರು ಸೃಷ್ಟಿಸುತ್ತಿದ್ದಂತೆಯೇ "ಕಾಮನ್ ಮ್ಯಾನ್" ಕ್ಯಾನವಾಸ್ ಹಿಂದುಗಡೆ ಹೋಗಿ ಬಚ್ಚಿಟ್ಟುಕೊಂಡು ಅವನ ಸೃಷ್ಟಿಕರ್ತನ ಜೊತೆ ಕಣ್ಣು ಮುಚ್ಚಾಲೆ ಆಡುವ ದೃಶ್ಯ ನಮಗೆ ಕಚಗುಳಿಯನ್ನು ಇಡುತ್ತದೆ. ಈ ಪ್ರದರ್ಶನವು ಅದ್ಭುತವಾದ ಅನುಭವ ನೀಡುತ್ತದೆ.

### ವ್ಯಂಗ್ಯಚಿತ್ರಗಳು

ಹೊರಗೆ ಬಂದರೆ ಎದುರಿಗಿನ ಗೋಡೆಯ ಮೇಲೆ "ಕಾಮನ್ ಮ್ಯಾನ್" ಕೈಯಲ್ಲಿ

ಸಾವಿರ ವ್ಯಂಗ್ಯಚಿತ್ರಗಳು ಎಂಬ ಪುಸ್ತಕ ಕೈಯಲ್ಲಿ ಹಿಡಿದುಕೊಂಡು 60 ವರ್ಷಗಳವರೆಗೆ ಪ್ರತಿದಿನ ಮುಂಜಾನೆ ನಮ್ಮನ್ನು ನಗಿಸಿದ್ದಕ್ಕೆ ಧನ್ಯವಾದಗಳನ್ನು ಹೇಳುತ್ತ ಅವರಿಗೆ ವಿದಾಯ ಹೇಳುತ್ತಿರುವ ವ್ಯಂಗ್ಯಚಿತ್ರವಿದೆ. ಅದರ ಪಕ್ಕಕ್ಕೆ " ಕಾಮನ್ ಮ್ಯಾನ್" ಚಿತ್ರ ಮತ್ತು ಅದರ ಪಕ್ಕಕ್ಕೆ ಅವರ ಮೊಮ್ಮಗಳಾದ ರಿಮಾನಿಕಾಳ ವ್ಯಂಗ್ಯಚಿತ್ರವಿದೆ. ಮೆಟ್ಟಿಲುಗಳನ್ನು ಹತ್ತಿ ಬರುತ್ತಿದ್ದಾಗ ಅವರ ಕೊನೆಯ ವ್ಯಂಗ್ಯಚಿತ್ರವಾದ "ಕಾಮನ್ ಮ್ಯಾನ್ ಆನ್ ಮಾರ್ಸ್" (ಇಸ್ರೋದ ಪರವಾಗಿ ಅವರ ಮಗ ಶ್ರೀನಿವಾಸ ಅವರ ವಿನಂತಿ ಮೇರೆಗೆ ಬರೆದ ಚಿತ್ರ) ಕಾಣಸಿಗುತ್ತದೆ. ಅದರ ಪಕ್ಕಕ್ಕೆ ತಮ್ಮ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಲು "ಕಾಮನ್ ವೂಮನ್" ಮುಖಾಂತರ ತಮ್ಮ ಮೊಮ್ಮಗಳಾದ ರಿಮಾನಿಕಾ ಇದ್ದಾಳೆ ಎಂಬ ಬರಹವಿದ್ದ ಚಿತ್ರವಿದೆ.

ಮೊದಲಿನ ಮಹಡಿಯಲ್ಲಿ ವ್ಯಂಗ್ಯಚಿತ್ರಗಳ ಸಂಗ್ರಹವಿದ್ದು ಮೊದಲು ನಿಮಗೆ ಅಚ್ಚ ಬಿಳಿಯ ವೃತ್ತಾಕಾರದ ಕಂಬವು ವಿವಿಧ ವ್ಯಂಗ್ಯಚಿತ್ರಗಳಿಂದ ಆವೃತವಾಗಿದ್ದು ಕಂಡು ಬರುತ್ತದೆ. ಮುಂದಕ್ಕೆ ಹೋದರೆ ಅವರ ಕುಟುಂಬದ ಸದಸ್ಯರ ಭಾವಚಿತ್ರಗಳು, ಗಾಧೀಜಿ,ರಾಜಾಜಿ,ಝುಕೀರ್ ಹುಸೇನ್, ಬಿಲ್ ಕ್ಲಿಂಟನ್ ಮುಂತಾದ ರಾಜಕೀಯ ಪುಢಾರಿಗಳ ವ್ಯಗ್ಯಚಿತ್ರಗಳು, ರಜನೀಕಾಂತ, ರಾಜೇಶ ಖನ್ನಾ, ಜಾನಿವಾಕರ್,ಅಮಿತಾಬ ಬಚ್ಚನ್ ಮುಂ. ಚಲನಚಿತ್ರ ನಟರ ವ್ಯಂಗ್ಯಚಿತ್ರಗಳು ಕಂಡು ಬರುತ್ತವೆ.

ತನ್ನ ಅಳುಮೋರೆಯನ್ನು ಕನ್ನಡಿಯಲ್ಲಿ ನೋಡುತ್ತ ನಗುತ್ತಲಿರುವ "ಲಾಫ್ ವಿಥ್ ಲಕ್ಷ್ಮಣ" ಎಂಬ ವ್ಯಂಗ್ಯಚಿತ್ರವು ನಮ್ಮನ್ನು ಆಕರ್ಷಿಸುತ್ತದೆ. "ಬುಕ್ ಕವ್ಹರ್ಸ್" ಎಂಬ ಗ್ಯಾಲರಿಯಲ್ಲಿ ಅವರು ವಿವಿಧ ಪುಸ್ತಕಗಳ ಮೇಲಿನ ಪುಟದ ಮೇಲೆ ವಿನ್ಯಾಸಗೊಳಿಸಿದ ಚಿತ್ರಗಳೂ ಇರುತ್ತವೆ. "ಫ್ರೀ ಲಾನ್ಸ್" ವಿಭಾಗದಲ್ಲಿ ಸಾಕಷ್ಟು ವ್ಯಂಗ್ಯಚಿತ್ರಗಳಿದ್ದರೂ ದಿಗಿಲ,ಭಯಂ,ಅಧಿರ್ಚಿ(ಹೆದರಿಕೆ,ಭಯ ಮತ್ತು ಆಘಾತ) ಎಂಬ ಚಿತ್ರವು ಅರ್ಥಪೂರ್ಣವಾಗಿದೆ.

**ಕ್ರೌ ಗ್ಯಾಲರಿ (ಕಾಗೆಗಳ ಗ್ಯಾಲರಿ)**



ಆರ್.ಕೆ.ಲಕ್ಷ್ಮಣರಿಗೆ ಕಾಗೆಗಳೆಂದರೆ ಆಕರ್ಷಣೆ. ಅವರ ಅಭಿಪ್ರಾಯದಲ್ಲಿ ಅವು ಚಾಣಾಕ್ಷ್ಯ ಮತ್ತು ಕಿಡಿಗೇಡಿಗಳು. ಕಾಗೆಗಳು ಪ್ರತಿ ಮುಂಜಾನೆ ಅವರು ಇಟ್ಟ ಆಹಾರದ ತುಣುಕುಗಳನ್ನು ತಿನ್ನಲು ಬಂದಾಗ ಇವರು ಅವುಗಳ ಚಿಂತಿಸುತ್ತ ಕುಳಿತಂತೆ ಕಾಣುತ್ತಿರುವ ರೇಖಾಚಿತ್ರ ತೆಗೆಯುತ್ತಿದ್ದರು. ಅವುಗಳಲ್ಲಿ ಒಂದೆರಡು ಪ್ರತಿನಿತ್ಯ ಬರುತ್ತಿದ್ದವಂತೆ ಮತ್ತು ಅವುಗಳಿಗೆ ಇವರು ಹೆಸರನ್ನು ಇಟ್ಟಿದ್ದರಂತೆ. ಅವರೇ ಹೇಳಿದಂತೆ ಅವರು ಮೂರು ವರ್ಷದವರಿದ್ದಾಗಿಂದಲೇ ಕಾಗೆಗಳ ರೇಖಾಚಿತ್ರವನ್ನು ಬಿಡಿಸುತ್ತಿದ್ದರಂತೆ. ಅವರ ತಾಯಿಯು ಅದನ್ನು ನೋಡಿ ಇವರಿಗೆ ಅದು ಶನಿದೇವರ ವಾಹನವೆಂದು

ಹೇಳಿ ಪ್ರೋತ್ಸಾಹಿಸುತ್ತಿದ್ದರಂತೆ. ಅವರ ಒಬ್ಬ ದಚ್ ಸ್ನೇಹಿತ ತನಗಾಗಿ ಕಾಗೆಗಳ ಚಿತ್ರಗಳನ್ನು ಇವರಿಗೆ ಬಿಡಿಸಲು ಕೇಳಿಕೊಳ್ಳುತ್ತಿದ್ದನಂತೆ. ಈ ಗ್ಯಾಲರಿಯಲ್ಲಿ ವಿವಿಧ ಭಂಗಿಗಳಲ್ಲಿದ್ದ ಕಾಗೆಗಳು ಮತ್ತು ಆರ್.ಲಕ್ಷ್ಮಣರು ರಚಿಸಿದ ಚಿತ್ರಗನ್ನು ಇಟ್ಟಿದ್ದಾರೆ.

**ಗಣೇಶ**

ಆರ್.ಕೆ.ಲಕ್ಷ್ಮಣರ ಮತ್ತೊಂದು ಆಸಕ್ತಿಯ ವಿಷಯವೆಂದರೆ ಗಣೇಶ. ಇವರು ಗಣೇಶನ ವಿವಿಧ ವರ್ಣಗಳ, ಮನಸ್ಥಿತಿಯ, ರೂಪಗಳ ಚಿತ್ರಗಳನ್ನು ಚಿತ್ರಿಸಿದ್ದಾರೆ. ಹೇಗೆ ತಮಗೆ ಬಿಡುವಿನ ಸಮಯ ಸಿಕ್ಕಾಗ ಕಾಗೆಗಳ ರೇಖಾಚಿತ್ರ ಬಿಡಿಸುತ್ತಿದ್ದರೋ ಅದೇ ರೀತಿ ಗಣೇಶನ ರೇಖಾಚಿತ್ರ ಬಿಡಿಸುವದು, ತಾಮ್ರದ ಹಾಳೆಯ ಮೇಲೆ ಕೆತ್ತುವದು, ಮಾದರಿಗಳನ್ನು ತಯ್ಯಾರಿಸುವದು, ಕಟ್ಟಿಗೆಯ ಮೇಲೆ ಕಲಾತ್ಮಕವಾಗಿ ಮೂಡಿಸುವದು ಮುಂ. ಅತ್ಯಂತ ಆಸಕ್ತಿಯಿಂದ ಮಾಡುತ್ತಿದ್ದರು. ಈ ವಿಭಾಗದಲ್ಲಿ ವಿವಿಧ ಗಣೇಶನ ರೂಪಗಳನ್ನು ಕಾಣಬಹುದು. ಅವುಗಳಲ್ಲಿ "ಕಾಮನ್ ಮ್ಯಾನ್" ತನ್ನ ತಲೆಯ ಮೇಲೆ ಇಟ್ಟುಕೊಂಡು ಗಣಪತಿಯ ಚಿತ್ರ ನಮ್ಮನ್ನು ಆಕರ್ಷಿಸುತ್ತದೆ.

ಮಕ್ಕಳ ವಿಭಾಗದಲ್ಲಿ ಮಕ್ಕಳಿಗಾಗಿ ಚಿತ್ರಿಸಿದ ವಿವಿಧ ವ್ಯಂಗ್ಯಚಿತ್ರಗಳಿದ್ದು ಅವುಗಳಲ್ಲಿ ಬಹುಶಃ ತಂದೆಯೇ ಮಗನ ಕ್ಷೌರವನ್ನು ಮಡುವ ಚಿತ್ರ ಮಜವಾಗಿದೆ.

"ವಾಲ್ ಆಫ ಫೇಮ್" ವಿಭಾಗದಲ್ಲಿ ಭಾರತದ ಮತ್ತು ಅಂತರಾಷ್ಟ್ರೀಯ ಪ್ರಸಿದ್ಧ ವ್ಯಂಗ್ಯಚಿತ್ರಕಾರರ ಭಾವಚಿತ್ರಗಳಿವೆ. "ಪೊಲಿಟಿಕಲ್ ಜರ್ನಿ" ವಿಭಾಗದಲ್ಲಿ ಅವರು ರಾಜಕೀಯ ವ್ಯಂಗ್ಯಚಿತ್ರಕಾರ ಆಗುವ ಬಯಕೆಯ ವ್ಯಂಗ್ಯಚಿತ್ರಗಳು, ನಾನಾ ರಾಜಕೀಯ ಸಂಬಂಧಿತ( ಭೂ ಸುಧಾರಣೆ, ರಾಜಕೀಯ ಬದಲಾವಣೆಗಳು, ಜನರ ನಿರೀಕ್ಷೆಗಳು, ಎಮರ್ಜನ್ಸಿ ಮುಂ.) ವ್ಯಂಗ್ಯಚಿತ್ರಗಳು ಕಾಣಸಿಗುತ್ತವೆ.

**ಅಂಬ್ಯಾಸೀಡರ್ ಕಾರ್**

ಅವರು ಯಾವಾಗಲೂ ಕಪ್ಪು ಬಣ್ಣದ ಅಂಬ್ಯಾಸೀಡರ್ ಕಾರನ್ನು ಉಪಯೋಗಿಸುತ್ತಿದ್ದರು. ಅವರ ಕೊನೆಯ ಕಾರು ನೀವು ವ್ಯಂಗ್ಯಚಿತ್ರಗಳನ್ನು ನೋಡಿ ಕೆಳಗೆ ಬರುತ್ತಿದ್ದಂತೆಯೇ ಕಂಡು ಬರುತ್ತದೆ. ಇದನ್ನು ಶ್ರೀ. ಬಲ್ಲಾಳ ಅತ್ರೆ ಎಂಬವರು ಈ ಸಂಗ್ರಹಾಲಯಕ್ಕೆ ದೇಣಿಗೆಯಾಗಿ ನೀಡಿದ್ದಾರೆ.

**ಕಾಮನ್ ಮ್ಯಾನ್**

ಎದುರಿಗೆ ಕಾಣುವಂತೆ ಕಾಮನ್ ಮ್ಯಾನ್‌ನ ಪ್ರತಿಕೃತಿಯು ನಿಂತಿದೆ.

....................................... ಶ್ರೀ ಕೃಷ್ಣಾರ್ಪಣಮಸ್ತು ....................................

■

ಮೇಡಂ : ಗುಂಡಾ ಯಾಕೋ ನನ್ನ ಕ್ಲಾಸಿನಲ್ಲಿ ನಿದ್ದೆ ಮಾಡ್ತಿದೀಯ.

ಗುಂಡ : ನಿಮ್ಮ ಧ್ವನಿ ಬಹಳ ಮಧುರವಾಗಿದೆ ಮೇಡಂ ಅದಕ್ಕೇ ನಿದ್ದೆ ಬಂದುಬಿಡುತ್ತೆ.

ಮೇಡಂ : ಆದರೆ ಬೇರೆ ಹುಡುಗರು ಯಾಕೋ ನಿದ್ದೆ ಮಾಡ್ತಿಲ್ಲ.

ಗುಂಡ : ಅವರು ನಿಮ್ಮ ಧ್ವನಿಯನ್ನು ಕೇಳಿಸಿಕೊಳ್ತಿಲ್ಲ ಮೇಡಂ.

# ಮೊಮ್ಮಗನ ಟ್ರೀಟ್

ಡಾ. ಶ್ಯಾಮಲಾ ರವಿಶಂಕರ್

ಮಗಳ ಪರಿವಾರದ ಒತ್ತಾಯಕ್ಕೆ ಮಣಿದು ಅಮೆರಿಕಕ್ಕೆ ಹೋದ ನನಗೆ ಪ್ರತಿದಿನ ಒಂದೊಂದು ಮನೋರಂಜನೆಯ ಏರ್ಪಾಡು ಮಾಡಿದ್ದ ನನ್ನವರಿಂದ ಬಿಡುವಿಲ್ಲದೆ ಹೊರಗೆ ತಿರುಗಾಡುವುದು ಅನಿವಾರ್ಯವಾಯಿತು. ಇದರಿಂದ ಸಂತೋಷ ಒಂದು ಕಡೆಯಾದರೆ ಸಂಕೋಚ ಒನ್ನೊಂದು ಕಡೆ ಆಗುತ್ತಿತ್ತು. ಅವರ ಸಂಭ್ರಮ–ಉತ್ಸಾಹ ನನಗೂ ಚೇತನ ನೀಡಿತ್ತು.

ನಾನೇನು ಕಡಿಮೆ ಅನ್ನೋ ಹಾಗೆ ನನ್ನ ಮೊಮ್ಮಗ ತನ್ನ ತಾಯಿ –ತಂದೆಯರ ಜೊತೆ ಪೈಪೋಟಿ ಹಿಡಿದಾಗ 'ಅಸಲಿಗಿಂತ ಬಡ್ಡಿ ರುಚಿ' ಅನ್ನೋ ಹಾಗೆ ಅವನಿಗೆ ಪ್ರಾಮುಖ್ಯತೆ ಕೊಟ್ಟು ಅವನೊಂದಿಗೆ ಹೊರಟೆ. ಮಾತಿನ ಮಧ್ಯೆ ಈ ಬಿಲ್ಲು ಯಾರ ಸೇವಾರ್ಥ ? ಅಂತ ಮೆಲ್ಲಗೆ ವಿಚಾರಿಸಿದೆ, ಅವನ ಪಾಕೆಟ್ ಮನಿಯಿಂದನಾ ಎಂದೆ. 'ಇಲ್ಲ, ನನ್ನ ಸಂಪಾದನೆಯಿಂದ'. ನನಗೆ ಶಾಕೋ ಶಾಕು !

'ಅಲ್ಲವೋ, 18ವರ್ಷಕ್ಕಿಂತ ಚಿಕ್ಕವರು ಸಂಪಾದನೆಗೆ ತೊಡಗಿದರೆ ಚೈಲ್ಡ್ ಲೇಬರ್ರು ಅಂತ ಪಂಚಾಯ್ತಿ ಮಾಡತಾರೆ ಅಂತ ಕೇಳಿದ್ದೆ. ನೀನು ಹೇಗೆ ಸಂಪಾದಿಸಿದೆ ?'

'ಅದಕ್ಕೆಲ್ಲಾ ನಿಯಮಗಳು ಇವೆ, ಅಜ್ಜಿ. ಒಂದು ಕಂಪನಿ ನಡೆಸಿದ ಸ್ಪರ್ಧೆಯಲ್ಲಿ ಗೆದ್ದೆ, ಆಮೇಲೂ ಒಂದೆರಡು ಕ್ವಿಜ್ಜುಗಳೂ ಗೆದ್ದೆ, ಆಗ ಇಂಟರ್ನ್ಶಿಪ್ ಥರ ,ಪಾರ್ಟ್ ಟೈಮ್ ಕೊಟ್ರು, ಅದಕ್ಕೆ ಸ್ಕೂಲಿನಿಂದ ಒಪ್ಪಿಗೆ ಪಡೆದು ಇನ್ಕಮ್ ಟ್ಯಾಕ್ಸ್ ಅನುಮತಿ ತೊಗೋಬೇಕು. ಬಹಳ ಜನ ಹೀಗೆ ಮಾಡತಾರೆ. ಇವೆಲ್ಲ ನಮಗೆ ಬಿಡುವಿದ್ದಾಗ ಆನ್ಲೈನ್, ನೈಟ್ ಡ್ಯೂಟಿ' ಅಂತ ನಕ್ಕ . ಭಲೇ ಭಲೇ, ಘಟಿಂಗ ಅಂದುಕೊಂಡು ಅವನ ಸಂಭ್ರಮಕ್ಕೆ ನನ್ನ ಸಂಭ್ರಮಾನೂ ಸೇರಿಸಿದೆ. ಹಾಗೇ 16–18ರ ಒಳಗೆ ಡ್ರೈವಿಂಗ್ ಲೈಸನ್ಸ್ ತೊಗೊಂಡ್ರೆ ಮುಂದೆ ಡ್ರೈವರ್ ಇನ್ಸೂರೆನ್ಸ್ ಪ್ರೀಮಿಯಂ ಕಟ್ಟೋಕ್ಕೂ ಸ್ವಲ್ಪ ರಿಯಾಯಿತಿ ಅನ್ನೋದೂ ತಿಳೀತು. ಸರಿ ಅವನ ಪಕ್ಕ ಕೂತು ಕಾರಿನಲ್ಲಿ ಹೊರಟ ಅಜ್ಜಿಯ ಖುಷಿ ಹೇಳಬೇಕಾ ?

ನಾವು ಹೊಕ್ಕಿದ್ದು ಒಂದು ಗಿಡಗಳ ನರ್ಸರಿನೇನೋ ಅನ್ನಿಸ್ತು. ಆದರೆ ಅದೊಂದು ಕಾಫಿ ಶಾಪ್ ! ಗಿಡಗಳ ಮಧ್ಯೆ , ಶಾಪಿನ ಒಳಗೂ ಹೊರಗೂ ತಣ್ಣನೆಯ ಆಹ್ಲಾದಕರ ವಾತಾವರಣ ಮೆನಿ–ಇನ್–ಒನ್ ವ್ಯಾಪಾರ. ಒಂದು ಕಡೆ ಕಾಫಿ, ಸ್ನಾಕ್ಸ್, ಇನ್ನೊಂದು ಕೌಂಟರ್ನಲ್ಲಿ ಗಿಡ, ಸಸಿ, ಪಾಟ್ ಗಳ ವ್ಯಾಪಾರ. ಅದು ಬೇರೆ ಊರಂತೆ, ಹೆಸರು ಕೋಸ್ಟಾ ಮೀಸ. ಕಾಫೀ ಶಾಪ್ ಹೆಸರು, ಮೂನ್ ಗೋಟ್ ಗ್ರೀನ್ ಹೌಸ್!. 'ಇದೆಂಥದ್ದೊ, ಹೆಸರು ? ಮೂನ್ನಲ್ಲಿ ಗೋಟ್ ಎಲ್ಲಿಂದ ಬಂತು ? ಅಲ್ಲಿರೋದು ಜಿಂಕೆಯ ಆಕಾರ, ನಮಗೆ ಇಲ್ಲಿಂದ ಕಾಣಿಸೋದು. ನಿಮ್ಮ ಊರವರಿಗೆ ಸ್ವಲ್ಪ ಕನ್ಫ್ಯೂಸ್ ಆದ ಹಂಗಿದೆ,' ಅವನ ಕಾಲೆಳೆಯೋಣ ಅಂತ. ಅದು ಕಿವಿಮೇಲೆ ಕೂಡ ಹಾಕ್ಕೊಳ್ಳೆ,

'ನೀನು ತಿನ್ನೋಥರದ್ದೇ ಆರ್ಡರ್ ಮಾಡಿದ್ದೀನಿ' ಅಂದ. ನಾನಾ, ಅವುಗಳ ಹೆಸರೂ ಕೂಡ ಕೇಳಿದ್ದಿಲ್ಲ .ಅದು ತಯ್ಯಾರಾಗೋಷ್ಟರಲ್ಲಿ ಗಿಡಗಳ ಸುತ್ತ ತಿರುಗಾಡಿದೆ. ಹೋಗ್ತಾ ಹೋಗ್ತಾ ಬಿಲ್ ಮೇಲೆ ಗಮನ ಇರಲಿ ಅಂದ್ಬಿಟ್ಟು ಹೋದೆ. ಏನಿಲ್ಲ, 11.99$ ಅಷ್ಟೇ, ಲತ್ತೆಗೆ.....ಮತ್ತು ಕಾಫೀ(ಅನ್ನೋ ಕಷಾಯ) 4.99$. ನೀರಲ್ಲಿ ಮುಳಿಗಿದೆ ಮೇಲೆ.

ನಮ್ಮ ತಿನುಸು ಸಿದ್ಧ, ಇವನು ಹೋಗಿ ನಮ್ಮಇಬ್ಬರದೂ ದೊಡ್ಡ ಟ್ರೇನಲ್ಲಿ ತಂದ. ಕಂಡದ್ದೇನು, ಟಿಶ್ಯೂ ಮೇಲೆ ವಿವಿಧ ಆಕಾರಗಳ ಆಯುಧಗಳ, ಫೋರ್ಕು, ನೈಫು ವಗೈರೆಗಳ ಮಧ್ಯೆ ಒಂದು ಕೋಸಿನ ಎಲೆಯ ಮೇಲೆ ಪವಡಿಸಿದ್ದ ದೊಡ್ಡ ರಸ್ಕಿನ ಆಕಾರದ ಸ್ಲೈಸು ! ಅದರ ಮೇಲೆ ಚಿತ್ರ-ವಿಚಿತ್ರ ಎಲೆಗಳು ಕಾಯಿಗಳು ರಾರಾಜಿಸುತ್ತಿದ್ದವು. ಇನ್ನು ಬೆಣ್ಣೆ ಚೀಸು ಅಂತೂ ಹೇಳಲೇ ಬೇಕಿಲ್ಲ. ಅವನನ್ನು ಸತಾಯಿಸಲು, 'ಏನೋ, ಪಾರ್ಥೀನಿಯಂ ಎಲೆ ತಿನ್ನಿಸ್ತಿದ್ದೀಯ? ನಮ್ಮ ದೇಶದಲ್ಲಿ ಆಡೂ ಕೂಡ ಮುಟ್ಟೋಲ್ಲ ಅದು ವಿಷಾಂತ ... ಆದ್ರೆ ನಿಮ್ಮಲ್ಲಿ ಅದು ಹೈ ಎಂಡ್ ಈಟಿಂಗಾ ?' ಅಂದೆ. ಅವನೇನು ಸುಮ್ನೆ ಬಿಡತಾನಾ ? 'ಅದನ್ನ ನೀನೇ ಐಡೆಂಟಿಫೈ ಮಾಡಬೇಕು'. ಮರು ಸವಾಲು !.




'ಓಕೆ, ಅರಗುಲ, ಅಂತಾರೆ, ಎರುಕ ಸಟೈವಾ', ಎಂದೆ.

'ನೀನು ಏನು ಬಂಡಲ್ ಬಿಟ್ರೂ ನಡೆಯತ್ತೆ, ಬೇಕಾದ್ರೆ ಏ ಐ ನ ಕೇಳಬಹುದು, ಆದರೆ ನಾನು ನಿನ್ನನ್ನ ನಂಬುತ್ತೀನಿ "ಆಹಾ! ಎಷ್ಟು ಉದಾರ ಮನೋ ಭಾವ! ಆ ಸೊಪ್ಪು ಸದೆ ಬಳಿದಿರುವ ಟೋಸ್ಟನ್ನ ತಿಂದೆ, ಚೆನ್ನಾಗೇ. ಇತ್ತು ಕಾಫಿ ಮಾತ್ರ ದಾಲ್ಚಿನ್ನಿ ಕಷಾಯ, ಮೊಮ್ಮಗನಿಗಾಗಿ ಕುಡಿದೆ.

ನಾವಿದ್ದಲ್ಲಿ 20 ಮೈಲಿಗೆಲ್ಲ ಒಂದೊಂದು ಊರು, ಅಲ್ಲಿನ ಶಾಂತಿ ಸಾಗರದ ಸಮುದ್ರ ತೀರಕ್ಕೆ ಆಯಾ ಊರಿನ ಹೆಸರು. ಒಂದು ತೀರದ ಥರ ಇನ್ನೊಂದು ತೀರವಿಲ್ಲ! ಒಂದು ಕಡೆ ಸಪ್ಪೆ ಕಂದು ಬಣ್ಣದ ಮರಳು, ಇನ್ನೊಂದು ಕಡೆ ಅಂದವಾದ ಹಳದಿ ಬಣ್ಣದ ಸಣ್ಣ ಕಪ್ಪೆಚಿಪ್ಪುಗಳನ್ನೊಳಗೊಂಡ ತೀರ, ಇನ್ನೊಂ ಕಡೆ ಕಲ್ಲು ಬಂಡೆಗಳು ತುಂಬಿರುವ ತೀರ, ಮಗದೊಂದು ಕಡೆ ವಿಶಾಲವಾದ ಶಾಂತಿಯುತ ಸಮುದ್ರ ಬಿಳಿಯ ಬಣ್ಣದ ಮರಳು !. ನಮ್ಮ ಪಯಣ ನ್ಯೂ ಪೋರ್ಟ್ ಬೀಚ್. ಅಲ್ಲಿ ಯಾವಾಗಲು ಜನವೋ ಜನ. ಐರ್ವಯ್ನ್ ಅಂತ ಬರೆದು ಅರ್ ವೈನ್ ಎಂದು ಹೇಳುವ ನಮ್ಮ ಊರಿನಿಂದ 10-12 ಮೈಲಿ ದೂರವಿದ್ದ ನ್ಯೂ ಪೋರ್ಟ್ ಸಿಟಿ ದಾರಿಯಲ್ಲಿ ಏರಿಳಿಯುತ್ತ ಕಾರ್ ಪಾರ್ಕ್ ಮಾಡಿ ನಡೆದರೆ ಅಲ್ಲಲ್ಲಿ ಮೆಟ್ಟಲುಗಳ ವ್ಯವಸ್ಥೆ. ಒಂದೆಡೆ ನಗರದ ಗಡಿಬಿಡಿ ಮತ್ತೊಂದೆಡೆ ಸಾಗರ. ಮೆಟ್ಟಲು ಇಳಿಯುವಾಗ ಗಿಡಗಳು ಹೂವುಗಳನ್ನು ನೋಡುತ್ತಾ ಅತಿ ನಿಧಾನವಾಗಿ ನಡೆಯುತ್ತಿದ್ದೆ. ಆ ಇಳಿಜಾರಿನಲ್ಲಿ ಭವ್ಯವಾದ ಬಂಗಲೆ

ಗಳನ್ನ ನೋಡುತ್ತಾ 'ರಿಸ್ಕ್ ಅಲ್ವಾ ಈ ಮನೆಗಳಿಗೆ, ಸಮುದ್ರಕ್ಕೆ ಇಷ್ಟು ಹತ್ತಿರ ಮನೆ ಗಳನ್ನ ಒಂದೇ ಒಂದು ಬಿರುಗಾಳಿ ಸಾಕು, ಹೊಡೆದೆಬ್ಬಿಸಿ ನಿರ್ಮೂಲ ಮಾಡೋಕೆ 'ಅಂದೆ .'ಟೆಕ್ನಾಲಜಿ ಅದನ್ನ ನೋಡ್ಕೊಂಡಿರತ್ತೆ, ಅಜ್ಜಿ. ನಾನೇನಾದ್ರೂ ನಾಕಾರು ಮಿಲಿಯನ್ ಮಾಡ್ಕೊಂಡ್ರೆ ಈ ಥರ ಮನೆ ಕೊಂಡುಕೊಂಡು ಏರ್ ಬಿ ನ್ ಬಿ ಗೆ ಒಪ್ಪಿಸಿಬಿಟ್ರೆ ಲೈಫ್ ಆರಾಮವಾಗಿ ನಡ್ಕೊಂಡು ಹೋಗತ್ತೆ. ನಾನೇನೂ ಇಲ್ಲಿರೋಲ್ಲ, ಇದು ಜಸ್ಟ್ ಟು ರೀಪ್ ದಿ ಹಾರ್ವೆಸ್ಟ್' ಮನೇನ ಬಾಡಿಗೆಗೆ ಕೊಡೋಕೆ ಭಯ ಬೀಳೋ ನಾನು ಇವನ ವ್ಯವಹಾರ ಜ್ಞಾನಕ್ಕೆ ಬೆರಗಾದೆ.

ಹಾಗೆ ಮುಂದೆ ನನ್ನ ವೇಗ ಇನ್ನೂ ಕಡಿಮೆ ಆಯಿತು, ಗಿಡಗಳ ಪರಿಶೀಲನೆ ಮಾಡ್ತಾ .ಅಷ್ಟರಲ್ಲಿ ಒಬ್ಬ ಬಿಳಿಯ ಹೆಂಗಸು ನನ್ನ ಹತ್ತಿರ ಬಂದು 'ಎನಿ ಪ್ರಾಬ್ಲಮ್? ಆರ್ ಯು ಓಕೆ ? ನೀಡ್ ಹೆಲ್ಪ್ ?' ಅಂತ ಓಡಿ ಬಂದಳು ಯಾತಕ್ಕೆ ಹೆಲ್ಪು ಅಂತ ಅರ್ಥವಾಗದೇ ಪಿಳಿ ಪಿಳಿ ಬ್ಲಿಂಕಿದೆ .'ಇಷ್ಟೊಂದು ಕಷ್ಟ ಪಟ್ಟು ಇಳಿ ಲಾರದೆ ಇಳಿತಿದ್ದೆಯಲ್ಲಾ..' ಅವಳ ಅನುಕಂಪದಿಂದ ಬಿಡಿಸಿ ಕೊಳ್ಳೋ ಹೊತ್ತಿಗೆ ಸಾಕು ಸಾಕಾಗಿ ಹೋಯ್ತು.

ಚೊಕ್ಕವಾಗಿದ್ದ ಮೆಟ್ಟಲುಗಳು, ಅಂದವಾದ ವಿಸ್ತಾರವಾದ ಸಮುದ್ರ, ಕಡಲ ತೀರದ ಶುಭ್ರತೆ ನಂಬಲಸಾಧ್ಯ ! ಉಪ್ಪುನೀರಲ್ಲಿ ಆಟವಾಡಿ ಬಂದವರಿಗೆ ಡೀ ಸಲೈನೇಟೆಡ್ ನೀರಿನ ನಲ್ಲಿ ವ್ಯವಸ್ಥೆ.

ಇವೆಲ್ಲ ನೋಡುತ್ತಿದ್ದ ನಾನು ಸುತ್ತಲಿದ್ದ ಜನಗಳನ್ನ ಗಮನಿಸಿರಲಿಲ್ಲ. ಛತ್ರಿಗಳನ್ನ, ಕುರ್ಚಿಗಳನ್ನ, ಮಡಚುವಂಥ ಮಂಚಗಳನ್ನ ಎಲ್ಲ ತಂದು ಕೊಂಡು ತಿಂಡಿ–ತೀರ್ಥಗಳನ್ನಂತೂ ಬಿಡಿ, ವಿಹರಿಸುತ್ತಿರುವ ಜನ, ಅದೇನು ವಿಶೇಷ, ಬಿಡಿ. ವಿಶೇಷ ಅಂದ್ರೆ ಅಲ್ಲಿ ಧ್ಯಾನ ಮಾಡುತ್ತಿರುವವವರೂ, ಮೌನವಾಗಿರುವವರೂ, ಎಲ್ಲರೂ ತಮ್ಮ ತಮ್ಮ ಪ್ರವೃತ್ತಿಗಳಲ್ಲಿ ಮಗ್ನರಾಗಿದ್ದರು! ಇದೆಲ್ಲ ಸಾಲದೋ ಎನ್ನುವಂತೆ ನನಗೆ ಆಶ್ಚರ್ಯ ಮೂಡಿಸಿದ್ದೂ ಅಂದ್ರೆ, ಮೂರು ಯುವಕರು ಒಂಟಿ ಕಾಲಿನಲ್ಲಿ ನಿಂತು ಕಣ್ಣು ಮುಚ್ಚಿ ಕೈ ಮುಗಿದು ವೃಕ್ಷಾಸನದಲ್ಲಿ ಧ್ಯಾನಾಸಕ್ತರಾಗಿದ್ದುದು ! ಅವಾಗವಾಗ ಓಂ.... ಅಂತ ಕಂಚುಕಂಠ ದಿಂದ ಉಲಿಯುತ್ತಿದ್ದುದು ! ಥೇಟ್ ರಾಮಾಯಣದ ಸೀನೇ ಜ್ಞಾಪಕಕ್ಕೆ ತರಿಸಿತು. ಅವರ ಜಟೆಗಳೋ, ಆ ಮಣಿಗಳ ಸರಗಳೋ ಸಾಲದ್ದೆಂಬಂತೆ ಮೈ ತುಂಬಾ ಹಚ್ಚೆಗಳು ! ಮಿತ ವಸ್ತ್ರ ಧಾರಿಗಳು ಎಂದು ಬೇರೆ ಹೇಳಬೇಕಾ?. ಎಲ್ಲಕ್ಕೂ ಮಿಗಿಲಾಗಿ ಅವ್ರ ಸುತ್ತ ಫೋಟೋ ತೆಗೆದು ಕೊಳ್ಳ ಬಯಸುವರು. ಒಂದು ನಿಮಿಷ ಅವರೇನಾದರೂ ಫಿಲಂ ಶೂಟಿಂಗ್ ಮಾಡ್ತಿದ್ದರೋ ಅಂತ ಅನುಮಾನ ಬಂತು ನನಗೆ. ಛಾಯಾಗ್ರಾಹಕರ ನಿರ್ಗಮನ ಆದಮೇಲೂ ಇವರು ತಪೋಭಂಗ ವಾಗಲಿಲ್ಲ. ಪಾಪ, ನಿಜವಾಗಿಯೇ ತಪಸ್ಸು ಮಾಡ್ತಿದ್ದರೇನೋ.

ಇಷ್ಟೆಲ್ಲಾ ನೋಡಿ ನನ್ನ ಜ್ಞಾನ ಪ್ರಪಂಚಕ್ಕೆ(?) ಇಂದಿನ ಕೂಡಿಕೆಯಿಂದ ಧನ್ಯೋಸ್ಮಿ ಅಂತ ಮುಂದೆ ನಡೆದು ಕರೋನ ಡೆಲ್ ಮೊರ್ ಬೀಚಿನತ್ತ ಸೂರ್ಯಾಸ್ತಮ ನೋಡಲು ಹೊರಟೆವು. ■

ಪೋಷಕರು ಮಕ್ಕಳನ್ನು ಯಾಕೆ ಶಾಲೆಗೆ ಕಳಿಸುತ್ತಾರೆ ಎಂದರೆ ಅವರು ನಾಲ್ಕಕ್ಷರ ಕಲಿಯಲಿ ಎಂದು.

ಆದರೆ ಮಕ್ಕಳು ಕಲಿತು ಬರುವ ನಾಲ್ಕಕ್ಷರ ಯಾವುದು ಎಲ್.ಒ.ವಿ.ಇ. ಎನ್ನುವ ನಾಲ್ಕೇ ಅಕ್ಷರ.

# ವನಭೋಜನದ ಒಳಗೆ ಹೊರಗೆ

ಸುಕೇಶವ

ಅದೊಂದು ಕಾಲವಿತ್ತು. ಆಗ ಟಿವಿ. ಮೊಬೈಲ್, ವಾಟ್ಸಪ್ ಫೇಸ್ ಬುಕ್ ಇವೆಲ್ಲಾ ಇರಲೇ ಇಲ್ಲ. ಇವುಗಳ ಹೆಸರುಗಳನ್ನೂ ಯಾರೂ ಕೇಳಿರಲಿಲ್ಲ. ಆಗೆಲ್ಲಾ ಏನಿದ್ರೂ ಫೇಸ್ ಟು ಫೇಸ್. ಆತ್ಮೀಯರ ಹತ್ತಿರ ಒಂದರ್ಧ ಗಂಟೆ ಮಾತಾಡಿಬಿಟ್ಟರೆ ಒಂದು ಸಿನಿಮಾ ನೋಡಿದಷ್ಟು, ಒಂದು ನಾಟಕ ನೋಡಿದಷ್ಟು ತೃಪ್ತಿ ಸಿಕ್ಕಿರೋದು. ಇನ್ನು ಮನೆಗೆ ಯಾರಾದರೂ ಬರುತ್ತಾರೆ ಎಂದರೆ ಅವರನ್ನು ತಿಂಡಿ ಅಥವಾ ಊಟದ ಸಮಯಕ್ಕೇ ಬನ್ನಿ ಎಂದು ಬಲವಂತವಾಗಿ ಹೇಳುತ್ತಿದ್ದರು. ಒಟ್ಟೊಟ್ಟಿಗೆ ಮಾತಾಡುವುದು ಎಷ್ಟು ಪ್ರಿಯವೋ ಒಟ್ಟೊಟ್ಟಿಗೆ ಊಟ ತಿಂಡಿ ಮಾಡುವುದೂ ಅಷ್ಟೇ ಪ್ರಿಯವಾಗಿತ್ತು. ಇನ್ನು ಮನೆಯ ಹಿರಿಯ ಮಹಿಳೆಯರು ಏನಾದರೂ ಕರಿದ ತಿಂಡಿ ಮಾಡಬೇಕು ಅಂದುಕೊಂಡರೆ ಅದನ್ನು ಅಕ್ಕ ಪಕ್ಕದ ಮಹಿಳೆಯರಿಗೂ ಹೇಳಿ ಎಲ್ಲರೂ ಸೇರಿ ಒಬ್ಬರ ಮನೆಯಲ್ಲೇ ತಿಂಡಿ ಮಾಡಿ ಎಲ್ಲರೂ ಹಂಚಿಕೊಳ್ಳೋರು. ಸುಭದ್ರಮ್ಮ ನಿಮ್ಮನ್ಲಿ ಮಕ್ಕಳಿದಾರೆ ನೀವು ಜಾಸ್ತಿ ತಿಂಡಿ ತಗೊಳಿ ಅಂತ ಹೇಳೋರು. ಹೀಗೆ ಮಾತುಕತೆ ನಡೆಯುವ ಸಂದರ್ಭಗಳಲ್ಲೇ ಹುಟ್ಟಿಕೊಂಡಿದ್ದು ವನಭೋಜನ ಎನ್ನುವುದು.

ವನಭೋಜನ ಅಂದರೆ ಇನ್ನೇನಿಲ್ಲ, ಮೂರ್‍ನಾಲ್ಕು ಮನೆಯವರು ಸೇರಿಕೊಂಡು ಅವರವರ ಮನೆಗಳಲ್ಲಿ ವಿಶೇಷವಾದ ಅಡುಗೆಗಳನ್ನು ಮಾಡಿಕೊಂಡು ಊರಿನಿಂದ ಒಂದೋ ಎರಡೋ ಕಿಲೋಮೀಟರು ದೂರ ಇರುವ ತುಂಬಾ ನೆರಳಿರುವ, ನದಿ ಹರಿಯುತ್ತಿರುವ ಸ್ಥಳಗಳಿಗೆ ಹೋಗಿ ಅಲ್ಲಿ ಬೇಕಾದ್ದು ಹರಟೆ ಹೊಡೆದುಕೊಂಡು ಊಟ ಮಾಡಿ ಬರುವುದು. ಚಿಕ್ಕ ಮಕ್ಕಳಿಗೆ ಆಟ ಆಡುವ ಮಜವೋ ಮಜ. ತುಸು ದೊಡ್ಡ ಹುಡುಗರಾದರೆ ನೀರಿಗಿಳಿದು ಈಜಿ ಖುಷಿಪಡುತ್ತಿದ್ದರು. ಒಂದು ಸಾರಿ ಈ ತರಹ ವನಭೋಜನಕ್ಕೆ ಹೋಗಿ ಬಂದರೆ ಇನ್ನೊಂದು ತಿಂಗಳು ಎಲ್ಲರ ಮನಸ್ಸಿನಲ್ಲೂ ಉಲ್ಲಾಸ ಇರುತ್ತಿತ್ತು. ಇಂಥಾ ಸುದ್ದಿಗಳನ್ನು ಕೇಳಿದ ಇನ್ನೂ ಅನೇಕರು ರೀ ಮುಂದಿನ ಸಾರಿ ಹೋಗುವಾಗ ನಮಗೂ ಹೇಳ್ರೀ ಅನ್ನೋರು. ಹೀಗೆ ಬಳಗ ಜಾಸ್ತಿಯಾಗುತ್ತಿತ್ತು. ಆದರೂ ಎಲ್ಲರಲ್ಲೂ ಮಧುರತೆ ಇರುತ್ತಿತ್ತು. ಆಡಬೇಕೆಂದಿದ್ದ ಎಷ್ಟೊ ಮಾತುಗಳು ಅಲ್ಲಿ ಬಿಚ್ಚಿಕೊಳ್ಳುತ್ತಿದ್ದವು. ಹೀಗೆ ಅವರುಗಳು ವನಭೋಜನ ಮಾಡುತ್ತಿರುವಾಗ ಅಪರಿಚಿತರು ಯಾರೇ ಬಂದರೂ ಅವರನ್ನೂ ಭೋಜನಕ್ಕೆ ಕರೆದು ನಿಮ್ಮದು ಯಾವ ಊರು, ಏನು ಮಾಡ್ಕೊಂಡಿದೀರ, ಹೊಲದಲ್ಲಿ ಏನು ಬೆಳೀತೀರ ಅಂತೆಲ್ಲಾ ಮಾತಾಡುತ್ತಾ ಸಂಬಂಧಗಳನ್ನು ಹೆಚ್ಚು ಮಾಡಿಕೊಳ್ಳುತ್ತಿದ್ದರು. ನಂಬುತ್ತೀರೋ ಇಲ್ಲವೋ ಇಂಥಾ ವನಭೋಜದಲ್ಲಿ ಎಲ್ಲವೂ ಮನೆ ಅಡುಗೆ ತಿಂಡಿಗಳೇ ಹೊರತು ಹೊರಗಿನದು ಏನೂ ಇರುತ್ತಿರಲಿಲ್ಲ. ಅಷ್ಟಕ್ಕೂ ಆಗಿನ ಕಾಲದಲ್ಲಿ ಚಿಪ್ಸು, ಲೇಸು ಇವುಗಳು ಇರಲೇ ಇಲ್ಲ.

ಗಂಡಸರೊಂದು ಗುಂಪು ಅವರವರ ವಿಷಯಗಳನ್ನು ಎತ್ತಿಕೊಂಡು ಹರಟೆ ಹೊಡೆಯುತ್ತಿದ್ದರೆ ಹೆಂಗಸರ ಗುಂಪು ಅವರ ವಿಷಯಗಳನ್ನು ಆಯ್ದುಕೊಳ್ಳುತ್ತಿದ್ದರು. ಮಕ್ಕಳಿಗಂತೂ ಲಂಗು ಲಗಾಮು ಏನೂ ಇರುತ್ತಿರಲಿಲ್ಲ. ಇಂಥಾ ವನಭೋಜನದ ಸಮಯದಲ್ಲಿ ಸಂಬಂಧಗಳು ಕುದುರುತ್ತಿದ್ದವು. ಬೇರೆಯವರ ಕಷ್ಟಸುಖಗಳು ಚರ್ಚೆಯಾಗುತ್ತಿದ್ದವು. ಮತ್ತೊಬ್ಬರಿಗೆ ಸಹಾಯ ಮಾಡುವ ಮಾತುಗಳು ಬರುತ್ತಿದ್ದವು. ಆದರೆ ಇಂಥಾ ವನಭೋಜನದಲ್ಲೂ ಎಡವಟ್ಟುಗಳು ಇಲ್ಲದೇ ಇರುತ್ತಿರಲಿಲ್ಲ. ಹೆಸರು

ವನಭೋಜನ ಅಂದರೂ ದೊಡ್ಡವರೆಲ್ಲಾ ತಿನ್ನುವುದರಲ್ಲಿ ಸ್ವಲ್ಪ ನಿಧಾನಿಸೋರು.

ಏಕೆಂದರೆ ಮಕ್ಕಳು ಚನ್ನಾಗಿ ತಿನ್ನಲಿ. ಅವರಿಗೆ ಇನ್ನಷ್ಟು ಉಳಿಸಿರೋಣ ಅಂತ. ಆದರೆ ವನಭೋಜನದ ಮಹೋದ್ದೇಶ ತಿನ್ನುವುದಾಗಿರದೇ ಸಮಾನಮನಸ್ಕರ ಜೊತೆಗೆ ಕಾಲ ಕಳೆಯುವುದು, ಏನಾದರೂ ಚಿಕ್ಕ ಪುಟ್ಟ ಸಮಸ್ಯೆಗಳಿದ್ದರೆ ಅವುಗಳಿಗೆ ಪರಿಹಾರ ಕಂಡುಕೊಳ್ಳುವುದು.

ಒಂದು ಸಾರಿ ಸುಮಿತ್ರಮ್ಮ ವನಭೋಜನಕ್ಕೆ ಬಂದೋರು ಈಗ ಒಂದು ವರ್ಷದ ಹಿಂದೆ ತೀರಿಕೊಂಡ ಅವರ ಯಜಮಾನರ ನಿವೃತ್ತಿವೇತನ ಇನ್ನೂ ಅವರಿಗೆ ಬರುತ್ತಿಲ್ಲ ಎನ್ನುವ ವಿಷಯವನ್ನು ತಿಳಿಸಿದರು. ಗಂಡ ಸರ್ಕಾರೀ ನೌಕರನಾದರೆ ಅವನು ಪಿಂಚಣಿ ತೆಗೆದುಕೊಳ್ಳುತ್ತಿದ್ದ ದಿನಗಳಲ್ಲಿ ನಿಧನರಾದರೆ ಅವರು ತೆಗೆದುಕೊಳ್ಳುತ್ತಿದ್ದ ಪಿಂಚಣಿಯಲ್ಲಿ ಅರ್ಧ ಪಿಂಚಣಿ ಅವರ ಮನೆಯವರಿಗೆ ಅವರು ಬದುಕಿರುವ ತನಕವೂ ಬರುತ್ತದೆ. ಆದರೆ ಸರ್ಕಾರೀ ಕಛೇರಿಯಲ್ಲಿ ಏನೋ ಕೊಂಕು ಅದೂ ಇದೂ ಅಂತ ನಿಧಾನವಾಗಿತ್ತು. ಆದರೆ ಒಂದು ವರ್ಷ ಬೇಕೇ ಎನ್ನುವ ಪ್ರಶ್ನೆಗೆ ಉತ್ತರವಿಲ್ಲ. ಸುಮಿತ್ರಮ್ಮ ಈ ವಿಚಾರವನ್ನು ರಾಧಮ್ಮನವರ ಬಳಿ ಹೇಳಿದಾಗ ರಾಧಮ್ಮ ಅದನ್ನು ಅವರ ಗಂಡನಿಗೆ ತಿಳಿಸಿ ರೀ ನೀವು ಅವರಿಗೆ ಸಹಾಯ ಮಾಡಬೇಕು ಅಂದರು. ಅದಕ್ಕೆ ರಾಧಮ್ಮನ ಗಂಡ ಸುಬ್ಬಣ್ಣ ಅಯ್ಯೋ ಅದಕ್ಕೇನು ತಾಲ್ಲೂಕ್ ಕಛೇರಿಯ ರೆವಿನ್ಯೂ ಇನ್ಸ್‌ಪೆಕ್ಟರ್ ಗೌರೀಶಂಕರ ನಮ್ಮ ಪರಂಧಾಮಯ್ಯನವರಿಗೆ ಗೊತ್ತು. ಅವರಿಗೆ ಒಂದು ಮಾತು ಹೇಳಿಸ್ತೀನಿ. ಇಲ್ಲ ಇನ್ನೊಂದು ಕೆಲಸ ಮಾಡೋಣ ಪರಂಧಾಮಯ್ಯನವರಿಗೆ ಹೇಳಿ ಮುಂದಿನ ಸಾರಿ ವನಭೋಜನಕ್ಕೆ ಗೌರೀಶಂಕರ ಅವರ ಹೆಂಡತಿಯನ್ನೂ ಪರಂಧಾಮಯ್ಯನವರ ಹೆಂಡತಿಯನ್ನೂ ಬರಹೇಳಿಬಿಡೋಣ ಅಂದರು. ಮುಂದೆ ಎರಡೇ ತಿಂಗಳಿನಲ್ಲಿ ಆಯೋಜನೆಗೊಂಡ ಮತ್ತೊಂದು ವನಭೋಜನಕ್ಕೆ ಗೌರೀಶಂಕರ ಅವರು, ಪರಂಧಾಮಯ್ಯನವರೂ ಕುಟುಂಬ ಸಮೇತ ಬಂದರು.

ಗೌರೀಶಂಕರ ಅವರ ಹೆಂಡತಿ ನಳಿನಿ ಅಯ್ಯೋ ನನಗೆ ಇಂಥಾದ್ದೊಂದು ಕಾರ್ಯಕ್ರಮ ಇರುತ್ತೆ ಅಂತಾನೇ ಗೊತ್ತಿರಲಿಲ್ಲ. ರೀ ರಾಧಮ್ಮನವರೇ ಈ ವನಭೋಜನಕ್ಕೆ ನಾನು ಪರ್ಮನೆಂಟು ಕಣ್ರೀ. ನನ್ನನ್ನು ಕರೆಯೋದು ಮರೀಬೇಡಿ ಅಂದರು. ಮೊದಲ ವನಭೋಜನಕ್ಕೇ ಅವರು ಅನೇಕ ತರಹದ ತಿಂಡಿಗಳನ್ನು ಮಾಡಿಕೊಂಡು ತಂದಿದ್ದರು. ಏನ್ರೀ ಇಷ್ಟೊಂದು ಮಾಡಿಕೊಂಡು ಬಂದಿದೀರ ಅಂತ ಕೇಳಿದರೆ ಅಯ್ಯೋ ನಾನೆಲ್ಲಿ ಮಾಡಿದೀನಿ, ನಮ್ಮನೆ ಅಡುಗೆಯವಳು ಮಾಡಿದ್ದು. ಒಂದು ಕೆಲಸ ಮಾಡೋಣ. ಮುಂದಿನ ವನಭೋಜನಕ್ಕೆ ಎಲ್ಲ ತಿಂಡಿ ಊಟಗಳೂ ನಮ್ಮ ಮನೆಯಿಂದಲೇ ಅಂದರು. ಅದಕ್ಕೆ ಸುಮಿತ್ರಮ್ಮ ಅದು ಹೇಗೆ ಆಗುತ್ತೆ. ವನಭೋಜನದಲ್ಲಿ ಎಲ್ಲರ ಮನೆಯ ರುಚಿಯೂ ಇರಬೇಕು. ಎಲ್ಲರೂ ಅವರವರ ಮನೆಗಳಿಂದ ಏನು ಸಾಧ್ಯವೋ ಅದನ್ನು ಮಾಡಿಕೊಂಡು ಬರಲಿ ಅಂದರು.

ಗೌರೀಶಂಕರ, ಪರಂಧಾಮಯ್ಯ ಅವರೂ ಬಹಳ ಖುಷಿಯಿಂದ ಇದ್ದರು. ಎಲ್ಲರೂ ಪರಸ್ಪರ ಪರಿಚಯ ಮಾಡಿಕೊಂಡು ಆನಂದಿಸುತ್ತಿದ್ದರು. ಗೌರೀಶಂಕರ ಅವರ ಹೆಂಡತಿ ನಳಿನಿ ತುಂಬಾ ಚನ್ನಾಗಿ ಹಾಡುತ್ತಾರೆ ಅನ್ನೋದು ಗೊತ್ತಿತ್ತು. ಒಂದು ಹಾಡು ಹೇಳ್ರೀ ಅಂತ ಕೇಳಿದ್ದಕ್ಕೆ ನಳಿನಿ ಸಾಕು ನಿಲ್ಲಿಸಿ ಎನ್ನುವ ತನಕವೂ ಹತ್ತಾರು ಹಾಡುಗಳನ್ನು ಹೇಳಿದರು. ಇದೇ ಛಾನ್ಸು ಅಂತ ರಾಧಮ್ಮನ ಗಂಡ ಸುಬ್ಬಣ್ಣ ಸುಮಿತ್ರಮ್ಮನನ್ನು ತೋರಿಸಿ ಅವರ ಯಜಮಾನರೂ ನಿಮ್ಮ ಕಛೇರಿಯಲ್ಲೇ ಕೆಲಸ ಮಾಡುತ್ತಿದ್ದು ನಿವೃತ್ತರಾಗಿದ್ದರು. ನೀವು ಬರುವ ಬಹಳ ವರ್ಷಗಳ ಮುಂಚೆಯೇ ಅವರು ನಿವೃತ್ತರಾಗಿದ್ದರು. ಈಗ ಒಂದು ವರುಷ ಆಯಿತು ತೀರಿಕೊಂಡು ಅಂದರು. ಗೌರೀಶಂಕರ ಅವರ

ಹೆಂಡತಿ ನಳಿನಿ ಸುಮಿತ್ರಮ್ಮ ಅವರ ಬಳಿ ಹೋಗಿ ಅಯ್ಯೋ ಹೌದೇನ್ರೀ, ಎಷ್ಟು ಜನ ಮಕ್ಕಳು ಏನು ಮಾಡ್ತಿದಾರೆ ಅಂತ ಕಕ್ಕುಲತೆಯಿಂದ ವಿಚಾರಿಸಿಕೊಂಡರು. ಆಮೇಲೆ ಈಗಿನ ಕಾಲದಲ್ಲಿ ಮಕ್ಕಳನ್ನು ನಂಬೋಕಾಗಲ್ಲರೀ, ನಿಮ್ಮ ಯಜಮಾನರ ಪಿಂಚಣಿಯಲ್ಲಿ ಅರ್ಧ ನಿಮಗೆ ಬರ್ತಿದೆ ತಾನೇ ಅಂತ ಕೇಳಿದರು. ಅದಕ್ಕೆ ಸುಮಿತ್ರಮ್ಮ ಅಯ್ಯೋ ಇನ್ನೂ ನನಗೆ ಆ ಭಾಗ್ಯ ಬಂದಿಲ್ಲರೀ, ನಾನೂ ನಮ್ಮ ಭಾಮೈದನೂ ಕಛೇರಿಗೆ ಅಲೆದೂ ಅಲೆದೂ ಸಾಕಾಯಿತು. ಅವರು ಕೇಳಿದ ದಾಖಲೆಗಳನ್ನೆಲ್ಲಾ ಕೊಟ್ಟಿದ್ದಾಯಿತು. ನೀವು ಮದುವೆಯಾಗಿದ್ದು ಯಾವ ಊರು ಯಾವ ಛತ್ರ ಅಂತ ಕೇಳಿದರು. ನಾವು ವಿವರ ಕೊಟ್ಟಿದ್ದೆವು. ಅದಕ್ಕೆ ಅವರು ಊರೇನೋ ಇದೆ, ಆದರೆ ನೀವು ಹೇಳಿದ ಹೆಸರಿನ ಛತ್ರವೇ ಇಲ್ಲವಲ್ಲ ಅಲ್ಲಿ ಅಂತ ಅಂದರು. ನನ್ನ ಭಾಮೈದ ಸಾರ್ ಆ ಛತ್ರವನ್ನು ಕೆಡವಿ ಅಲ್ಲಿ ವಾಣಿಜ್ಯ ಕಟ್ಟಡ ಕಟ್ಟಿದ್ದಾರೆ ಅಂದ. ಸರಿ ಹಾಗಾದರೆ ಅಲ್ಲಿ ಛತ್ರ ಇತ್ತು ಅಂತ ಆ ಊರಿನ ಸರ್ವೆಯರ್ ಹತ್ರ ಒಂದು ಸರ್ಟಿಫಿಕೇಟ್ ತನ್ನಿ ಅಂದರು. ಹೀಗೆ ಒಂದು ಬಿಟ್ರೆ ಇನ್ನೊಂದು ಅಂತ ದಾಖಲೆಗಳನ್ನು ಕೇಳುತ್ತಲೇ ಇದ್ದಾರೆ ಅಂತ ಸುಮಿತ್ರಮ್ಮ ಬೇಜಾರು ಮಾಡಿಕೊಂಡರು.

ತಕ್ಷಣವೇ ಗೌರೀಶಂಕರ ಅವರ ಹೆಂಡತಿ ನಳಿನಿ ಗಂಡನ ಪಕ್ಕ ಕೂತು ರೀ ನೋಡಿ ನಿಮ್ಮ ಕಛೇರಿಯವರು ಅರ್ಥವಿಲ್ಲದ ಏನೇನೋ ದಾಖಲೆ ಕೇಳ್ತಿದಾರಂತೆ. ನನಗೆ ಅವೆಲ್ಲಾ ಗೊತ್ತಿಲ್ಲ, ಇನ್ನು ಒಂದು ತಿಂಗಳ ಒಳಗಾಗಿ ಸುಮಿತ್ರಮ್ಮ ಅವರಿಗೆ ಅವರ ಗಂಡನ ಅರ್ಧ ಪಿಂಚಣಿ ಸುಮಿತ್ರಮ್ಮ ಅವರ ಬ್ಯಾಂಕ್ ಖಾತೆಗೆ ಹೋಗಬೇಕು. ನಿಮಗೆ ಏನೇ ದಾಖಲೆ ಬೇಕಾದರೂ ನಿಮ್ಮ ಕಛೇರಿಯ ಸಿಬ್ಬಂದಿಯನ್ನು ಸುಮಿತ್ರಮ್ಮ ಅವರ ಮನೆಗೆ ಕಳಿಸಿ ತರಿಸಿಕೊಳ್ಳಿ. ಪಾಪ ಆಕೆಯನ್ನು ಕಛೇರಿಗೆ ಅಲೆದಾಡಬೇಡಿ ಅಂದರು. ಅಮ್ಮಾವರ ಹುಕುಂ ಆದ ಮೇಲೆ ಕೇಳಬೇಕೇ. ಒಂದೇ ತಿಂಗಳಿನಲ್ಲಿ ಸುಮಿತ್ರಮ್ಮನವರಿಗೆ ಪಿಂಚಣಿ ಬರಲಾರಂಭಿಸಿತು.

ಇಂಥಾ ಹತ್ತು ಹಲವಾರು ಸಮಸ್ಯೆಗಳು ವನಭೋಜನದಲ್ಲಿ ಪರಿಹಾರ ಕಂಡುಕೊಳ್ಳುತ್ತಿವೆ. ಮದುವೆಗೆ ಸಂಬಂಧ ಕುದುರಿಸುವಂತಹ ಸಂಗತಿಗಳು ಕೂಡಾ ವನಭೋಜನದಲ್ಲಿ ನಡೆಯುತ್ತಾ ಬಂದಿದೆ. ಆದರೆ ಇನ್ನೊಂದು ತಮಾಷೆ ನಡೆದಿದ್ದು ಎಂದರೆ ರಘು ಮತ್ತು ಛಾಯಾ ದಂಪತಿಗಳು ಹೊಸದಾಗಿ ವನಭೋಜನಕ್ಕೆ ಸೇರ್ಪಡೆ ಆದಾಗ. ಒಂದೆರಡು ಭೇಟಿಯಲ್ಲೇ ರಘು ಛಾಯಾ ಅವರಿಗೆ ಹೆದರಿಕೊಳ್ಳುತ್ತಾರೆ, ರಘು ಅಮ್ಮಾವ್ರ ಗಂಡ ಅಂತ ಗುಂಪಿನವರಿಗೆ ತಿಳಿದುಹೋಯಿತು. ಮುಂದೆ ಒಂದು ಭಾನುವಾರ ವನಭೋಜನಕ್ಕೆ ಎಲ್ಲರೂ ಹೋದರು. ಎಲ್ಲರೂ ಅದೂ ಇದೂ ಹರಟುತ್ತಿದ್ದರೆ ರಘು ಮಾತ್ರ ಸುಮ್ಮನೆ ಕೂತಿರೋರು. ಅಪ್ಪಿ ತಪ್ಪಿ ರಘು ಬಾಯಿ ತೆಗೆದು ಏನಾದರೂ ಹೇಳೊಕೆ ಹೋದ್ರೆ ಛಾಯಾ ರೀ ಅದಲ್ಲ, ನಿಮಗೆ ಗೊತ್ತಿಲ್ಲ ಸುಮ್ನಿರಿ ಅಂತ ಅವರು ಷುರು ಮಾಡೋರು. ಊಟದ ಸಮಯದಲ್ಲಿ ಎಲ್ಲರೂ ಅವರವರ ಮನೆಯ ಬುತ್ತಿ ಬಿಚ್ಚಿದಾಗ ಛಾಯ ಅಯ್ಯೋ ಇದೇನ್ರೀ ವನಭೋಜನಕ್ಕೆ ಅಂತ ವಿಶೇಷವಾಗಿ ಒಬ್ಬಟ್ಟು ಮಾಡಿಟ್ಟಿದ್ದೆ ತರೋದೇ ಮರೆತುಹೋಯಿತು ರೀ ಹೋಗಿ ತಂದುಬಿಡ್ರೀ ಅಂದು ರಘುನ ಮನೆಗೆ ಓಡಿಸಿದರು. ರಘು ಮನೆಗೆ ಹೋಗೋ ಸಮಯಕ್ಕೆ ಸರಿಯಾಗಿ ಅವರ ಅಪ್ಪ ಅಮ್ಮ ಮನೆಗೆ ಬಂದರು. ಎಲ್ಲಿ ಛಾಯಾ ಅಂದು ಕೇಳದರೆ ವನಭೋಜನಕ್ಕೆ ಹೋಗಿದಾಳೆ ನಾನೂ ಹೋಗಿದ್ದೆ ಅಂತ ರಘು ವಿವರಿಸಿದ. ಅದಕ್ಕೆ ಅವರ ಅಪ್ಪ ಸರಿ ನಮ್ಮದು ಸೀನು

ಮನೇಲಿ ಊಟ ಆಯಿತು. ನೀನು ಹೋಗಿಬಾ ನಾವು ಮನೇಲಿ ಇರ್ತೀವಿ ಅಂದರು. ಇಲ್ಲಪ್ಪ ನೀವು ಬಂದಿರುವಾಗ ನಾನು ಹೇಗೆ ಹೋಗ್ಲಿ ಅಂತ ರಘು ಅಪ್ಪ

ಅಮ್ಮನಿಗೆ ಒಬ್ಬಟ್ಟು ಕೊಟ್ಟು ಕಾಫಿ ಮಾಡಿಕೊಟ್ಟ. ರಘು ಒಬ್ಬಟ್ಟು ಚನ್ನಾಗಿದೆ ಕಣೋ ಇನ್ನೊಂದು ಕೊಡು ಅಂತ ಅಪ್ಪ ಅಮ್ಮ ಹಾಕಿಸಿಕೊಂಡು ತಿಂದು ಒಬ್ಬಟ್ಟು ಖಾಲಿ ಮಾಡಿದರು.

ರಘುಗೆ ಹಸಿವಾಗಲು ಷುರುವಾಯಿತು. ಮನೇಲಿ ಅಡುಗೆ ಮಾಡಿಲ್ಲ. ಒಬ್ಬಟ್ಟೂ ಖಾಲಿ, ಇನ್ನು ವನಭೋಜನಕ್ಕೆ ಹೋಗೋದೇ ಸರಿ ಅಂದುಕೊಂಡು ಅಪ್ಪ ಅಮ್ಮನಿಗೆ ನೀವು ಮಲಗಿರಿ ನಾನು ಹೋಗಿ ಛಾಯನ್ನ ಕರ್ಕೊಂಡು ಬರ್ತೀನಿ ಅಂದು ಹೊರಟ. ಈ ಕಡೆ ಒಬ್ಬಟ್ಟು ತರೋಕೆ ಹೋದೋರು ಹೋಗೇಬಿಟ್ರಲ್ಲ ಅಂತ ಛಾಯಾ ಇನ್ನುಳಿದ ತಿನಿಸುಗಳನ್ನು ಎಲ್ಲರಿಗೂ ಹಂಚಿದಳು. ಬೇರೆಯವರ ಮನೆದು ಅವಳಿಗೂ ಬಂತು. ಎಲ್ಲರೂ ಚನ್ನಾಗಿ ತಿಂದು ಖಾಲಿ ಮಾಡಿದರು. ಕೆಲವು ಹೆಂಗಸರು ಪಾತ್ರೆ ತಗೊಂಡು ನದಿಯ ಬಳಿ ತೊಳೆಯೋಕೆ ಹೋದರು. ಎಲ್ಲ ಮುಗಿದ ಮೇಲೆ ಗಂಡ ಬಂದಿದ್ದನ್ನು ಕಂಡ ಛಾಯಾ ನಿಮಗೆ ಏನು ಕೆಲಸ ಹೇಳಿದರೂ ಅಷ್ಟೇ ಕಣ್ರೀ. ಒಂದ್ ಕೆಲಸಾನೂ ಸರಿಯಾದ ಸಮಯಕ್ಕೆ ಮಾಡಲ್ಲ ಅಂದಾಗ ರಘು ಮನೇಲಿ ನಡೆದಿದ್ದನ್ನು ತಿಳಿಸಿದ. ಏನ್ರೀ ಇದು ಹುಡುಗಾಟ ವನಭೋಜನಕ್ಕೆ ಅಂತ ಮಾಡಿಟ್ಟಿದ್ದ ಒಬ್ಬಟ್ಟನ್ನು ಅಪ್ಪ ಅಮ್ಮನಿಗೆ ತಿನ್ನಿಸಿ ಬಂದ್ರಾ ಅಂದಳು. ನಂತರ ರಘು ಛಾಯಾ ನನಗೂ ಹಸಿವಾಗ್ತಿದೆ, ಏನಾದರೂ ಕೊಡೆ ಅಂದ. ಅದಕ್ಕೆ ಛಾಯಾ ಇಲ್ಲೇನಿದೆ. ನೀವು ಬರಲಿಲ್ಲ ಅಂತ ಇಲ್ಲಿರೋರೆಲ್ಲ ಎಲ್ಲವನ್ನೂ ಖಾಲಿ ಮಾಡಿದರು. ನದೀಲಿ ನೀರು ಕುಡ್ಕೊಂಡು ಬನ್ನಿ ಹೋಗೋಣ ಅಂದಳು. ರಘುಗೆ ತಲೆ ಸುತ್ತು ಬರೋದೊಂದು ಬಾಕಿ.

ಗೌರೀಶಂಕರ ಅವರು ರಘು ಬೆನ್ನ ಮೇಲೆ ಕೈ ಹಾಕಿ ಅಷ್ಟು ದೂರ ಕರ್ಕೊಂಡು ಹೋಗಿ ತಮ್ಮ ಭುಜಕ್ಕೆ ನೇತುಹಾಕಿಕೊಂಡಿದ್ದ ಬ್ಯಾಗಿನಿಂದ ಒಂದು ಬಿಸ್ಕಟ್ ಪ್ಯಾಕೆಟ್ ತೆಗೆದು ಸದ್ದಿಲ್ಲದೇ ತಿಂದು ಮುಗಿಸಿ ಅಂದರು. ರಘು ಇದೇನ್ಸಾರ್ ಅಂತ ಕೇಳಿದ್ದಕ್ಕೆ ನಾನೂ ಗಂಡಸಾಗಿ ನನಗೆ ಗಂಡಸರ ಕಷ್ಟ ಗೊತ್ತಾಗುತ್ತೆ ಕಣ್ರೀ. ಹೆಚ್ಚೂ ಕಡಿಮೆ ನಾನೂ ನಿಮ್ಮ ಸ್ಥಿತಿಯನ್ನು ಬಹಳ ವರ್ಷ ಅನುಭವಿಸಿದ್ದೆ. ಈಗ ಸ್ವಲ್ಪ ಪರವಾಗಿಲ್ಲ. ತಿನ್ನಿ ತಿನ್ನಿ ಅಂದು ಒಂದೆರಡು ಮೈಸೂರು ಪಾಕ್ ಕೊಟ್ಟರು. ರಘು ಸರ್ ಇದು ಅಂತ ಕೇಳಿದ್ದಕ್ಕೆ ಇದು ನಮ್ಮನೇಲಿ ಮಾಡಿದ್ದು, ತುಪ್ಪದಿಂದ. ಊಟಕ್ಕೆ ನೀವು ಬರಲಿಲ್ವಲ್ಲಾ ಅಂತ ಕೇಳಿದ್ದಕ್ಕೆ ನಿಮ್ಮ ಹೆಂಡತಿ ಅಯ್ಯೋ ಅವರು ಹಾಗೇ, ಏನಾದರೂ ತಿಂದ್ಕೊತಾರೆ ಬಿಡಿ ಅಂದುಬಿಟ್ಟರು. ನನಗೆ ಅಯ್ಯೋ ಪಾಪ ಅನಿಸಿ ಒಂದೆರಡು ಮೈಸೂರು ಪಾಕ್ ನಿಮಗೇಂತ ಮುಚ್ಚಿಟ್ಟುಕೊಂಡಿದ್ದೆ ಅಂದರು. ಬಿಸ್ಕತ್ತು, ಮೈಸೂರು ಪಾಕ್ ಎರಡನ್ನೂ ತಿಂದ ಮೇಲೆ ರಘುಗೆ ಪರವಾಗಿಲ್ಲ ಅನಿಸಿತು.

ವನಭೋಜನ ಹೀಗೇ ಮುಂದುವರಿಯುತ್ತಿದೆ. ಈಗ ಅದಕ್ಕೆ ವರ್ಷಾಬ್ದೀಕ ಮಾಡೋಣ, ಅಲ್ಲಲ್ಲ, ವಾರ್ಷಿಕೋತ್ಸವ ಮಾಡೋಣ, ನಾವು ದೀಪಾವಳಿಗೆ, ನವರಾತ್ರಿಗೆ ಯಾರದ್ದಾದರೂ ಮನೆಯಲ್ಲಿ ಸೇರಿ ಸಣ್ಣ ಪುಟ್ಟ ಪ್ರಹಸನಗಳನ್ನು ಮಾಡೋಣ, ಹಾಡು ಬರೋರು ಹಾಡಲಿ, ಡ್ಯಾನ್ಸು ಬರೋರು ಮಾಡಲಿ ಅಂದುಕೊಂಡಿದ್ದಾರೆ. ಅಂತೂ ಇಂಥಾ ವನಭೋಜನಗಳಿಂದ ಅನೇಕ ಸಮಸ್ಯೆಗಳು ನಿವಾರಣೆಯಾಗಿವೆ, ಅನೇಕ ಸಂಸಾರಗಳ ಗುಟ್ಟು ಆಚೆ ಬಂದಿದೆ, ಅನೇಕರ ವೈಯಕ್ತಿಕ ರೀತಿನೀತಿಗಳು ಅನಾವರಣಗೊಂಡಿವೆ. ಎರಡು ಕುಟುಂಬ ಅಂತ ಪ್ರಾರಂಭವಾಗಿದ್ದು ಈಗ ಹತ್ತು ಕುಟುಂಬಗಳು ನಿರಂತರವಾಗಿ ಅಂದರೆ ಕಡೇ ಪಕ್ಷ ತಿಂಗಳಿಗೊಂದು ವನಭೋಜನ ಕಾರ್ಯಕ್ರಮ ಮಾಡುತ್ತಿದ್ದಾರೆ.

■

# ಭಾರ ಎತ್ತೋಣ ಬಾರಾ

**✍ ಸುಮಾ ರಮೇಶ್, ಹಾಸನ**

ವಯಸ್ಸು ನಲವತ್ತರ ಗಡಿ ದಾಟಿದಂತೆ ಅಡಿಗಡಿಗೂ ತೂಕ ಏರುತ್ತಾ ನಮ್ಮ ದೇಹ ನಮಗೇ ಭಾರವಾದಂತಾಗುವುದು. ಮಧ್ಯಪ್ರದೇಶದ ಟೈರುಗಳು ಅಡ್ಡಡ್ಡ ಕುಳಿತು ಮೇಲೇಳಲು ಅಡ್ಡಿಪಡಿಸುವವು. ಧಮ್ ಲಗಾಕೆ ಐಸಾ ಎನ್ನುತ್ತಾ ತೋಳ್ಬಲವನ್ನೆಲ್ಲಾ ಒಗ್ಗೂಡಿಸಿ ಜಾಕ್ ಹಾಕಿ ದೇಹವನ್ನು ಮೇಲೆತ್ತಿದರೆ ದಮ್ಮು, ಕೆಮ್ಮು ಹೊರಹೊಮ್ಮುವುದು. ತಾಟಿನ ಮುಂದೆ ಕುಳಿತು ಉದರಕ್ಕೆ ಷೋಡಶೋಪಚಾರ ಪೂಜೆ ಮಾಡಿದ್ದರ ಪ್ರತಿಫಲವದು. ಹೀಗೆ ಹೆಚ್ಚಿದ ಭಾರವನ್ನು ಇಳಿಸಲು ಹಿರಿಯರು ಸೃಷ್ಟಿಸಿದ್ದ ಏಕಾದಶಿ, ಒಪ್ಪತ್ತು, ಜಲ ಉಪವಾಸ, ಒಣ ಉಪವಾಸದಂತಹ ಪಥ್ಯಗಳು ಇಂದು ಪರಿಷ್ಕೃತಗೊಂಡು ಕೀಟೋ ಡಯೆಟ್, ಓಮ್ಯಾಡ್ (ಒನ್ ಮೀಲ್ ಎ ಡೇ), ಇಂಟರ್ಮಿಟೆಂಟ್ ಫಾಸ್ಟಿಂಗ್ ಎಂದಾಗಿವೆ. ರಸ್ತೆಗೊಂದರಂತೆ ತಲೆಯೆತ್ತಿರುವ ಫಿಟ್ನೆಸ್ ಸೆಂಟರ್ ಗಳು ಒಂದೆಡೆ ಮಹಿಳೆಯರ ಜೀರೋ ಫಿಗರ್ ಕನಸಿಗೆ ಚಾಲನೆ ನೀಡಿದರೆ ಮತ್ತೊಂದೆಡೆ ಪುರುಷರ ಕಲ್ಲಂಗಡಿ ಉದರವನ್ನು ಇಳಿಸುವ ಮೆಟರ್ನಿಟಿ ಆಸ್ಪತ್ರೆಗಳಂತಾಗಿವೆ.

ಕೆಲವರು ಭಾರ ಇಳಿಸಿ ಹೆಸರು ಮಾಡಿದರೆ ಇನ್ನು ಕೆಲವರು ಭಾರ ಎತ್ತಿಯೇ ಪ್ರಸಿದ್ಧರಾದರು. ಕರ್ಣಂ ಮಲ್ಲೇಶ್ವರಿ ಒಲಂಪಿಕ್ಸ್‌ನಲ್ಲಿ ಭಾರೀ ಭಾರ ಎತ್ತಿ ಭಾರತಕ್ಕೆ ಮಹಿಳಾ ವಿಭಾಗದಲ್ಲಿ ಮೊದಲ ಪದಕ ತಂದು ಭಾರಕ್ಕೊಂದು ಶಿಲಾನ್ಯಾಸ ಮಾಡಿದರು. ಅದರ ಮೇಲೆ ಮತ್ತೊಂದು ಮೈಲಿಗಲ್ಲು ಇರಿಸಲು ಹೋದ ವಿನೇಶ್ ಫೋಗಟ್ ಫೈನಲ್ಸ್‌ನಲ್ಲಿ ದೇಹದ ಭಾರ ನೂರು ಗ್ರಾಂ ಹೆಚ್ಚಾಗಿ ಡಿಸ್ ಕ್ವಾಲಿಫೈ ಆದದ್ದು ಇತಿಹಾಸ. ಕೂದಲು ಕತ್ತರಿಸಿ ರಕ್ತ ದಾನ ಮಾಡಿ ಬೆವರಿಳಿಸಿದರೂ ನೂರು ಗ್ರಾಂ ಹೆಚ್ಚುವರಿ ತೂಕ ಹೆಚ್ಚು ಚಿಂತೆ ಮಾಡಿದ್ದು ಸುಳ್ಳಲ್ಲ. ಇಳಿಸಲಾಗದ ಪ್ರತೀ ಹತ್ತು ಗ್ರಾಂ ತೂಕವೂ ಪದಕಕ್ಕೆ ಕುತ್ತು ತಂದ ನಂತರ ಅದುವರೆಗೂ ನಿಕೃಷ್ಟವೆನಿಸಿದ್ದ ಗ್ರಾಂ ಗೂ ಮೌಲ್ಯ ಬಂದಿತು. ಇತ್ತೀಚೆಗೆ ಚಿನ್ನದ ದರವೂ ಪ್ರತಿ ಗ್ರಾಂಗೆ ಮೂರು ಪಟ್ಟು ಹೆಚ್ಚಿ ಜೇಬಿಗೂ ಭಾರವಾಯಿತು.

ಒಲಿಂಪಿಕ್ಸ್ ನಲ್ಲಿ ಸ್ಪರ್ಧಿಗಳು ಪದಕ ಗೆಲ್ಲಲು ಭಾರ ಎತ್ತಿದರೆ ಇತ್ತೀಚಿನ ದಿನಗಳಲ್ಲಿ ದೇಹಕ್ಕೆ ಒಜೆಂಪಿಕ್, ಮೌಂಜಾರೋ ಚುಚ್ಚಿ ಭಾರ ಇಳಿಸುವವರ ಸಂಖ್ಯೆ ಹೆಚ್ಚುತ್ತಿದೆ. ಇದು ಫಾಸ್ಟ್ ಫುಡ್ ಮೆದ್ದು ಫಾಸ್ಟ್ ಆಗಿ ಭಾರವಾದ ಬಾಡಿಯನ್ನು ಅಷ್ಟೇ ಫಾಸ್ಟ್ ಆಗಿ ಇಳಿಸಲು ಬಳಸುವ ಚುಚ್ಚುಮದ್ದು. ಮಧುಮೇಹಿಗಳಿಗೆಂದು ಬಳಸುತ್ತಿದ್ದ ಈ ಇಂಜೆಕ್ಷನ್ ಮೋಹಕ್ಕೆ ಸ್ಥೂಲದೇಹಿಗಳು ಮುಗಿಬಿದ್ದಿದ್ದಾರೆ. ಇದರಿಂದ ಹೊಟ್ಟೆ ಲಕ್ವ ಹೊಡೆಸಿಕೊಂಡಂತೆ ಸ್ತಬ್ಧವಾಗಿ ಹಸಿವು ನಶಿಸಿ ದೇಹ ದಿಢೀರನೆ ಹಗುರಾಗುವುದು.

ಭಾರ ಎತ್ತುವುದರಲ್ಲೂ ವೈಯಕ್ತಿಕ ಭಾರ, ಸಾಮುದಾಯಿಕ ಭಾರ ಎಂಬ ವಿಂಗಡಣೆ ಇದೆ. ಸಂಸಾರದ ಭಾರ, ದೇಹದ ಭಾರ ವೈಯಕ್ತಿಕವಾದರೆ ಸಂಘ, ಸಂಸ್ಥೆಗಳ ಭಾರ, ದೇಶ ರಾಜ್ಯಗಳ ಭಾರ ಸಾರ್ವತ್ರಿಕ. ಈ ಸಾರ್ವತ್ರಿಕ ಭಾರ ಹೊರಲು ಭಾರೀ ಪೈಪೋಟಿಯೇ ಇದೆ. ಆದಿಶೇಷ ತಲೆಯ ಮೇಲೆ ವಿಶ್ವವನ್ನೇ ಹೊತ್ತು ನಿಂತಂತೆ ಹಲವು ಪಕ್ಷಗಳು ಈ ದೇಶದ ಭಾರ ಹೊರಲು, ರಾಜ್ಯಭಾರ ಮಾಡಲು ನಾಮುಂದು ತಾಮುಂದು ಎಂದು ಪೈಪೋಟಿಗಿಳಿಯುತ್ತವೆ. ಭಾರ ಹೊರಲು ತಮ್ಮ ಕೈ ಭಾರೀ ಬಲಿಷ್ಠ ಎಂದು ಒಂದು ಬಣ ಹಸ್ತ ತೋರಿದರೆ, ಭಾರ ಎತ್ತುವುದು ಕಮಲದ ಹೂ ಎತ್ತಿದಷ್ಟೇ ಸಲೀಸು ಎನ್ನುವುದು ಮತ್ತೊಂದು. ತಲೆಯ ಮೇಲೆ ತೆನೆಯ ಭಾರ ಹೊತ್ತ ಮಹಿಳೆಯೆಡೆಗೆ

ಕೈತೋರಿ ಭಾರ ಹೊರುವುದಕ್ಕೊಂದು ಮಾದರಿಯನ್ನೇ ಸೃಷ್ಟಿಸಿದ್ದು ಮತ್ತೊಂದು ಪಡೆ. ಇದೆಲ್ಲದರ ನಡುವೆ ' ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ...' ಎಂಬ ಕುಮಾರವ್ಯಾಸನ ನುಡಿಯಂತೆ ಮತ ಚಲಾಯಿಸುವ ಭಾರ ಹೊತ್ತವರು ಬ್ಯಾಲೆಟ್ ಪೇಪರಿನೊಳಗೆ ಇಣುಕಿ ಬೆರಳಿನಲ್ಲೇ ಬ್ಯಾಲೆಯಾಡುತ್ತಾ ತಿಣುಕುವರು. ಚುನಾವಣೆ ಗೆದ್ದವರ ಹೆಗಲು ಹಾರಗಳ ಭಾರಕ್ಕೆ ಜಗ್ಗಿ, ಕುಗ್ಗಿ, ಹಿಗ್ಗಿ ಕರ್ತವ್ಯದ ಭಾರ ಹೊರಲು ಹಿಂಜರಿಯುವುದು.

ಹೆಣ್ಣಿನ ಮನ ಗೆಲ್ಲಲು ಭಾರೀ ಭಾರ ಹೊರಲು ಮುಂದಾದವರು ಹಲವರು. ಬೃಹತ್ ಬಿಲ್ಲಿನ ಭಾರ ಎತ್ತಿ ರಾಮ ಸೀತೆಯನ್ನು ವರಿಸಿದರೆ ಬೃಹತ್ ಕಲ್ಲನ್ನು ಎತ್ತಿ 'ಮನ ಮೆಚ್ಚಿದ ಹುಡುಗಿ' ಚಿತ್ರದಲ್ಲಿ ಶಿವಣ್ಣ ಸುಧಾರಾಣಿಯನ್ನು ವರಿಸಿದರು. ಚೆನ್ನೈ ಎಕ್ಸ್ ಪ್ರೆಸ್ ನಲ್ಲಿ ಶಾರೂಖ್, ದೀಪಿಕಾಳ ನೀಳ ದೇಹದ ಭಾರವನ್ನು ನಿಟ್ಟುಸಿರಿಡುತ್ತಲೇ ಎತ್ತಿ ದೇವಾಲಯದ ಮೆಟ್ಟಿಲುಗಳನ್ನು ಹತ್ತಿ ಗೆಲುವು ಸಾಧಿಸಿದರೆ ಮುಂಗಾರು ಮಳೆಯ ಗಣೇಶ ಪೂಜಾ ಗಾಂಧಿಯನ್ನು ಹೀಗೆಯೇ ಹೊತ್ತು ಹೋದರೂ ಅಂತ್ಯದಲ್ಲಿ ಅವರ ಜೋಡಿ ಸುಖಾಂತ್ಯ ಕಾಣದಾಯಿತು. ಇನ್ನು ಕೆಲವರು 'ತುಲಾಭಾರ' ದ ಹರಕೆ ಹೊತ್ತು ತಮ್ಮ ಇಷ್ಟಾರ್ಥಗಳ ಭಾರವನ್ನು ಭಗವಂತನ ಮೇಲೆ ಹೊರಿಸಿ ತಮ್ಮ ಭಾರಕ್ಕೆ ತಕ್ಕ ವಸ್ತುವನ್ನು ತಕ್ಕಡಿಯಲ್ಲಿ ತೂಗಿ ದಾನ ಮಾಡುವರು. ಸತ್ಯಭಾಮೆ ಶ್ರೀಕೃಷ್ಣನನ್ನು  ಚಿನ್ನದ ಆಭರಣಗಳಿಂದ ತೂಗಲು ಪ್ರಯತ್ನಿಸಿ ವಿಫಲಳಾದಾಗ ರುಕ್ಮಿಣಿ ಕೇವಲ ಒಂದು ತುಳಸಿ ದಳವನ್ನಿರಿಸಿ ಭಾರವನ್ನು ಸರಿಗಟ್ಟಿ ತಾನು ಇಕೊ–ಫ್ರೆಂಡ್ಲಿ ಎಂದು ಪ್ರೂವ್ ಮಾಡಿದಳು.



ಭಾರವನ್ನು ಅಳೆಯಲು ಹಲವು ಮಾಪನಗಳಿವೆ. ಹಿಂದಿನ ಮಣ, ಸೇರು, ಪಾವು, ಪಲ್ಲ, ಬಳ್ಳಗಳು ಇಂದು ಕಿಲೋ ಗ್ರಾಂ, ಮಿಲಿ ಗ್ರಾಂ, ಪೌಂಡ್ ಗಳಾದರೆ ದ್ರವವಸ್ತು ಮಾಪನಗಳು ಲೀಟರ್, ಮಿಲಿ ಲೀಟರ್, ಗ್ಯಾಲನ್, ಪಿಂಟ್ ಗಳಾಗಿವೆ. ಆಡುವ ಮಾತಿಗೂ ಒಂದು ತೂಕವಿದ್ದು ಅದರಿಂದ ವ್ಯಕ್ತಿತ್ವವನ್ನು ಅಳೆಯಬಹುದು. ಕಣ್ಣಿನಲ್ಲೇ ಅಳತೆಯ ಮಾಪನ ಇರಿಸಿಕೊಂಡು ಹೆಣಭಾರ, ಮಣಭಾರ, ಹೂವಿನಷ್ಟೇ ಹಗುರ ಎಂದು ಅಂದಾಜಿಸುವ ಪರಿಣಿತರೂ ಇರುವರು. ಹೆಣ್ಣಿನ ಅಂದವನ್ನು ಏಳು ಮಲ್ಲಿಗೆ ತೂಕದವಳು ಎಂದು ಬಣ್ಣಿಸುತ್ತಿದ್ದರು. ಅದು ಅಂದಿನವರ ಜೀರೋ ಫಿಗರ್ ಕಾನ್ಸೆಪ್ಟ್ ಇರಬಹುದು. ಮಲ್ಲಿಗೆ ಎಂದರೆ ಸೂಜಿ ಮಲ್ಲಿಗೆಯೋ, ದುಂಡು ಮಲ್ಲಿಗೆಯೋ,

ಏಳು ಸುತ್ತಿನ ಮಲ್ಲಿಗೆಯೋ ಎಂದು ಸೂಚಿಸಿಲ್ಲವಾದರೂ ವೈದ್ಯಕೀಯ ಪರಿಭಾಷೆಯಲ್ಲಿ ಏಳು ಮಲ್ಲಿಗೆಯ ತೂಕ ನವಜಾತ ಶಿಶುವಿಗೂ ಅಂಡರ್ ವೆಯ್ಟ್ ಎಂದೇ ಪರಿಗಣಿಸಲಾಗುವುದು.

ಹಿಂದೆ ತರಕಾರಿ ಹಣ್ಣುಗಳನ್ನು ಕುಕ್ಕೆಯಲ್ಲಿ ತುಂಬಿಕೊಂಡು ಆ ಭಾರವನ್ನು ತಲೆಯ ಮೇಲೆ ಹೊತ್ತು ಸಾಗುತ್ತಿದ್ದರು. ಹೆಂಗಳೆಯರು ಬಾವಿ, ಬೋರ್ವೆಲ್ ಗಳಿಂದ ನೀರನ್ನು ಪುಲ್ ಮಾಡಿ ಫುಲ್ ಆದ ಬಿಂದಿಗೆಯ ಭಾರವನ್ನು ಸೊಂಟ, ತಲೆಯ ಮೇಲೆ ಹೊತ್ತು ಸಾಗುವಾಗ ಕೈಬಳೆ, ಕಾಲ್ಗೆಜ್ಜೆಗಳ ಕಿಣಿಕಿಣಿ ನಾದಕ್ಕೆ ಹಲವರ ಕಣ್ಣುಗಳು ಮಿನುಗಿ 'ಬಾರ್ ಬಾರ್ ದೇಕೊ ಹಜಾರ್ ಬಾರ್ ದೇಕೋ...' ಎನ್ನುತ್ತಿದ್ದವು. ಇತ್ತೀಚೆಗೆ ಚೊಂಬೆತ್ತಿ ಜಳಕ ಮಾಡುವುದೂ ಶ್ರಮವೆಂದು ಶವರ್ ತಿರುಗಿಸುವ ಮಂದಿ ಜಿಮ್ ನಲ್ಲಿ ವಿವಿಧ ಅಳತೆಯ ಡಂಬಲ್ಸ್ ಎತ್ತಿ ದೇಹ ಹುರಿಗೊಳಿಸಿಕೊಳ್ಳುವರು. ದೈನಂದಿನ ಕೆಲಸ ಹಗುರವಾಗಿ ದೇಹ ಭಾರಿಯಾದಾಗ ಅದನ್ನಿಳಿಸಲು ದುಬಾರಿ ಹಣ ಕೈಬಿಡುವುದು.

'ಆನೆ ಭಾರ ಆನೆಗೆ ಇರುವೆ ಭಾರ ಇರುವೆಗೆ' ಇರುವೆಗಳು ತಮ್ಮ ದೇಹಕ್ಕಿಂತಲೂ ಭಾರವಾದ ವಸ್ತುವನ್ನು ಹೊತ್ತು ಬ್ರೇಕ್ ಫೇಲ್ ಆದ ವಾಹನದಂತೆ ತಟ್ಟಾಡುತ್ತಾ ಸಾಗುತ್ತವೆ. ದೇಹದ ಭಾರ ಎತ್ತಿ ಬಳಲಿದವರಿಗಿಂತ ಕುಟುಂಬದ ಭಾರ ಹೊತ್ತು ಕುಗ್ಗಿದವರ ಸಂಖ್ಯೆಯೇ ಅಧಿಕ. ಹೃದಯ ಭಾರವಾದಾಗ ಅದು ಕಣ್ಣೀರಾಗಿ ದ್ರವಿಸಿ ನಿಟ್ಟುಸಿರಾಗಿ ಹೊರಹೊಮ್ಮುವುದು. ಆಶ್ವಾಸನೆಗಳ ಭಾರ ಹೊತ್ತ ಆಳುವ ಪಕ್ಷ ಉಚಿತ ಬಸ್ಸಿನ ಸೌಲಭ್ಯ ನೀಡಿದ್ದರಿಂದ ವನಿತೆಯರ ಓಡಾಟಕ್ಕೆ ಒಂದಿಷ್ಟು ಶಕ್ತಿ ಜಮೆಯಾಗಿ ಟೆಂಪಲ್ ರನ್ ಮುಖೇನ ಭಕ್ತಿ ಮೂವ್ಮೆಂಟ್ ಶುರುವಾಗಿದೆ. ಇತ್ತ ವಿದ್ಯುತ್ ಬಿಲ್ಲಿನ ಭಾರ ಇಳಿದು ಪುರುಷರ ಜೇಬೂ ಹಗುರಾಗಿದೆ.

ಹಿಟಾಚಿ, ಕ್ರೇನ್ ಗಳು ಬರುವ ಮುನ್ನ ಭಾರೀ ಭಾರ ಎತ್ತಲು ಮ್ಯಾನ್ ಪವರ್ ಬಳಸುತ್ತಿದ್ದರು. 'ಒಗ್ಗಟ್ಟಿನಲ್ಲಿ ಬಲವಿದೆ 'ಎಂಬಂತೆ ಹತ್ತಾರು ಕೈಗಳು ಒಂದೆಡೆ ಸೇರಿ 'ಧಮ್ ಲಗಾಕೆ' ಎಂಬ ಘೋಷ ವಾಕ್ಯ ಕೂಗಿದೊಡನೆಯೇ ಐಸಾ ಎಂಬ ಉದ್ಗಾರ ಹೊರಟು ಅದರಿಂದ ಶಕ್ತಿ ಸಂಚಯಗೊಂಡು ಭಾರ ಇಂಚಿಂಚೇ ಮೇಲೇಳುತ್ತಿತ್ತು. ಇಂದಿಗೂ ಇದೇ ಘೋಷ ವಾಕ್ಯ ಭಾಷಾತೀತವಾಗಿ ಎಲ್ಲಾ ಪ್ರದೇಶಗಳಲ್ಲೂ ಬಳಕೆಯಲ್ಲಿದ್ದು ಭಾರ ಎತ್ತಲು ಹುರುಪು ತುಂಬುವುದು. 'ಅನ್ನಕ್ಕೆ ದಂಡ ಭೂಮಿಗೆ ಭಾರ' ಇದು ದುಡಿಮೆ ಮಾಡದ ಸೋಮಾರಿಗಳಿಗೆ ಹೇಳುವ ಮಾತು. ಆಧುನಿಕ ಜೀವನ ಶೈಲಿಯಿಂದ ಹೆಚ್ಚಿದ ತ್ಯಾಜ್ಯಗಳ ಭಾರಕ್ಕೆ ತಾಯಿ ಭಾರತಿ ನಲುಗಿರುವಳು. ಜನನಿ ತನ್ನ ಉದರದಿ ಒಂಬತ್ತು ತಿಂಗಳು ಹಸು ಕಂದನ ಭಾರ ಹೊತ್ತರೆ ಅವನಿ ಸಕಲ ಜೀವರಾಶಿಗಳನ್ನೂ ಒಡಲಲ್ಲಿ ಹೊತ್ತು ನಿಂತಿರುವಳು. ಬದುಕಿನಲ್ಲಿ ಆದಿಯಿಂದ ಅಂತ್ಯದವರೆಗೂ ಒಂದಿಲ್ಲೊಂದು ಭಾರ ಹೊರುತ್ತಾ ಭಾರವಾಗಿಯೇ ಬದುಕಿ ಲೋಕದ ಸಂತೆ ಮುಗಿಸಿದ ಮೇಲೂ ಈ ದೇಹದ ಭಾರವನ್ನು ನಾಲ್ಕು ಜನ ಹೊತ್ತೇ ಅಂತ್ಯಗಾಣಿಸಬೇಕು.

■

**ಇರುವೆ ಪದ್ಯ**

ಅಲ್ಲೂ ಇರುವೆ, ಇಲ್ಲೂ ಇರುವೆ

ಎಲ್ಲಾ ಕಡೆಯೂ

ಕಟ್ಟಿರುವೆ, ಕೆಂಪಿರುವೆ, ಕಪ್ಪಿರುವೆ....

# ಉಪಹಾರ ಪ್ರಕರಣವೂ

ರಮೇಶಚಂದ್ರ

ಸಮ್ಮಾನ್ಯ ಗುಂಡಣ್ಣನವರು ಬೆಳಗಿನ ಭೋಟಾ ಕಾಫಿ.....ವಾಯುವಿಹಾರ..... ಗೆಳೆಯರೊಡನೆ ಹರಟೆ ಮುಗುಸಿ ಹಿಂದಿರುಗಿ ಬಂದಾಗಲೇ ಹೊಟ್ಟೆ ಚುರುಗುಟ್ಟುತ್ತಿತ್ತು. ಸ್ನಾನ ಪೂಜೆ ಮುಗಿಸಿ ಉಪಹಾರಕ್ಕೆ ಕುಳಿತಾಗ ಹೊಟ್ಟೆಯ ಬ್ಯಾಟಿಂಗಿಗೆ ಸಜ್ಜಾಗಿದ್ದರು. ಗುಂಡಣ್ಣನವರ ಧರ್ಮಪತ್ನಿ ಅನ್ನಪೂರ್ಣ ಮಹಾತಾಯಿ.... ಬಗೆ ಬಗೆ ರುಚಿ ಬಲ್ಲವಳು. ಗುಂಡಣ್ಣನವರು ಒಮ್ಮೆ ಹೂಂಕರಿಸಿದರೆ "ಬಂದೆ ಬಂದೇ" ಎನ್ನುವ ಆಶ್ವಾಸನೆಯೊಂದಿಗೆ ಸೌ!! ಅನ್ನಪೂರ್ಣ ಬೆಚ್ಚಗಿನ ಬಾದಾಮಿ ಹಲ್ವಾದ ಬಟ್ಟಲನ್ನು ಮುಂದಿಟ್ಟು ಹೋದರು.

ಒಂದೋ ಎರಡೋ ದೊಡ್ಡ ಚಮಚೆ ಬಿಸಿ ಬಾದಾಮಿ ಹಲ್ವಾ ಗುಂಡಣ್ಣನವರ ಉದರ ಸೇರಿತು. ಮುಂದಿನ ಕಾರ್ಯಕ್ರಮ ಕೇಸರಿ ಬಣ್ಣದ ಬಿಸಿಬಿಸಿ ಗುಲಾಬ ಜಾಮೂನು, ಒಂದೋ ಎರಡೋ ಜಾಮೂನು ಗುಂಡಣ್ಣನವರ ರುಚಿ ಹೆಚ್ಚಿಸಿತು.

ಮುಂದಿನ ಸರದಿ ಬಿಸಿಬಿಸಿ ಹೊಗೆಯಾಡುವ ಮೃದು ಮಧುರ ಮಲ್ಲಿಗೆ ಇಡ್ಲಿಯದು. ಒಂದೋ ಎರಡೋ ಮಲ್ಲಿಗೆ ಇಡ್ಲಿ  ತಿಪಟೂರು ಕೊಬ್ಬರಿ ಚಟ್ನಿಯಲ್ಲಿ ಮುಳುಗಿ ಉದರದಲ್ಲಿ ತೇಲಿತು. ಸಣ್ಣ ಪರಾತದಲ್ಲಿ ಸವರನ್ ಬಣ್ಣದ ಕಿಲಕಿಲಿಸುವ ಉದ್ದಿನ ವಡೆಗಳು ಪ್ರತ್ಯಕ್ಷವಾದವು. ಒಂದೋ ಎರಡೋ ಉದ್ದಿನ ವಡೆಗೆ ಮೋಕ್ಷ ಕರುಣಿಸುವ ಮನಸ್ಸಾಯಿತು.  ಆ ವೇಳೆಗೆ ಗುಂಡಣ್ಣನವರು ಕಾಯಿ ಚಟ್ನಿಯಲ್ಲಿ ಒಂದೋ ಎರಡೋ ವಡೆಗೆ ಉದರದಲ್ಲಿ ಸ್ಥಾನ ಕಲ್ಪಿಸಿದರು.

ಒಂದೋ ಎರಡೋ ಗರಿ ಗರಿ ವಡೆಗಳು ಸಾಂಬಾರಿನಲ್ಲಿ ವಿಹರಿಸಿ, ಗುಂಡಣ್ಣನವರ ಉದರದಲ್ಲಿ ವಿಹರಿಸಿದವು. ಈಗ ಒಂದು ಟಪಾಲು ಗುಂಡಣ್ಣನವರ ಉದರದಿಂದ ಹೊರಟು ಬಾಯಿಯಿಂದ ಸಶಬ್ದವಾಗಿ ಹೊರಬಂದಿತು.

ಇನ್ನೆರಡು ವಡೆ ಬಡಿಸಲಾ ಎಂದಳು ಅನ್ನಪೂರ್ಣ. "ಸಾಕು ಬಿಡು ನಿನಗೆ ಇಟ್ಟುಕೋ" ಎಂದ ಪತಿರಾಯ. ದೊಡ್ಡ ಲೋಟದಲ್ಲಿ ನೊರೆ ನೊರೆಯಾಗಿ ಬಿಸಿ ಬಿಸಿಯಾಗಿ ಘಮ ಘಮಿಸುವ ವಾಸನೆ ಸಹಿತ ಕಾಫೀ ಕನ್ನಿಕೆ ಪ್ರತ್ಯಕ್ಷಳಾದಳು.

ಒಂದೋ ಎರಡೋ  ಕಪ್ ಅಷ್ಟೇ ಕಾಫಿ ಸುಖಿಗೀತದ ಬಂದಿಸಿ ಹೊಟ್ಟೆ ಹೊಕ್ಕಿತು. ಈಗ ಒಂದು ಪರಿಪೂರ್ಣವಾದ ಸಂತೃಪ್ತಿಯ ತೇಗು ಒಂದೋ ಎರಡೋ ಹೊರಬಿದ್ದಿತು. ಒಂದೋ ಎರಡೋ ಸುಗಂಧದ ಅಡಕೆ ಪುಡಿ ದವಡೆಯಲ್ಲಿ ಒತ್ತರಿಸಿಕೊಂಡು ಸನ್ಮಾನ್ಯ ಗುಂಡಣ್ಣನವರು ಎದ್ದು ಟಿ.ವಿ  ಮುಂದೆ ಕುಳಿತರು.

ಆಗಾಗ್ಗೆ–ಸಣ್ಣಗೆ–ಕುರು ಕುರು ಎನ್ನುವ ಗೊರಕೆ ಸದ್ದು ಒಂದೋ ಎರಡೋ ಬಾರಿ ಅಷ್ಟೆ ಆ ಸಂತೃಪ್ತಿಯ ಗೊರಕೆ ಸದ್ದು ಒಂದೋ ಎರಡೋ ಬಾರಿ ಅಷ್ಟೇ– ಟಿವಿಯಿಂದಲೋ, ಸನ್ಮಾನ್ಯ ಗುಂಡಣ್ಣನವರ ನಾಸಿಕಾಗ್ರದಿಂದಲೋ ತಿಳಿಯದೆ ಅನ್ನಪೂರ್ಣಮ್ಮ ಮುಗುಳು ನಗುತ್ತಿದ್ದರು.

ಎಂಬಲ್ಲಿಗೆ ನಮ್ಮ ಸನ್ಮಾನ್ಯ ಗುಂಡಣ್ಣನವರ ಪ್ರಾತಃಕಾಲದ  ಉಪಹಾರ ಕಾರ್ಯವು ಸಂಪನ್ನವಾದದು.

ಸಮಸ್ತ ಸನ್ಮಂಗಳಾನಿ ಭವಂತು.

■

## Statement About Ownership And Other Particulars About Newspaper "Aparanji" To Be Published In The First Issue Every Year After Last Day of February.

Form IV

(See Rule 8)

| | | |
|---|---|---|
| 1. Place of Publication | : | Bangalore |
| 2. Periodicity of Publication | : | Monthly |
| 3. Printer's Name | : | V.R. Bharath |
| Nationality | : | Indian |
| Address | : | Ravi Graphics<br>49, 4th Cross, SSI Area<br>Rajajinagar<br>Bangalore - 560010 |
| 4. Publisher's Name | : | Koravanji Aparanji Trust |
| Address | : | No 36, 6th Main Road<br>Malleswaram<br>Bangalore - 560003 |
| 5. Editor's Name | : | M. Shiva Kumar |
| Nationality | : | Indian |
| Address | : | 36, 6th Main Road<br>Malleswaram<br>Bangalore - 560003 |
| 6. Name and Address of Individuals who own The Paper | : | Koravanji Aparanji Trust<br>36, 6th Main Road<br>Malleswaram<br>Bangalore - 560003 |

I Ullas Rayasam hereby declare that the particulars given above are true to the best of my knowledge and belief.

Ullas Rayasam
Managing Trustee
(Signature of the Publisher)

Date : 1-3-2026
Place : Bangalore